ಗುರುವಾರ, ಮೇ 13, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 133 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಚಿಕ್ಕ ವಯಸ್ಸಿನಲ್ಲೇ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಕೆಎಎಸ್ ಅಧಿಕಾರಿ ತಿರುಪತಿ ಪಾಟೀಲ ತಮ್ಮ ಅನುಭವದ ಜೊತೆ ಸ್ಪರ್ಧಾರ್ಥಿಗಳಿಗೆ ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ.



ಆಳ-ಅಗಲ
ಮೂರು ತಿಂಗಳ ಬಳಿಕ ಮೂರನೇ ಅಲೆ

ಇಸ್ರೇಲ್‌ನಲ್ಲಿ ರಾಕೆಟ್ ದಾಳಿ: ಕೇರಳ ಮೂಲದ ಮಹಿಳೆ ಸಾವು 5
‘ಬ್ಲ್ಯಾಕ್ ಫಂಗಸ್: 2 ದಿನಗಳಲ್ಲಿ ವರದಿ’ 4

ಸೆನ್ಸೆಕ್ಸ್	ನಿಫ್ಟಿ	₹/$
48,681	14,697	73.42

ಹಂಚಿಕೆಯಷ್ಟು ಪೂರೈಸದ ಕೇಂದ್ರ: ನಮ್ಮಲ್ಲಿ ಲಸಿಕೆ ಇಲ್ಲ– ಮುಖ್ಯ ಕಾರ್ಯದರ್ಶಿ

ಲಸಿಕೆ: ಕೈ ಚೆಲ್ಲಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣ ಏರುಗತಿಯಲ್ಲಿ ಸಾಗುತ್ತಿರುವುದರಿಂದ ಭೀತಿಗೊಂಡಿರುವ ಜನರು ಲಸಿಕೆ ಹಾಕಿಸಿಕೊಳ್ಳಲು ಮುಗಿಬಿದ್ದಿದ್ದಾರೆ. ಆದರೆ, ರಾಜ್ಯದಲ್ಲಿ ಲಸಿಕೆ ಅಭಾವ ಸೃಷ್ಟಿಯಾಗಿದೆ. ಕರ್ನಾಟಕಕ್ಕೆ ನಿಗದಿಪಡಿಸಿದ ಪ್ರಮಾಣದಲ್ಲಿ ಕೇಂದ್ರ ಸರ್ಕಾರ ಪೂರೈಕೆ ಮಾಡದೇ ಇರುವುದರಿಂದ ರಾಜ್ಯ ಸರ್ಕಾರ ಕೈ ಚೆಲ್ಲಿ ಕುಳಿತುಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ‘ಲಸಿಕೆ ಬೇಡಿಕೆ ಕುರಿತ ಮಾಹಿತಿಯನ್ನು ಮಂಗಳವಾರವೇ (ಮೇ 11) ಕೇಂದ್ರ ಸರ್ಕಾರ ಗಮನಕ್ಕೆ ತಂದಿದ್ದೇವೆ. ಏನು ಮಾಡಬೇಕೆಂದು ಅವರೇ ಪರಿಹಾರ ಸೂಚಿಸಬೇಕು. ಯಾವಾಗ ಲಸಿಕೆ ಕೊಡಲು ಸಾಧ್ಯ ಎಂದು ನಾನು ಹೇಳಲು ಸಾಧ್ಯವಿಲ್ಲ. ಕೇಂದ್ರದಿಂದ ಪೂರೈಕೆ ಆಗಬೇಕು. ನಮ್ಮ ಕೈಯಲ್ಲಂತೂ ಲಸಿಕೆ ಇಲ್ಲ’ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

‘ಎರಡನೇ ಡೋಸ್ ಕೊಡಲು ಕೋವ್ಯಾಕ್ಸಿನ್ ಲಸಿಕೆ ಇಲ್ಲ. ಲಸಿಕೆ ಅಭಾವ ಪರಿಹರಿಸಲು ನಮ್ಮ ಕೈಯಲ್ಲಿ ಎಷ್ಟು ಸಾಧ್ಯವೊ ಆ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದೇವೆ’ ಎಂದರು.

‘45 ವರ್ಷ ದಾಟಿದವರಿಗೆ ಕೇಂದ್ರ ಸರ್ಕಾರವೇ ಉಚಿತವಾಗಿ ಲಸಿಕೆ ಪೂರೈಸುತ್ತಿದೆ. ಕೇಂದ್ರದಿಂದ ಪ್ರತಿ 15 ದಿನಗಳಿಗೊಮ್ಮೆ 15 ಲಕ್ಷ ಡೋಸ್ ಲಸಿಕೆ ಪೂರೈಕೆ ಆಗಬೇಕು. ಆದರೆ, ಕಳೆದ 12 ದಿನಗಳಲ್ಲಿ 8 ಲಕ್ಷ ಡೋಸ್ ಮಾತ್ರ ಪೂರೈಕೆ ಆಗಿದೆ. ಉಳಿದದ್ದು ಮುಂದಿನ ಮೂರು ದಿನಗಳಲ್ಲಿ ಪೂರೈಕೆಯಾಗುವ ನಿರೀಕ್ಷೆ ಇದೆ’ ಎಂದು ಹೇಳಿದರು.

‘45 ವರ್ಷಕ್ಕಿಂತ ಕೆಳಗಿನವರಿಗೆ ರಾಜ್ಯ ಸರ್ಕಾರದಿಂದ ಲಸಿಕೆ ಕೊಡಬೇಕಾಗಿದ್ದು, ಲಸಿಕೆ ನೀಡಲು ನಮಗೆ ಸಮಯ ಬೇಕಾಗುತ್ತದೆ. ಈ ಉದ್ದೇಶಕ್ಕೆ ನಾವು 3 ಕೋಟಿ ಡೋಸ್‌ಗೆ ಬೇಡಿಕೆ ಇಟ್ಟಿದ್ದೇವೆ. ಆದರೆ, ಅದರಲ್ಲಿ ಈವರೆಗೆ 7 ಲಕ್ಷ ಡೋಸ್ ಮಾತ್ರ ಬಂದಿದೆ. ಈ ವಯೋಮಾನದವರಿಗೆ ನೀಡಲು 6 ಕೋಟಿ ಡೋಸ್ ಬೇಕಾಗಿದೆ’ ಎಂದು ಅವರು ತಿಳಿಸಿದರು.

4B ಪುಟ ನೋಡಿ



ಕೋವಿಡ್–19 ಲಸಿಕೆ ಹಾಕಿಸಿಕೊಳ್ಳಲು ಬೆಂಗಳೂರಿನ ಮಲ್ಲತ್ತಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂದೆ ಜನರು ಪರಸ್ಪರ ಅಂತರ ಕಾಯ್ದುಕೊಳ್ಳದೆ ನಿಂತಿದ್ದರು
–ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

18ರಿಂದ 44: ಸದ್ಯಕ್ಕಿಲ್ಲ ಲಸಿಕೆ

18ರಿಂದ 44 ವರ್ಷ ವಯೋಮಾನದವರಿಗೆ ಲಸಿಕೆ ಹಾಕುವ ಅಭಿಯಾನವನ್ನು ಮೇ 14ರಿಂದ ತಾತ್ಕಾಲಿಕವಾಗಿ ರಾಜ್ಯ ಸರ್ಕಾರ ಸ್ಥಗಿತಗೊಳಿಸಲಿದೆ.

ಎಲ್ಲ ಸರ್ಕಾರಿ ಲಸಿಕಾ ಕೇಂದ್ರಗಳಿಗೆ ಈ ಆದೇಶ ಅನ್ವಯ ಆಗಲಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಈಗಾಗಲೇ ಕೇಂದ್ರ ಸರ್ಕಾರ ನೀಡಿದ ಮತ್ತು ರಾಜ್ಯ ಸರ್ಕಾರ ನೇರವಾಗಿ ಖರೀದಿಸಿದ ಲಸಿಕೆ ದಾಸ್ತಾನನ್ನು 45 ವರ್ಷ ದಾಟಿದವರಿಗೆ ಎರಡನೇ ಡೋಸ್‌ಗಾಗಿ ಬಳಸಲು ನಿರ್ಧರಿಸಲಾಗಿದೆ ಎಂದು ಇಲಾಖೆ ಹೇಳಿದೆ.

ಲಸಿಕೆ ರಫ್ತು: ಬಿಜೆಪಿ ಸಮರ್ಥನೆ

ನವದೆಹಲಿ (ಪಿಟಿಐ): ‘ಕೋವಿಡ್ ಲಸಿಕೆ ತಯಾರಿಸುತ್ತಿರುವ ದೇಶದ ಎರಡು ಕಂಪನಿಗಳು ವಿದೇಶಗಳಿಗೆ ರಫ್ತು ಮಾಡಿರುವ ಲಸಿಕೆಯಲ್ಲಿ ಶೇ 84ಕ್ಕೂ ಹೆಚ್ಚಿನ ಭಾಗವನ್ನು ಅವುಗಳು ಮಾಡಿಕೊಂಡ ವಾಣಿಜ್ಯ ಒಪ್ಪಂದದ ಬಾಧ್ಯತೆಯ ಭಾಗವಾಗಿ ಕಳುಹಿಸಲಾಗಿದೆ. ಕಾಂಗ್ರೆಸ್ ಹಾಗೂ ಎಎಪಿ ಮುಖಂಡರು ಈ ಬಗ್ಗೆ ಜನರಲ್ಲಿ ತಪ್ಪು ಭಾವನೆ ಮೂಡಿಸುತ್ತಿದ್ದಾರೆ’ ಎಂದು ಬಿಜೆಪಿ ಹೇಳಿದೆ.

‘ವಿವಿಧ ದೇಶಗಳಿಗೆ ನೆರವಿನ ರೂಪದಲ್ಲಿ ಭಾರತವು 1.07 ಕೋಟಿ ಡೋಸ್ ಲಸಿಕೆಯನ್ನು ಕಳುಹಿಸಿದೆ. ಅದರಲ್ಲಿ 78.5 ಲಕ್ಷ ಡೋಸ್ ಲಸಿಕೆಯನ್ನು ನೆರೆಯ ರಾಷ್ಟ್ರಗಳಿಗೆ ನೀಡಲಾಗಿದೆ. ಸುರಕ್ಷಿತವಾದ ನೆರೆಹೊರೆಯನ್ನು ಹೊಂದುವುದು ಭಾರತದ ದೃಷ್ಟಿಯಿಂದಲೂ ಒಳ್ಳೆಯದೇ’ ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಹೇಳಿದ್ದಾರೆ.

‘ಎರಡು ಲಕ್ಷಕ್ಕೂ ಅಧಿಕ ಡೋಸ್‌ಗಳನ್ನು ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಗೆ ಕಳುಹಿಸಲಾಗಿದೆ. ಆ ಪಡೆಯಲ್ಲಿ ಭಾರತದ 6,600 ಯೋಧರಿದ್ದಾರೆ’ ಎಂದು ಪಾತ್ರಾ ತಿಳಿಸಿದರು.

4B ಪುಟ ನೋಡಿ

‘ಆಮ್ಲಜನಕ ಕೊರತೆ ದುರಂತಕ್ಕೆ ಕಾರಣ’

ಚಾಮರಾಜನಗರ: ಹೈಕೋರ್ಟ್ ನೇಮಿಸಿದ್ದ ಮೂವರು ಸದಸ್ಯರ ಸಮಿತಿ ವರದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ಸಿಐಎಂಎಸ್) ಮೇ 2 ರ ಮಧ್ಯರಾತ್ರಿ ಸಂಭವಿಸಿದ 24 ಜನರ ಸಾವಿಗೆ ಆಮ್ಲಜನಕ ಕೊರತೆಯೇ ಕಾರಣ ಎಂದು ಹೈಕೋರ್ಟ್ ನೇಮಿಸಿದ್ದ ಮೂವರು ಸದಸ್ಯರ ಸಮಿತಿ ವರದಿ ಸಲ್ಲಿಸಿದೆ.

‘ಮೇ 2ರಂದು ರಾತ್ರಿ 11 ರಿಂದ ಮೇ 3ರ ಸಂಜೆ ತನಕ ಆಸ್ಪತ್ರೆಯಲ್ಲಿ ಆಮ್ಲಜನಕವೇ ಲಭ್ಯವಿರಲಿಲ್ಲ’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎನ್. ವೇಣುಗೋಪಾಲಗೌಡ ನೇತೃತ್ವದ ಕಾನೂನು ಸೇವೆಗಳ ಪ್ರಾಧಿಕಾರದ ಸಮಿತಿ ಅಭಿಪ್ರಾಯಪಟ್ಟಿದೆ. ಮೃತಪಟ್ಟವರ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

4B ಪುಟ ನೋಡಿ

ಮೈಸೂರು ಜಿಲ್ಲಾಧಿಕಾರಿಗೆ ಕ್ಲೀನ್ ಚಿಟ್

‘ಸಂದರ್ಭಕ್ಕೆ ತಕ್ಕಂತೆ ನಾಯಕತ್ವ ಮತ್ತು ಕ್ರಿಯಾಶೀಲತೆ ತೋರಿಸುವಲ್ಲಿ ಚಾಮರಾಜನಗರ ಜಿಲ್ಲಾಧಿಕಾರಿ ವಿಫಲವಾಗಿದ್ದಾರೆ. ಚಾಮರಾಜನಗರಕ್ಕೆ ಆಮ್ಲಜನಕ ಸಾಗಿಸಲು ಮೈಸೂರು ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ತಡೆ ಒಡ್ಡಿದ್ದಾರೆ ಎಂಬುದಕ್ಕೆ ಯಾವುದೇ ಸಾಕ್ಷ್ಯ ಇಲ್ಲ’ ಎಂದು ವರದಿ ಹೇಳಿದೆ

ಮೈಸೂರು ಜಿಲ್ಲಾಧಿಕಾರಿ ವಿರುದ್ಧ ಆರೋಪ ಸಾಬೀತುಪಡಿಸುವ ದಾಖಲೆಗಳಿಲ್ಲ. ಚಾಮರಾಜನಗರ ಜಿಲ್ಲೆ ಸೇರಿ ಯಾವುದೇ ಜಿಲ್ಲೆಗೆ ಆಮ್ಲಜನಕ ಪೂರೈಸಲು ತಡೆದಿದ್ದಾರೆ ಎಂದು ಹೇಳಲು ಆಗುವುದಿಲ್ಲ ಎಂದು ತಿಳಿಸಿದೆ.

ಸಿಇಟಿ: ಆ. 28, 29ಕ್ಕೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ವರ್ಷದ (2020–2021) ವೃತ್ತಿಪರ ಕೋರ್ಸ್‌ಗಳ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಇಟಿ) ಆಗಸ್ಟ್ 28 ಮತ್ತು 29ಕ್ಕೆ ಮುಂದೂಡಲಾಗಿದೆ. ಕನ್ನಡ ಭಾಷಾ ಪರೀಕ್ಷೆ 30ಕ್ಕೆ ನಡೆಯಲಿದೆ.

‘ಕೋವಿಡ್ ಕಾರಣಕ್ಕೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಮುಂದೂಡಿದ ಕಾರಣ ಸಿಇಟಿ ಕೂಡ ಮುಂದೂಡಲಾಗಿದೆ. ಶೀಘ್ರವೇ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

ಈ ಮೊದಲು ಪ್ರಕಟಿಸಿದ್ದ ವೇಳಾಪಟ್ಟಿಯಂತೆ ಜುಲೈ 7 ಮತ್ತು 8ರಂದು ಸಿಇಟಿ, 9ರಂದು ಕನ್ನಡ ಪರೀಕ್ಷೆ ನಡೆಯಬೇಕಾಗಿತ್ತು. ಹೆಚ್ಚಿನ ವಿವರಗಳಿಗೆ https://cetonline.karnataka.gov.in/kea/ ಭೇಟಿ ನೀಡಬಹುದು.

ಎಂಜಿನಿಯರಿಂಗ್, ಕೃಷಿ ವಿಜ್ಞಾನ, ಪಶುವೈದ್ಯ, ಯೋಗ ಮತ್ತು ನ್ಯಾಚುರೋಪಥಿ, ಬಿ ಫಾರ್ಮ, ಫಾರ್ಮ-ಡಿ ಮತ್ತಿತರ ವೃತ್ತಿಪರ ಕೋರ್ಸುಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸಿಇಟಿ ನಡೆಸಲಿದೆ. ಹೊರನಾಡು ಹಾಗೂ ಗಡಿನಾಡು ಕನ್ನಡಿಗ ಅಭ್ಯರ್ಥಿಗಳು ಕನ್ನಡ ಭಾಷಾ ಪರೀಕ್ಷೆ ಬರೆಯಲಿದ್ದಾರೆ.

ಭೋಪಾಲ್, ಇಂದೋರ್‌ನಲ್ಲಿ ₹ 100ರ ಗಡಿ ದಾಟಿದ ಪೆಟ್ರೋಲ್ 08

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಆಟ-ನೋಟ
ವನಿತಾ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-9

ಚಿನಕುರಳಿ
ಪ್ರಕಾಶ್ ಶೆಟ್ಟಿ



ಪಿಎಚ್‌ಸಿಗಳ ಎದುರು 'ನೋ ಸ್ಟಾಕ್' ಫಲಕ ● ಎರಡನೇ ಡೋಸ್‌ಗಾಗಿ ಸಾರ್ವಜನಿಕರ ಪರದಾಟ

ದಿನವಿಡೀ ನಿಂತರೂ ಸಿಗಲಿಲ್ಲ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಲಸಿಕೆಯ ಕೊರತೆ ಹೆಚ್ಚಾಗಿದೆ. ಸರ್ಕಾರಿ ಆಸ್ಪತ್ರೆಗಳ ಎದುರು, ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂದೆ ದಿನವಿಡೀ ಸರದಿಯಲ್ಲಿ ನಿಂತರೂ ಲಸಿಕೆ ಸಿಗುತ್ತಿಲ್ಲ.

'ಬೆಳಿಗ್ಗೆ 6ಗಂಟೆಗೇ ಲಸಿಕೆಗಾಗಿ ನಿಂತಿದ್ದೆ. ಕೊವ್ಯಾಕ್ಸಿನ್ ಎರಡನೇ ಡೋಸ್ ಇಲ್ಲ ಎಂದು ಮಧ್ಯಾಹ್ನ ಹೇಳಿದರು. 'ನೋ ಸ್ಟಾಕ್' ಎಂದು ಫಲಕ ಹಾಕಿದ್ದರೂ ನಾವು ವಾಪಸ್ ಮನೆಗಾದರೂ ಹೋಗುತ್ತಿದ್ದೆವು' ಎಂದು ಲಸಿಕೆ ಹಾಕಿಸಿಕೊಳ್ಳಲು ಯಲಹಂಕ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದಿದ್ದ ನಾಗರಾಜ್ ದೂರಿದರು.

'ಎರಡನೇ ಡೋಸ್ ಹಾಕಲಾಗುವುದಿಲ್ಲ ಎಂದ ಮೇಲೆ ಮೊದಲ ಡೋಸ್ ಆದರೂ ಏಕೆ ಕೊಡಬೇಕಿತ್ತು. ಈಗ ಎರಡನೇ ಡೋಸ್ ಇಂಜೆಕ್ಷನ್ ಸಕಾಲದಲ್ಲಿ ತೆಗೆದುಕೊಳ್ಳದಿದ್ದರೆ ಮೊದಲನೇ ಡೋಸ್ ಕೂಡ ವ್ಯರ್ಥವಾದಂತೆ ಅಲ್ಲವೇ' ಎಂದು ಅವರು ಪ್ರಶ್ನಿಸಿದರು.

'ವಸಂತನಗರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಶೇಷಾದ್ರಿಪುರದ ಪಿಎಚ್‌ಸಿ, ಕೆ.ಸಿ. ಜನರಲ್ ಆಸ್ಪತ್ರೆ ಎಲ್ಲ ಓಡಾಡಿದರೂ ಲಸಿಕೆ ಸಿಗಲಿಲ್ಲ. ಮಗಳಿಗೆ ಲಸಿಕೆ ಹಾಕಿಸಲೂ ಸಾಧ್ಯವಾಗಲಿಲ್ಲ. 45 ವರ್ಷ ಮೇಲ್ಪಟ್ಟವರಿಗೇ ಇವರಿಂದ ಲಸಿಕೆ ನೀಡಲು ಸಾಧ್ಯವಾಗುತ್ತಿಲ್ಲ. ಇನ್ನು 18 ವರ್ಷದವರಿಗೆ ಹೇಗೆ ನೀಡುತ್ತಾರೆ' ಎಂದು ರಮೇಶ್ ಎಂಬುವರು ದೂರಿದರು.

'ಎರಡನೇ ಡೋಸ್ ಕೊಡುವುದಕ್ಕೇ ಸರಿಯಾಗಿ ಇವರಿಂದ ಸಾಧ್ಯವಾಗುತ್ತಿಲ್ಲ. ಒಂದು ಸ್ಪಷ್ಟ ಯೋಜನೆಯೂ ಇವರ ಬಳಿ ಇಲ್ಲ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

'ಸರದಿಯಲ್ಲಿ ನಿಂತರೆ ನಿಂತುಕೊಳ್ಳಲಿ ನಮಗೇನು ಎನ್ನುವಂತೆ ಸಿಬ್ಬಂದಿ ಇರುತ್ತಾರೆ. ಲಸಿಕೆ ಇಲ್ಲ ಎಂಬ ಮಾಹಿತಿಯನ್ನೂ ಸರಿಯಾಗಿ ನೀಡುವುದಿಲ್ಲ. ಎಲ್ಲ ಕೆಲಸ ಬಿಟ್ಟು ಇಲ್ಲಿಗೆ ಬಂದಿರುತ್ತೇವೆ. ಆನ್‌ಲೈನ್‌ನಲ್ಲಿ ಪರೀಕ್ಷೆ ಮಾಡಿದರೂ ಸರಿಯಾಗಿ ಮಾಹಿತಿ ಇರುವುದಿಲ್ಲ. ಸರ್ಕಾರ ಸರಿಯಾಗಿ ಸಿದ್ಧತೆ ಮಾಡಿಕೊಳ್ಳದೆ ಸಾರ್ವಜನಿರಿಗೆ ಹೀಗೆ ಅಲೆದಾಡಿಸುವುದು ಸರಿಯಲ್ಲ' ಎಂದೂ ಶೈಲಜಾ ಎಂಬುವರು ಅಸಮಾಧಾನ ವ್ಯಕ್ತಪಡಿಸಿದರು.

'ಬೆಳಿಗ್ಗೆ 6ಕ್ಕೇ ಬಂದು ನಿಂತಿದ್ದೇವೆ. ಟೋಕನ್ ಕೊಡುವ ವ್ಯವಸ್ಥೆಯನ್ನಾದರೂ ಮಾಡಿದರೆ ಅನುಕೂಲವಾಗುತ್ತದೆ. ಅವರು ಕೂಗಿದಾಗ ಬಂದು ಲಸಿಕೆ ಹಾಕಿಸಿಕೊಳ್ಳಬಹುದು. ಗಂಟೆಗಟ್ಟಲೇ ಸರದಿಯಲ್ಲಿ ನಿಲ್ಲಲು ಕಷ್ಟವಾಗುತ್ತದೆ' ಎಂದು ಹಿರಿಯ ನಾಗರಿಕರೊಬ್ಬರು ಹೇಳಿದರು.

'ಬಿಬಿಎಂಪಿಯಿಂದ ಎಷ್ಟು ಲಸಿಕೆ ಪೂರೈಕೆಯಾಗಿತ್ತೋ ಎಲ್ಲವನ್ನೂ ನೀಡಲಾಗಿದೆ. ನಾಳೆಯಿಂದ ಲಸಿಕೆ ಹಾಕಲು ಬೇಕಾದ ಸಂಗ್ರಹ ಇಲ್ಲ. ಮೊದಲು ಬಂದವರಿಗೆ ಮತ್ತು 45 ವರ್ಷ ಮೇಲ್ಪಟ್ಟವರಿಗೆ ಆದ್ಯತೆ ನೀಡಿದ್ದೇವೆ. ಅದರಲ್ಲಿಯೂ ಎರಡನೇ ಡೋಸ್ ಪಡೆಯಲು ಬಂದವರಿಗೆ ಆದ್ಯತೆ ನೀಡಲಾಯಿತು' ಎಂದು ವಸಂತನಗರದ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಯೊಬ್ಬರು ಹೇಳಿದರು.

'ಮೊದಲ ಡೋಸ್ ಹಾಕಲು ಲಸಿಕೆ ಇಲ್ಲ' ಎಂಬ ಫಲಕ ಹಲವು ಪ್ರಾಥಮಿಕ ಕೇಂದ್ರಗಳ ಎದುರು ಸಾಮಾನ್ಯವಾಗಿತ್ತು.





ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಯ ಆರೋಗ್ಯ ಕೇಂದ್ರದ ಮುಂದೆ ಬುಧವಾರ ವೈಯಕ್ತಿಕ ಅಂತರ ಮರೆತು ಸೇರಿದ್ದ ಜನ. (ಎಡ ಚಿತ್ರ) ನಗರದ ದಾಸಪ್ಪ ಆಸ್ಪತ್ರೆಯಲ್ಲಿ ಮೊದಲ ಡೋಸ್ ಲಸಿಕೆ ಲಭ್ಯವಿಲ್ಲ ಎಂಬ ಫಲಕವನ್ನು ಬುಧವಾರ ಹಾಕಲಾಗಿತ್ತು – ಪ್ರಜಾವಾಣಿ ಚಿತ್ರಗಳು : ಅನೂಪ್ ರಾಘ.ಟಿ.

ಲಸಿಕೆ ಅಭಿಯಾನಕ್ಕೆ ಪಕ್ಷದ ಹೆಸರು: ನಾಗರಿಕರ ಆಕ್ಷೇಪ

'ಕೋವಿಡ್ ಲಸಿಕೆ ವಿತರಿಸುವ ಅಭಿಯಾನಕ್ಕೆ ಬಿಜೆಪಿಯ ಬ್ಯಾನರ್ ಹಾಕಿ ಪ್ರಚಾರ ಪಡೆದಿರುವುದು ಸರಿಯಲ್ಲ' ಎಂದು ನಾಗರಿಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ದಕ್ಷಿಣ ಬೆಂಗಳೂರು ತಾಲ್ಲೂಕಿನ ಬೇಗೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಎದುರು, ''ಭಾರತೀಯ ಜನತಾ ಪಾರ್ಟಿ ಕೊರೊನಾ ಲಸಿಕಾ ಅಭಿಯಾನ' ಎಂದು ಹಾಕಲಾಗಿದೆ. ಸರ್ಕಾರಿ ಕಾರ್ಯಕ್ರಮವನ್ನು ಪಕ್ಷದ ಕಾರ್ಯಕ್ರಮ ಎಂದು ಬಿಂಬಿಸಿಕೊಳ್ಳುವುದು ಸರಿಯಲ್ಲ' ಎಂದು ಬೇಗೂರಿನ ನಾಗರಾಜ ಎಂಬುವರು ಅಸಮಾಧಾನ ವ್ಯಕ್ತಪಡಿಸಿದರು.

'ಬ್ಯಾನರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭಾವಚಿತ್ರದ ಜೊತೆಗೆ, ಬಿಜೆಪಿಯ ರಾಷ್ಟ್ರೀಯ ಮತ್ತು ರಾಜ್ಯ ಅಧ್ಯಕ್ಷರಾದ ಜೆ.ಪಿ. ನಡ್ಡಾ ಹಾಗೂ ನಳಿನ್ ಕುಮಾರ್ ಕಟೀಲ್ ಅವರ ಭಾವಚಿತ್ರವನ್ನೂ ಹಾಕಿರುವುದರ ಔಚಿತ್ಯವೇನು' ಎಂದೂ ಅವರು ಪ್ರಶ್ನಿಸಿದ್ದಾರೆ.

'ಅವಧಿ ಮೀರಿದರೆ ಮುಂದೇನು ?'


'ಬೆಳಿಗ್ಗೆ 4.30ಕ್ಕೇ ಸರದಿಯಲ್ಲಿ ನಿಂತಿದ್ದೇನೆ. ತಂದೆಗೆ ಎರಡನೇ ಡೋಸ್ ಕೊವ್ಯಾಕ್ಸಿನ್ ಲಸಿಕೆ ಹಾಕಿಸಬೇಕು. ಅವರು ಮೊದಲು ಡೋಸ್ ತೆಗೆದುಕೊಂಡು 50 ದಿನಗಳಾದವು. ಈಗ ಎರಡನೇ ಡೋಸ್ ಸಿಗುತ್ತಿಲ್ಲ' ಎಂದು ಯಲಹಂಕದ ಯುವಕರೊಬ್ಬರು ಹೇಳಿದರು.

'ಮೊದಲ ಡೋಸ್‌ನ ಅವಧಿ ಮೀರಿದರೆ ಮತ್ತೆ ಮೊದಲ ಡೋಸ್ ಹಾಕಿಸಿಕೊಳ್ಳಬೇಕಾ ಅಥವಾ ಎರಡನೇ ಡೋಸ್‌ವರೆಗೂ ಕಾಯಬೇಕಾ ಎಂಬ ಬಗ್ಗೆ ವೈದ್ಯಕೀಯ ಸಿಬ್ಬಂದಿ ಬಳಿಯೂ ಮಾಹಿತಿ ಇಲ್ಲ. ಮೊದಲ ಡೋಸ್ ವ್ಯರ್ಥವಾದರೆ ಏನು ಮಾಡುವುದು' ಎಂದೂ ಅವರು ಪ್ರಶ್ನಿಸಿದರು.

ಸುದ್ದಿ 2 ನಿಮಿಷ

ಸ್ಕೌಟ್ಸ್ ತರಬೇತಿ ಸಂಸ್ಥೆ ಆರೈಕೆ ಕೇಂದ್ರಗಳಾಗಲಿ: ಸಿಂಧ್ಯ ಸಲಹೆ

ಬೆಂಗಳೂರು: 'ರಾಜ್ಯದಲ್ಲಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ತರಬೇತಿ ಕೇಂದ್ರಗಳನ್ನು ಕೋವಿಡ್ ಆರೈಕೆ ಕೇಂದ್ರಗಳನ್ನಾಗಿ ಮಾರ್ಪಡಿಸಿ ಚಿಕಿತ್ಸಾ ಕೇಂದ್ರಗಳಂತೆ ಬಳಸಿಕೊಳ್ಳಬಹುದು' ಎಂದು ಸಂಸ್ಥೆಯ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.



ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ಪತ್ರ ಬರೆದಿರುವ ಅವರು, 'ರಾಜ್ಯದ ಕೆಲವು ಜಿಲ್ಲಾ ಕೇಂದ್ರಗಳಲ್ಲಿ ಸಂಸ್ಥೆಯ ತರಬೇತಿ ಕೇಂದ್ರಗಳಿವೆ. ಈ ಕೇಂದ್ರಗಳನ್ನು ಕೋವಿಡ್ ನಿರ್ವಹಣೆಗೆ ಬಳಸಿಕೊಳ್ಳುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದೂ ಅವರು ಕೋರಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ, ದಾವಣಗೆರೆ ಜಿಲ್ಲೆಯ ಕೊಂಡಜ್ಜಿ, ಧಾರವಾಡ, ವಿಜಯಪುರ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಪಿಲಿಕುಳದಲ್ಲಿ ಸಂಸ್ಥೆಯ ತರಬೇತಿ ಕೇಂದ್ರಗಳಿವೆ.

ಕೋವಿಡ್: ₹ 50 ಲಕ್ಷ ದೇಣಿಗೆ ನೀಡಿದ ಜೋಯಾಲುಕ್ಕಾಸ್ ಕಂಪನಿ

ಬೆಂಗಳೂರು: ಕೋವಿಡ್–19 ವಿರುದ್ಧದ ಹೋರಾಟದಲ್ಲಿ ಕೈಜೋಡಿಸಿರುವ ಚಿನ್ನಾಭರಣ ಮಾರಾಟ ಕಂಪನಿಯಾದ ಜೋಯಾಲುಕ್ಕಾಸ್, ಕೇರಳದ ತ್ರಿಶೂರ್‌ನ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿನ ಸೌಲಭ್ಯ ಹೆಚ್ಚಿಸಲು ₹ 50 ಲಕ್ಷ ದೇಣಿಗೆ ನೀಡಿದೆ.

ತ್ರಿಶೂರ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಿಗೆ ಈ ಮೊತ್ತವನ್ನು ಜೋಯಾಲುಕ್ಕಾಸ್ ಕಂಪನಿಯ ಸಿಎಂಡಿ ಜಾಯ್ ಅಲುಕ್ಕಾಸ್ ಅವರು ಹಸ್ತಾಂತರಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಂಕಷ್ಟದಲ್ಲಿ ಇರುವ ರೋಗಿಗಳಿಗೆ ನೆರವಾಗಲು ಒಟ್ಟು ₹ 15 ಕೋಟಿ ಒದಗಿಸುವುದಾಗಿಯೂ ಜಾಯ್ ಅಲುಕ್ಕಾಸ್ ಅವರು ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ಸಂಕ್ಷಿಪ್ತ ಸುದ್ದಿ

'ಟೀಂ ಹಸಿರು' ತಂಡದಿಂದ ನೆರವು

ಬೆಂಗಳೂರು: ಬೆಂಗಳೂರು ದಕ್ಷಿಣ ವಲಯದಲ್ಲಿ 'ಟೀಂ ಹಸಿರು' ತಂಡ ಕೋವಿಡ್ ನಿರ್ವಹಣೆಗೆ ತನ್ನದೇ ಆದ ರೀತಿಯಲ್ಲಿ ಶ್ರಮಿಸುತ್ತಿದೆ.

ಕೋವಿಡ್ ಸಂಕಷ್ಟದಿಂದ ತೊಂದರೆಯಲ್ಲಿ ಇರುವವರಿಗೆ ಪಡಿತರ ಮತ್ತು ಔಷಧ ಪದಾರ್ಥ ನೀಡುವುದರ ಜೊತೆಗೆ, ಆರೋಗ್ಯದ ಬಗ್ಗೆ ಮಾರ್ಗದರ್ಶನ ನೀಡುವ ಕೆಲಸ ಮಾಡುತ್ತಿದೆ.

'ಅಗತ್ಯ ಇರುವವರು ನೇರವಾಗಿ ತಂಡದ ಸಹಾಯವಾಣಿಗೆ ಕರೆಮಾಡಿ, ನೆರವನ್ನು ಕೋರಬಹುದು' ಎಂದು ತಂಡ ಹೇಳಿದೆ. ಬೆಂಗಳೂರು ದಕ್ಷಿಣ ವಲಯ ಸಹಾಯವಾಣಿ ಸಂಖ್ಯೆ– 080 4716 1882.

'ಕೊರೊನಾ ಸೇನಾನಿಗಳಿಗೆ ಹಾಸಿಗೆ ಮೀಸಲಿರಿಸಿ'

ಬೆಂಗಳೂರು: ಕೋವಿಡ್ ನಿರ್ವಹಣೆಯಲ್ಲಿ ಮುಂಚೂಣಿಯಲ್ಲಿದ್ದು ಕೆಲಸ ಮಾಡುತ್ತಿರುವ ಸರ್ಕಾರಿ, ಸರ್ಕಾರೇತರ ಹಾಗೂ ಮಾಧ್ಯಮದ ಕೋವಿಡ್ ಸೇನಾನಿಗಳಿಗೆ ಆಸ್ಪತ್ರೆಯಲ್ಲೂ ಹಾಸಿಗೆ ಮೀಸಲಿರಿಸಬೇಕು ಮತ್ತು ತುರ್ತಾಗಿ ಲಸಿಕೆ ವ್ಯವಸ್ಥೆ ಮಾಡಿಸಬೇಕು ಎಂದು ಕೋವಿಡ್ ನಾಗರಿಕ ಸೇವಾಕೇಂದ್ರದ ನಿರ್ದೇಶಕ ಗಿರೀಶ ಮಟ್ಟೆಣ್ಣವರ ಸರ್ಕಾರವನ್ನು ಕೋರಿದ್ದಾರೆ.

'ಕೋವಿಡ್ ವಿರುದ್ಧದ ಕಾರ್ಯಾಚರಣೆಯಲ್ಲಿ ಮುಂಚೂಣಿಯಲ್ಲಿರುವ ಕೊರೊನಾ ಸೇನಾನಿಗಳು ಬಹುಬೇಗ ಸೋಂಕಿಗೆ ತುತ್ತಾಗುತ್ತಿದ್ದಾರೆ. ಅವರ ಆತ್ಮವಿಶ್ವಾಸ ಹೆಚ್ಚಿಸಿ, ಅವರಿಗೆ ಮತ್ತು ಅವರ ಪರಿವಾರದ ಸದಸ್ಯರಿಗೆ ಸುರಕ್ಷತೆ ನೀಡುವುದು ಕೋವಿಡ್ ಕಾರ್ಯಾಚರಣೆಯ ಆದ್ಯ ಕರ್ತವ್ಯ' ಎಂದೂ ಅವರು ಹೇಳಿದ್ದಾರೆ.

'ನಾಯಕರ ಹೆಸರಲ್ಲಿ ಹಾದಿ ತಪ್ಪಿಸುವ ಸಂದೇಶ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸೋಂಕಿತರು ಹಾಸಿಗೆ, ಆಮ್ಲಜನಕ ಸಿಗದೇ ಕಂಗಾಲಾಗಿರುವ ಮಧ್ಯೆಯೇ ಕೆಲವು ಕಿಡಿಗೇಡಿಗಳು ಸಾಮಾಜಿಕ ಜಾಲತಾಣದಲ್ಲಿ ರಾಜಕಾರಣಿಗಳ ಹೆಸರಿನಲ್ಲಿ ನಕಲಿ ಸಂದೇಶಗಳನ್ನು ಹರಿಬಿಡುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿವೆ.

ಬೆಂಗಳೂರಿನಲ್ಲಿ ಸಂಸದ ತೇಜಸ್ವಿ ಸೂರ್ಯ, ಸಚಿವರಾದ ಬಸವರಾಜ ಬೊಮ್ಮಾಯಿ, ಆರ್.ಅಶೋಕ, ಎಸ್.ಟಿ.ಸೋಮಶೇಖರ್ ಅವರು ಸೋಂಕಿತರಿಗೆ ಹಾಸಿಗೆ ಮತ್ತು ಆಕ್ಸಿಜನ್ ವ್ಯವಸ್ಥೆ ಮಾಡಿದ್ದಾರೆ. ಸಂಕಷ್ಟದಲ್ಲಿರುವವರು ಈ ದೂರವಾಣಿ ಸಂಖ್ಯೆಗಳಿಗೆ ಸಂಪರ್ಕಿಸಬಹುದು ಎಂದು ಸಂದೇಶಗಳನ್ನು ರವಾನೆ ಮಾಡುತ್ತಿದ್ದಾರೆ. ಅವರು ನಮೂದಿಸುವ ದೂರವಾಣಿ ಸಂಖ್ಯೆ ನಕಲಿ.

ಹಾಸಿಗೆ ಸಿಗದೇ ಪರಿತಪಿಸುವ ಸೋಂಕಿತರ ಕುಟುಂಬದವರು ಈ ದೂರವಾಣಿ ಸಂಖ್ಯೆಗಳಿಗೆ ನಿರಂತರ ಕರೆ ಮಾಡಿ, ಯಾರು ಉತ್ತರಿಸದೇ ಇದ್ದಾಗ ಅಥವಾ ಸಂಖ್ಯೆಯು ಚಾಲ್ತಿಯಲ್ಲಿ ಇಲ್ಲ ಎಂದು ಹೇಳಿದಾಗ, ನಿರಾಸೆಗೆ ಒಳಗಾಗುವ ಸಾಕಷ್ಟು ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿವೆ.

ಹಿರಿಯ ಕಲಾವಿದ ಮತ್ತು ಕರ್ನಾಟಕ ಚಿತ್ರಕಲಾ ಅಕಾಡೆಮಿಯ ಮಾಜಿ ಸದಸ್ಯ ಪ.ಸ.ಕುಮಾರ್ ಅವರ ಸಹೋದರಿಯ ಮನೆಯ ಮೂವರು ಕೋವಿಡ್ ಸೋಂಕಿಗೆ ಒಳಗಾಗಿದ್ದರು ಮತ್ತು ಗಂಭೀರ ಸ್ಥಿತಿಯಲ್ಲಿದ್ದರು. ಆಸ್ಪತ್ರೆಗಳಲ್ಲಿ ಹಾಸಿಗೆಗೆ ಇನ್ನಿಲ್ಲದಂತೆ ಪ್ರಯತ್ನ ನಡೆಸಿದ್ದರು.

'ಇದೇ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣದಲ್ಲಿ ಬಂದಿದ್ದ ನೆರವಿನ ಸಂದೇಶ ನೋಡಿ ಆ ದೂರವಾಣಿಗೆ ಕರೆ ಮಾಡಿದೆವು. ಆದರೆ, ದೂರವಾಣಿ ಚಾಲ್ತಿಯಲ್ಲಿಲ್ಲ ಎಂಬ ಸಂದೇಶ ಬರುತ್ತಿತ್ತು. ಒಂದು ಕಡೆ ಹಾಸಿಗೆ ಸಿಗದೇ ಸಂಕಟಪಡುತ್ತಿದ್ದರೆ, ಮತ್ತೊಂದು ಕಡೆ ಇಂತಹ ಕುಹಕಿಗಳ ಆಟದಿಂದ ಬೇಸತ್ತು ಹೋಯಿತು' ಎಂದು ಅವರು 'ಪ್ರಜಾವಾಣಿ'ಗೆ ಹೇಳಿದರು.

ಸಂಸದ ತೇಜಸ್ವಿ ಸೂರ್ಯ ಹೆಸರಿನಲ್ಲಿದ್ದ ಸಂದೇಶದ ಬಗ್ಗೆ ಅವರ ಕಚೇರಿಯ ಮೂಲಗಳನ್ನು ಪ್ರಶ್ನಿಸಿದಾಗ, 'ಅಂತಹ ಯಾವುದೇ ಸಂದೇಶವನ್ನು ಕಳುಹಿಸಿಲ್ಲ. ಅದು ನಕಲಿಯಾಗಿದ್ದು, ಬೆಡ್ ಬ್ಲಾಕಿಂಗ್ ಹಗರಣ ಬಯಲಿಗೆ ತಂದ ಬಳಿಕ ಕಿಡಿಗೇಡಿಗಳು ಇಂತಹ ಸಂದೇಶಗಳನ್ನು ತೇಲಿ ಬಿಡುತ್ತಿದ್ದಾರೆ' ಎಂದು ಹೇಳಿದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್.ಅಶೋಕ ಅವರ ಹೆಸರಿನಲ್ಲೂ ಇಂತಹ ಸಂದೇಶಗಳನ್ನು ಸೃಷ್ಟಿಸಿ ಜಾಲತಾಣಗಳಲ್ಲಿ ಹರಿಬಿಡಲಾಗಿದೆ. ಸೋಂಕಿತರ ಸಂಬಂಧಿಗಳು ಈ ದೂರವಾಣಿಗಳಿಗೆ ಕರೆ ಮಾಡಿ ಬೇಸ್ತು ಬಿದ್ದಿದ್ದಾರೆ.

'ಸಾಮಾಜಿಕ ಜಾಲತಾಣಗಳಲ್ಲಿ ಈ ರೀತಿ ಬರುವ ಸಂದೇಶಗಳನ್ನು ನಂಬಬಾರದು. ಯಾರಾದರೂ ಕೊರೊನಾ ಸೋಂಕಿತರಿಗೆ ಸಹಾಯ ಮಾಡುವ ನೆಪ ಹೇಳಿ ದೇಣಿಗೆ ಕೇಳಿದರೆ, ಪೂರ್ವಾಪರ ವಿಚಾರಿಸದೇ ಹಣ ಕೊಟ್ಟು ಮೋಸ ಹೋಗಬಾರದು' ಎಂದು ಅಧಿಕಾರಿಗಳು ಹೇಳಿದ್ದಾರೆ.

ಹಟ್ಟಿ: ಚಿನ್ನ ಉತ್ಪಾದನೆ ಸ್ಥಗಿತ

ಪ್ರಜಾವಾಣಿ ವಾರ್ತೆ

ಹಟ್ಟಿ ಚಿನ್ನದ ಗಣಿ: ಇಲ್ಲಿನ ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಮೇ 24ರವರೆಗೆ ಚಿನ್ನ ಉತ್ಪಾದನೆ ಸ್ಥಗಿತಗೊಳಿಸಲಾಗಿದೆ.

'ಕೊರೊನಾ ಸೋಂಕು ನಿಯಂತ್ರಣಕ್ಕೆ ಲಾಕ್‌ಡೌನ್ ಜಾರಿಯಲ್ಲಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ. ಕಾರ್ಮಿಕರು ಹಾಗೂ ಸಿಬ್ಬಂದಿಗೆ ಮನೆಯಲ್ಲಿಯೇ ಇರುವಂತೆ ಸೂಚನೆ ನೀಡಲಾಗಿದೆ' ಎಂದು ಕಂಪನಿಯ ಪ್ರಭಾರ ಕಾರ್ಯನಿರ್ವಾಹಕ ನಿರ್ದೇಶಕ ಪ್ರಕಾಶ ಬಹದ್ದೂರ್ ತಿಳಿಸಿದ್ದಾರೆ.

'ನೌಕರರು ಅನವಶ್ಯಕವಾಗಿ ರಸ್ತೆಯಲ್ಲಿ ತಿರುಗಾಡಿದರೆ ಅಂಥವರನ್ನು ಗೈರುಹಾಜರಿ ಎಂದು ಪರಿಗಣಿಸಲಾಗುವುದು. ನೌಕರರು ಕೇಂದ್ರ ಬಿಟ್ಟು ಬೇರೆ ಸ್ಥಳಗಳಿಗೆ ಭೇಟಿ ನೀಡಿ ಬಂದರೆ ಅಂಥವರ ವಿರುದ್ಧ ಕೋವಿಡ್ ನಿಯಮ ಉಲ್ಲಂಘನೆ ಅಡಿ ಪ್ರಕರಣ ದಾಖಲಿಸಲಾಗುವುದು' ಎಂದು ಎಚ್ಚರಿಸಿದ್ದಾರೆ.

'ಅದಿರನ್ನು ಸಂಸ್ಕರಿಸಿ ದಿನಕ್ಕೆ 5 ಕೆ.ಜಿ ಚಿನ್ನ ಉತ್ಪಾದನೆ ಮಾಡಲಾಗುತ್ತಿತ್ತು. ಈಗ ಉತ್ಪಾದನೆ ಸ್ಥಗಿತವಾಗಿದ್ದರಿಂದ ಗಣಿ ಕಂಪನಿಗೆ ನಷ್ಟವಾಗುವುದಿಲ್ಲ. ಮುಂದಿನ ದಿನಗಳಲ್ಲಿ ಚಿನ್ನ ಉತ್ಪಾದನೆ ಹೆಚ್ಚಳ ಮಾಡಿ ನಷ್ಟ ಸರಿಪಡಿಸಲಾಗುವುದು' ಎಂದು ಆಡಳಿತ ಮಂಡಳಿ ತಿಳಿಸಿದೆ.



ಸೋಂಕು ನಿವಾರಕ ಸಿಂಪಡಣೆ

ಕೊರೊನಾ ಸೋಂಕು ಹರಡದಂತೆ ಬಿಬಿಎಂಪಿ ಸಿಬ್ಬಂದಿ ಕಬ್ಬನ್‌ಪೇಟೆಯಲ್ಲಿ ಬುಧವಾರ ಸೋಂಕು ನಿವಾರಕ ದ್ರಾವಣ ಸಿಂಪಡಿಸಿದರು –ಪ್ರಜಾವಾಣಿ ಚಿತ್ರ

ಹಣಕಾಸಿನ ನೆರವಿಗೆ ಕಟ್ಟಡ ಕಾರ್ಮಿಕರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮತ್ತು ಲಾಕ್‌ಡೌನ್ ಕಾರಣ ಕಟ್ಟಡ ಕಾರ್ಮಿಕರಿಗೆ ಕನಿಷ್ಠ ಮೂರು ತಿಂಗಳು ತಲಾ ₹ 10 ಸಾವಿರ ಪರಿಹಾರ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಬೇಕು ಎಂದು ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯು ಸರ್ಕಾರಕ್ಕೆ ಆಗ್ರಹಿಸಿದೆ.

ಈ ಸಂಬಂಧ ಸಮಿತಿಯ ಸದಸ್ಯರು ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಒಕ್ಕೂಟದ ಅಧ್ಯಕ್ಷ ಶಾಮಣ್ಣ ರೆಡ್ಡಿ ನೇತೃತ್ವದಲ್ಲಿ ಬುಧವಾರ ಸಭೆ ನಡೆಸಿ, ಮನವಿ ಪತ್ರವನ್ನು ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ಅವರಿಗೆ ಸಲ್ಲಿಸಿದ್ದಾರೆ. ಕಟ್ಟಡ ಕಾರ್ಮಿಕರ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

'ಲಾಕ್‌ಡೌನ್‌ನಿಂದ ಕಟ್ಟಡ ನಿರ್ಮಾಣ ಕಾಮಗಾರಿಗಳು ಮತ್ತೆ ಸ್ಥಗಿತಗೊಂಡಿವೆ. ಇದರಿಂದ ಲಕ್ಷಾಂತರ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಕುಟುಂಬ ನಿರ್ವಹಣೆ ಸವಾಲಾಗಿದ್ದು, ಸಾವಿರಾರು ಸಂಖ್ಯೆಯಲ್ಲಿ ವಲಸೆ ಕಾರ್ಮಿಕರು ಪುನಃ ತಮ್ಮ ಊರುಗಳಿಗೆ ತೆರಳಿದ್ದಾರೆ. ಮಂಡಳಿಯಲ್ಲಿ ನೋಂದಣಿಯಾಗಿರುವ ಎಲ್ಲ ಕಾರ್ಮಿಕರಿಗೆ ಕನಿಷ್ಠ ಮೂರು ತಿಂಗಳು ಹಣಕಾಸಿನ ನೆರವನ್ನು ಒದಗಿಸಬೇಕು. ಕಳೆದ ವರ್ಷ ಘೋಷಿಸಲಾಗಿದ್ದ ₹ 5 ಸಾವಿರ ಪರಿಹಾರದ ಬಾಕಿ ಹಣವನ್ನು ಒಂದು ಲಕ್ಷ ಕಾರ್ಮಿಕರಿಗೆ ಕೂಡಲೇ ವರ್ಗಾವಣೆ ಮಾಡಬೇಕು' ಎಂದು ಸಮಿತಿ ಆಗ್ರಹಿಸಿದೆ.

ವೈದ್ಯಕೀಯ ಮೊದಲಾದ ಧನ ಸಹಾಯಕ್ಕಾಗಿ ಅರ್ಜಿ ಸಲ್ಲಿಸಲು ಮೇ 30ರವರೆಗೆ ನೀಡಲಾಗಿದ್ದ ಅವಧಿಯನ್ನು ಮೂರು ತಿಂಗಳವರೆಗೆ ವಿಸ್ತರಿಸಬೇಕು. ಕಟ್ಟಡ ಕಾರ್ಮಿಕರಿಗೆ ಉಚಿತವಾಗಿ ಕೋವಿಡ್ ಲಸಿಕೆ, ಮೃತಪಟ್ಟ ಕಟ್ಟಡ ಕಾರ್ಮಿಕರ ಕುಟುಂಬಕ್ಕೆ ₹ 10 ಲಕ್ಷ ಪರಿಹಾರ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಸಮಿತಿಯ ಸದಸ್ಯರು ಒತ್ತಾಯಿಸಿದ್ದಾರೆ. ಒಂದು ವೇಳೆ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಮೇ 15ರಂದು ಕಟ್ಟಡ ಕಾರ್ಮಿಕರು ಸಚಿವರ ಮನೆಯ ಮುಂದೆ ಕುಟುಂಬದ ಸದಸ್ಯರೊಂದಿಗೆ ಪ್ರತಿಭಟನೆ ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಆಶಾ: '₹ 5 ಸಾವಿರ ಕೋವಿಡ್ ಭತ್ಯೆ ಬಿಡುಗಡೆಗೊಳಿಸಿ'

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯ ಎಲ್ಲ ಆಶಾ ಕಾರ್ಯಕರ್ತೆಯರಿಗೆ ತಲಾ ₹ 5 ಸಾವಿರ ಕೋವಿಡ್ ಭತ್ಯೆಯನ್ನು ಕೂಡಲೇ ಬಿಡುಗಡೆ ಮಾಡಬೇಕು. ಅಗತ್ಯ ಸುರಕ್ಷಾ ಸಾಧನಗಳನ್ನು ಒದಗಿಸಬೇಕು' ಎಂದು ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಆಗ್ರಹಿಸಿದೆ.

ಈ ಸಂಬಂಧ ಸಂಘವು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಮನವಿ ಪತ್ರ ಸಲ್ಲಿಸಿದೆ. '14–15 ತಿಂಗಳುಗಳಿಂದ ಆಶಾ ಕಾರ್ಯಕರ್ತೆಯರು ತಮ್ಮ ಜೀವ ಪಣಕಿಟ್ಟು ಕೋವಿಡ್ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಈ ವೇಳೆ ಕೆಲ ಆಶಾ ಕಾರ್ಯಕರ್ತೆಯರು ಮೃತಪಟ್ಟಿದ್ದಾರೆ. ಹಲವಾರು ಮಂದಿ ಕೋವಿಡ್ ಪೀಡಿತರಾಗಿದ್ದು, ಚೇತರಿಸಿಕೊಂಡು ಮತ್ತೆ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಕೋವಿಡ್ ಯೋಧರಾದ ಆಶಾ ಕಾರ್ಯಕರ್ತೆಯರನ್ನು ಕೋವಿಡ್ ಭತ್ಯೆಯ ಫಲಾನುಭವಿಗಳ ಪಟ್ಟಿಯಿಂದ ಕೈಬಿಟ್ಟಿರುವುದು ಬೇಸರವನ್ನುಂಟು ಮಾಡಿದೆ' ಎಂದು ಸಂಘದ ರಮಾ ಟಿ.ಎಸ್ ತಿಳಿಸಿದ್ದಾರೆ.

'ಸೋಂಕು ಸಂಪರ್ಕಿತರ ಪತ್ತೆ, ಗರ್ಭಿಣಿಯರನ್ನು ಪರೀಕ್ಷೆಗೆ ಕರೆತರುವುದು, ಕೋವಿಡ್ ಪರೀಕ್ಷೆ, ಲಸಿಕೆ ವಿತರಣೆ ಕಾರ್ಯಕ್ರಮ ಸೇರಿದಂತೆ ವಿವಿಧ ಕೆಲಸಗಳನ್ನು ಏಕಕಾಲದಲ್ಲಿ ಆಶಾ ಕಾರ್ಯಕರ್ತೆಯರು ನಿರ್ವಹಿಸುತ್ತಿದ್ದಾರೆ. ಆದರೆ, ಭತ್ಯೆ ವಿಚಾರದಲ್ಲಿ ಕಡೆಗಣಿಸಲಾಗಿದೆ. ಬಹುತೇಕರಿಗೆ ಮಾರ್ಚ್ ಮತ್ತು ಏಪ್ರಿಲ್ ತಿಂಗಳ ವೇತನ ಕೂಡ ಕೈಸೇರಿಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಆಶಾ ಕಾರ್ಯಕರ್ತೆಯರಿಗೆ ತಲಾ ₹ 5 ಸಾವಿರ ಭತ್ಯೆಯನ್ನು ಒದಗಿಸಲು ಕ್ರಮಕೈಗೊಳ್ಳಬೇಕು' ಎಂದು ಮನವಿ ಪತ್ರದಲ್ಲಿ ಒತ್ತಾಯಿಸಲಾಗಿದೆ.

ಲಸಿಕೆ ವ್ಯವಸ್ಥೆ ಮಾಡದೇ 'ಟೀಕಾ ಉತ್ಸವ' ಆಚರಿಸಿದ ಸರ್ಕಾರ: ಪ್ರಿಯಾಂಕಾ ವ್ಯಂಗ್ಯ



ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕೋವಿಡ್–19ರ ವಿರುದ್ಧ ಸಮರ್ಪಕವಾಗಿ ಲಸಿಕೆಗಳನ್ನು ವ್ಯವಸ್ಥೆ ಮಾಡಿಕೊಳ್ಳದೇ ಲಸಿಕಾ ಅಭಿಯಾನ (ಟೀಕಾ ಉತ್ಸವ) ಆಚರಿಸಿತು ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಬುಧವಾರ ವ್ಯಂಗ್ಯವಾಡಿದ್ದಾರೆ.

ಕೊರೊನಾ ವಿರುದ್ಧ ಗರಿಷ್ಠ ಸಂಖ್ಯೆಯ ಅರ್ಹ ಜನರಿಗೆ ಲಸಿಕೆ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರ ಏಪ್ರಿಲ್ 11 ರಿಂದ 14ರವರೆಗೆ ಲಸಿಕಾ ಅಭಿಯಾನ ಹಮ್ಮಿಕೊಂಡಿತ್ತು. ಭಾರತವು ಲಸಿಕೆ ಉತ್ಪಾದಿಸುವ ಅತಿ ದೊಡ್ಡ ದೇಶ ಎಂದು ಸರ್ಕಾರ ಹೇಳಿತ್ತು. ಆದರೆ ಲಸಿಕಾ ಅಭಿಯಾನಕ್ಕೆ ಪೂರಕವಾಗಿ ಲಸಿಕೆಗಳನ್ನೇ ವ್ಯವಸ್ಥೆ ಮಾಡಿರಲಿಲ್ಲ. 30 ದಿನಗಳಲ್ಲಿ ದೇಶದಲ್ಲಿ ಲಸಿಕೆ ನೀಡುವ ಪ್ರಕ್ರಿಯೆಯಲ್ಲಿ ಶೇ 82ರಷ್ಟು ಕುಸಿತ ಕಂಡು ಬಂದಿದೆ ಎಂದು ಅವರು ದೂರಿದ್ದಾರೆ.

ಪ್ರಜೆಗಳಿಗೆ ಲಸಿಕೆ ನೀಡುವ ವಿಷಯದಲ್ಲಿ ಅಮೆರಿಕ, ಇಂಗ್ಲೆಂಡ್, ಟರ್ಕಿ ಮತ್ತು ಫ್ರಾನ್ಸ್‌ನಂತಹ ದೇಶಗಳ ಹಿಂದೆ ಭಾರತವಿದೆ ಎಂದು ಅವರು ಹೇಳಿದ್ದಾರೆ.

'ಮೋದಿ ಅವರು ಲಸಿಕಾ ಕಾರ್ಖಾನೆಗಳಿಗೆ ಭೇಟಿ ನೀಡಿದ್ದರು. ಅಲ್ಲಿ ಫೋಟೊಗಳನ್ನು ತೆಗೆಸಿಕೊಂಡಿದ್ದರು. ಆದರೆ ಅವರ ಸರ್ಕಾರವು ಲಸಿಕೆಗಾಗಿ ಮೊದಲ ಆದೇಶವನ್ನು ಜನವರಿ 2021ರಲ್ಲಿ ಏಕೆ ನೀಡಿತು?' ಎಂದು ಪ್ರಿಯಾಂಕಾ ಪ್ರಶ್ನಿಸಿದ್ದಾರೆ.

'ಅಮೆರಿಕ ಮತ್ತು ಇತರ ದೇಶಗಳು ಬಹಳ ಹಿಂದೆಯೇ ಭಾರತೀಯ ಲಸಿಕಾ ಕಂಪನಿಗಳೊಂದಿಗೆ ಲಸಿಕೆ ಪೂರೈಕೆಗೆ ಸಂಬಂಧಿಸಿದಂತೆ ಬೇಡಿಕೆ ಸಲ್ಲಿಸಿವೆ. ಇದರ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳುತ್ತಾರೆ' ಎಂದು ಕೇಳಿದ್ದಾರೆ.

ಲಸಿಕಾ ಅಭಿಯಾನವು ಪ್ರತಿ ಮನೆಯನ್ನು ತಲುಪದ ಹೊರತು ಕೋವಿಡ್ ವಿರುದ್ಧ ಹೋರಾಡಲು ಸಾಧ್ಯವಿಲ್ಲ ಎಂದು ಅವರು ಇದೇ ವೇಳೆ ಪ್ರತಿಪಾದಿಸಿದ್ದಾರೆ.

ನಿಧನ ವಾರ್ತೆ

ನಂದಾ ಆಂಜನಪ್ಪ ರೆಡ್ಡಿ



ಬೆಂಗಳೂರು: ನಂದ ಫುಡ್ ಆ್ಯಂಡ್ ಬೆವರೇಜಸ್ ಹಾಗೂ ಮೊಮು ವೆಂಚರ್ಸ್ ಪ್ರೈವೇಟ್ ಲಿಮಿಟೆಡ್‌ನ ಮೊಮು ಆಂಜನಪ್ಪ ರೆಡ್ಡಿ ಅವರ ಪತ್ನಿ ನಂದಾ ಆಂಜನಪ್ಪ ರೆಡ್ಡಿ ಹೃದಯಾಘಾತದಿಂದ ಇತ್ತೀಚೆಗೆ ನಿಧನರಾದರು. ಅವರು ಕಸ್ತೂರಿನಗರದಲ್ಲಿ ವಾಸವಿದ್ದರು.

ರಾಜಕೀಯ, ಸಾಹಿತ್ಯ, ಸಂಘಟನೆ, ಸಮಾಜಸೇವೆ, ವೈಚಾರಿಕ ಹೋರಾಟ... ಹೀಗೆ ವಿವಿಧ ರಂಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಆಂಜನಪ್ಪ ರೆಡ್ಡಿ ಅವರ ಎಲ್ಲ ಸಾಧನೆಗೂ ನಂದಾ ಅವರು ಬೆಂಗಾವಲಾಗಿದ್ದರು. ಕರ್ನಾಟಕ ರೆಡ್ಡಿಜನ ಸಂಘದ ಮುಖವಾಣಿ 'ವೇಮನವಾಣಿ' ಮಾಸ ಪತ್ರಿಕೆಯಲ್ಲಿ ಸಂಶೋಧನಾತ್ಮಕ ಬರಹ, ವಿಚಾರಗಳನ್ನು ಪ್ರಕಟಿಸಿದರು.

ಚಂದ್ರಿಕಾ ನವೀನ್



ಪೀಣ್ಯ ದಾಸರಹಳ್ಳಿ: ಎಚ್‌ಎಂಟಿ ಲೇಔಟ್ ನಿವಾಸಿ ಚಂದ್ರಿಕಾ ನವೀನ್ (33) ಹೃದಯಾಘಾತದಿಂದ ಮಂಗಳವಾರ ನಿಧನರಾದರು.

ಅವರು ಪವರ್ ಫ್ರೆಂಡ್ಸ್‌ನ (ಎನ್.ಜಿ.ಓ) ಮಹಿಳಾ ಘಟಕದ ಸದಸ್ಯರಾಗಿದ್ದರು. ಅವರಿಗೆ ಪತಿ, ಪುತ್ರಿ ಇದ್ದಾರೆ. ದಕ್ಷಿಣ ಕನ್ನಡದ ಉಪ್ಪಳದಲ್ಲಿ ಅಂತ್ಯಕ್ರಿಯೆಯನ್ನು ಬುಧವಾರ ನೆರವೇರಿಸಲಾಯಿತು.

ಬೆಂಗಳೂರಿನ ಎಲ್ಲೆಡೆ, ರಾಜ್ಯದ ಇತರ ನಗರಗಳಿಗೂ ವಿಸ್ತರಿಸಲು ಚಿಂತನೆ

ಮನೆ ಬಾಗಿಲಿಗೇ ಆಮ್ಲಜನಕ ಸಾಂದ್ರಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಆಮ್ಲಜನಕದ ಕೊರತೆ ಎದುರಿಸುತ್ತಿರುವ ಕೋವಿಡ್ ಸೋಂಕಿತರಿಗೆ ಅವರ ಮನೆ ಬಾಗಿಲಿಗೇ ಆಮ್ಲಜನಕ ಸಾಂದ್ರಕಗಳನ್ನು (ಆಕ್ಸಿಜನ್ ಕಾನ್ಸಂಟ್ರೇಟರ್) ಒದಗಿಸುವ ಕಾರ್ಯಕ್ರಮಕ್ಕೆ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಬುಧವಾರ ಚಾಲನೆ ನೀಡಿದರು.

ಈ ಆಮ್ಲಜನಕ ಸಾಂದ್ರಕಗಳನ್ನು ಓಲಾ ಕ್ಯಾಬ್ ಮೂಲಕ ಪೂರೈಸಲಾಗುತ್ತಿದ್ದು, ಗ್ರಿವ್ ಇಂಡಿಯಾ ಮತ್ತು ಓಲಾ ಕ್ಯಾಬ್‌ಗಳು ಸಹಯೋಗ ನೀಡಿವೆ. ಬೆಂಗಳೂರಿನಲ್ಲಿ ಆರಂಭಿಸಿರುವ ಈ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ರಾಜ್ಯದ ಇತರ ನಗರಗಳಲ್ಲೂ ಆರಂಭಿಸಲು ಸರ್ಕಾರ ಚಿಂತನೆ ನಡೆಸಿದೆ.

ಈ ಸಂದರ್ಭದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅಶ್ವತ್ಥನಾರಾಯಣ, ಇಡೀ ರಾಜ್ಯದಲ್ಲಿ ಮೊದಲ ಬಾರಿಗೆ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದಲ್ಲಿ ಮನೆ ಬಾಗಿಲಿಗೆ ಆಮ್ಲಜನಕ ಸಾಂದ್ರಕಗಳನ್ನು ಒದಗಿಸುವ ಕೆಲಸ ಆರಂಭಿಸಿದೆವು. ಇದಕ್ಕೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದ್ದರಿಂದ ಈಗ ಇಡೀ ಬೆಂಗಳೂರಿಗೇ ವಿಸ್ತರಿಸಲಾಗುತ್ತಿದೆ ಎಂದು ಹೇಳಿದರು.

ಹೋಮ್ ಐಸೋಲೇಷನ್ ಆಗಿರುವ ಯಾವುದೇ ಸೋಂಕಿತರಲ್ಲಿ ಆಮ್ಲಜನಕ ಸ್ಯಾಚುರೇಷನ್ ಮಟ್ಟವು ಶೇ 94 ಕ್ಕಿಂತ ಕಡಿಮೆ ಇದ್ದರೆ ಅಂಥವರಿಗೆ ಆಮ್ಲಜನಕದ ಸಾಂದ್ರಕಗಳನ್ನು ನೀಡಲಾಗುವುದು. ಓಲಾ ಆ್ಯಪ್ ಮೂಲಕ ಆನ್‌ಲೈನ್‌ನಲ್ಲಿ ಬೇಡಿಕೆ ಸಲ್ಲಿಸಿದ 30 ನಿಮಿಷದೊಳಗೆ ಮನೆ ಬಾಗಿಲಿಗೇ ಸಾಂದ್ರಕ ತಲುಪಿಸಲಾಗುತ್ತದೆ ಎಂದರು.

ಸೋಂಕಿತರು ₹5,000 ಭದ್ರತಾ ಠೇವಣಿಯನ್ನು ಡಿಜಿಟಲ್ ಮೂಲಕ ಪಾವತಿಸಿ ಸಾಂದ್ರಕಗಳನ್ನು ಪಡೆಯಬೇಕು. ಸಾಂದ್ರಕಗಳನ್ನು ವಾಪಸ್ ಪಡೆಯುವಾಗ ಠೇವಣಿ ಮೊತ್ತವನ್ನು ಹಿಂತಿರುಗಿಸಲಾಗುವುದು. ಈ ಸಾಧನವನ್ನು ಹೇಗೆ ಬಳಸಬೇಕು ಎಂಬುದನ್ನು ಸೋಂಕಿತರಿಗೆ ಹೇಳಿಕೊಡಲಾಗುವುದು ಎಂದು ವಿವರಿಸಿದರು.

ಸದ್ಯಕ್ಕೆ 500 ಆಮ್ಲಜನಕ ಸಾಂದ್ರಕಗಳ ಜಾಲವನ್ನು ರೂಪಿಸಲಾಗಿದೆ. ಈಗ ಮಲ್ಲೇಶ್ವರ ಮತ್ತು ಕೋರಮಂಗಲದಲ್ಲಿ ಆರಂಭಿಸಲಾಗಿದೆ. ಕ್ರಮೇಣ ಇನ್ನೂ ಹೆಚ್ಚು ಪ್ರಮಾಣದಲ್ಲಿ ವಿಸ್ತರಿಸಲಾಗುವುದು. ಇದರ ಜತೆಗೆ ಟೆಲಿಕನ್ಸಲ್ಟೆನ್ಸಿ ಸೇವೆಯನ್ನು ನೀಡುವ ಚಿಂತನೆ ಇದೆ. ಅಗತ್ಯ ಇದ್ದರೆ ಸೋಂಕಿತರಿಗೆ ಔಷಧೋಪಚಾರವನ್ನು ಒದಗಿಸಲಾಗುವುದು ಎಂದು ಅಶ್ವತ್ಥನಾರಾಯಣ ಹೇಳಿದರು.



ಮನೆ ಬಾಗಿಲಿಗೆ ಆಮ್ಲಜನಕ ಸಾಂದ್ರಕಗಳ ಕಾರ್ಯಕ್ರಮಕ್ಕೆ ಉಪಮುಖ್ಯಮಂತ್ರಿ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಚಾಲನೆ ನೀಡಿದರು.

ಡಬ್ಲ್ಯುಡಿಸಿಗಳಿಗೆ ನೋಡಲ್ ಅಧಿಕಾರಿಗಳ ನೇಮಕ

ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಲಭ್ಯವಾಗಲಿದೆ ಸಭೆಯ ನಡಾವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ 198 ವಾರ್ಡ್‌ಗಳಲ್ಲೂ ಕೋವಿಡ್ ಚಿಕಿತ್ಸೆಯ ಸರದಿ ನಿರ್ಧಾರದ ವಿಕೇಂದ್ರಿತ ವ್ಯವಸ್ಥೆ ಮತ್ತು ತುರ್ತು ಸ್ಪಂದನೆಯ ವಾರ್ಡ್ ಮಟ್ಟದ ಸಮಿತಿಗಳನ್ನು (ಡಬ್ಲ್ಯುಡಿಸಿ) ಬಿಬಿಎಂಪಿ ರಚಿಸಿದೆ. ಈ ಸಮಿತಿಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ನೋಡಲ್ ಅಧಿಕಾರಿಗಳನ್ನು ನೇಮಿಸಿ ಪಾಲಿಕೆಯ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಬುಧವಾರ ಆದೇಶ ಹೊರಡಿಸಿದ್ದಾರೆ.

ವಾರ್ಡ್ ಮಟ್ಟದಲ್ಲಿ ಕೋವಿಡ್ ನಿಯಂತ್ರಣ ಕ್ರಮಗಳ ಕಟ್ಟುನಿಟ್ಟಿನ ಜಾರಿಗೆ ಈ ಸಮಿತಿ ಶ್ರಮಿಸಲಿದೆ. ಕೋವಿಡ್ ನಿಯಂತ್ರಣಕ್ಕೆ ತಳಮಟ್ಟದಲ್ಲಿ ಕ್ರಮ ಕೈಗೊಳ್ಳುವುದು ಹಾಗೂ ನಿಯಮಿತವಾಗಿ ಸಭೆ ನಡೆಸುವುದು ನೋಡಲ್ ಅಧಿಕಾರಿಯ ಜವಾಬ್ದಾರಿ. ಸಭೆಗೆ ಮುನ್ನವೇ ಸಾರ್ವಜನಿಕರಿಗೆ ಈ ಬಗ್ಗೆ ಮಾಹಿತಿ ಒದಗಿಸುವುದು, ಸಭೆಯ ನಡಾವಳಿಗಳನ್ನು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳುವುದು ಸದಸ್ಯ ಕಾರ್ಯದರ್ಶಿಯ ಜವಾಬ್ದಾರಿ.

ಸಮಿತಿಯ ಸಂರಚನೆ

ಅಧ್ಯಕ್ಷರು	ನೋಡಲ್ ಅಧಿಕಾರಿ
ವಾರ್ಡ್‌ನ ಸಹಾಯಕ/ ಕಿರಿಯ ಎಂಜಿನಿಯರ್	ಸದಸ್ಯ ಕಾರ್ಯದರ್ಶಿ
ಪಾಲಿಕೆ ಇತರ ಅಧಿಕಾರಿಗಳು	ಸದಸ್ಯರು
ಇತರೆ ಸರ್ಕಾರಿ ಅಧಿಕಾರಿಗಳು	ಸದಸ್ಯರು
ಆರ್‌ಡಬ್ಲ್ಯುಎ ಪ್ರತಿನಿಧಿಗಳು	ಸದಸ್ಯರು
ಸ್ವಯಂಸೇವಕ	ಸದಸ್ಯರು

ಪೊಲೀಸರಿಗೆ ಅವಾಚ್ಯ ಶಬ್ದಗಳಿಂದ ನಿಂದನೆ

ಸುಳ್ಳು ವಿಡಿಯೊ ಹರಿಯಬಿಟ್ಟಿದ್ದ ಮಹಿಳೆಯ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ಕರ್ನಾಟಕ ಪೊಲೀಸರು ವ್ಯಕ್ತಿಯೊಬ್ಬರನ್ನು ಸುತ್ತುವರಿದು ಹಲ್ಲೆ ನಡೆಸಿದ್ದಾರೆ ಎಂದು ಹಳೆಯ ವಿಡಿಯೊ ಮೂಲಕ ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳುಸುದ್ದಿ ಹರಿಯಬಿಟ್ಟಿದ್ದ ಆರೋಪದಡಿ ಮಹಿಳೆಯೊಬ್ಬರನ್ನು ಬೆಂಗಳೂರು ದಕ್ಷಿಣ ಸೆನ್ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ವಿಡಿಯೊಗೆ ಹಿನ್ನೆಲೆ ಧ್ವನಿ ನೀಡಿ, ರಾಜ್ಯದ ಪೊಲೀಸರ ಮೇಲೆ ಸುಳ್ಳು ಆರೋಪ ಮಾಡಿದ್ದ ಬೆಂಗಳೂರಿನ ಪದ್ಮಾ ಹರೀಶ್ ಎಂಬ ಮಹಿಳೆಯನ್ನು ವಶಕ್ಕೆ ಪಡೆಯಲಾಗಿದೆ.

‘ಲಾಕ್‌ಡೌನ್ ವೇಳೆ ವಾಟ್ಸ್‌ಆ್ಯಪ್ ಮೂಲಕ ಪೊಲೀಸರ ಗುಂಪೊಂದು ವ್ಯಕ್ತಿಯ ಮೇಲೆ ಹಲ್ಲೆ ನಡೆಸುತ್ತಿರುವ ವಿಡಿಯೊ ತುಣುಕನ್ನು ಹಂಚಿಕೊಳ್ಳಲಾಗಿತ್ತು. ವಿಡಿಯೊದಲ್ಲಿ ಪದ್ಮಾ ಹರೀಶ್ ಹೆಸರಿನ ಮಹಿಳೆಯು ರಾಜ್ಯ ಪೊಲೀಸ್ ಪಡೆಯನ್ನು ಅವಾಚ್ಯ ಶಬ್ದಗಳಿಂದ ದೂಷಿಸಿ ಹಾಗೂ ಪೊಲೀಸರ ಮೇಲೆ ಸಾರ್ವಜನಿಕರು ಪ್ರತೀಕಾರ ತೀರಿಸಿಕೊಳ್ಳುವಂತೆ ಪ್ರೇರೇಪಿಸಿದ್ದರು’ ಎಂದು ಪೊಲೀಸ್ ಇಲಾಖೆಯ ಫ್ಯಾಕ್ಟ್‌ಚೆಕ್ ತಂಡ ತಿಳಿಸಿದೆ.

‘ವಿಡಿಯೊ ಸಂಬಂಧ ಪರಿಶೀಲನೆ ನಡೆಸಿದಾಗ, ಈ ವಿಡಿಯೊ ಕಳೆದ ವರ್ಷದ ಏಪ್ರಿಲ್‌ನಲ್ಲಿ ಮಹಾರಾಷ್ಟ್ರದ ಮುಂಬೈ ಸಮೀಪದ ಮುಂಬ್ರಾದಲ್ಲಿ ಸಂಭವಿಸಿದ ಘಟನೆ ಎಂದು ತಿಳಿದು ಬಂದಿದೆ’ ಎಂದೂ ಸ್ಪಷ್ಟಪಡಿಸಿದೆ.

‘ಹಳೆಯ ವಿಡಿಯೊ ಎಂದು ತಿಳಿದುಕೊಳ್ಳದ ಪದ್ಮಾ, ಆಕ್ರೋಶದಿಂದ ಹಿನ್ನೆಲೆ ಧ್ವನಿ ನೀಡಿ, ಸುಳ್ಳು ಸುದ್ದಿ ಹಬ್ಬಿಸಿದ್ದರು. ಈ ವಿಚಾರವನ್ನು ಪೊಲೀಸರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಗಮನಕ್ಕೆ ತಂದಿದ್ದರು. ಸುಳ್ಳು ಸುದ್ದಿ ಹಬ್ಬಿಸಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕಮಿಷನರ್ ಸೂಚಿಸಿದ್ದರು’.

‘ಈ ಸಂಬಂಧ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ತನಿಖೆ ಆರಂಭಿಸಿದ್ದರು. ಈ ವೇಳೆ ವಿಡಿಯೊ ಹರಿಬಿಟ್ಟಿದ್ದ ಪದ್ಮಾ ಸಿಕ್ಕಿಬಿದ್ದಿದ್ದಾರೆ. ಅವರ ಮೊಬೈಲ್‌ನಲ್ಲೂ ವಿಡಿಯೊ ಪತ್ತೆಯಾಗಿದೆ. ಅವರಿಂದ ಹೆಚ್ಚಿನ ಮಾಹಿತಿ ಪಡೆದುಕೊಳ್ಳಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಸಾರ್ವಜನಿಕರು ಈ ರೀತಿ ಪ್ರಚೋದನಾತ್ಮಕ ಸುದ್ದಿಗಳಿಂದ ದಿಕ್ಕು ತಪ್ಪಬಾರದು. ಯಾವುದೇ ಸುದ್ದಿಯ ನೈಜತೆಯನ್ನು ಮೊದಲು ಪರಿಶೀಲಿಸಬೇಕು

ಕಮಲ್ ಪಂತ್
ನಗರ ಪೊಲೀಸ್ ಕಮಿಷನರ್



ಹಲಸೂರು ಗೇಟ್ ಠಾಣಾ ಪೊಲೀಸರು ಕೋವಿಡ್ ನಿಯಮ ಉಲ್ಲಂಘಿಸಿದ ವಾಹನಗಳನ್ನು ಜಪ್ತಿ ಮಾಡಿರುವುದು —ಪ್ರಜಾವಾಣಿ ಚಿತ್ರ

‘ಹಾಸಿಗೆ ಬ್ಲಾಕಿಂಗ್: ಸೈಬರ್ ತಜ್ಞರು ತಂಡದಲ್ಲಿ ಇರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸಿಗೆ ಬ್ಲಾಕಿಂಗ್ ಜಾಲದ ತನಿಖೆ ನಡೆಸುತ್ತಿರುವ ಪೊಲೀಸರ ತಂಡದಲ್ಲಿ ಸೈಬರ್ ತಜ್ಞರು ಇದ್ದಾರೆಯೇ ಎಂಬುದನ್ನು ಖಚಿತಪಡಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಕೋವಿಡ್ ಕುರಿತ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ತನಿಖೆಯ ಸ್ಥಿತಿಗತಿ ಕುರಿತ ವರದಿ ಸಲ್ಲಿಸುವಂತೆ ಸಿಸಿಬಿ ಜಂಟಿ ಕಮಿಷನರ್‌ಗೆ ಸೂಚನೆ ನೀಡಿತು.

‘ಆರೋಪಗಳ ಸೂಕ್ಷ್ಮ ಸ್ವರೂಪವನ್ನು ಗಮನಿಸಿದರೆ ಹಿರಿಯ ಐಪಿಎಸ್ ಅಧಿಕಾರಿಯೊಬ್ಬರು ತನಿಖೆಯ ಮೇಲ್ವಿಚಾರಣೆ ವಹಿಸುವುದು ಅವಶ್ಯಕ. ಸೈಬರ್ ಕ್ಷೇತ್ರದಲ್ಲಿ ಪರಿಣಿತಿ ಇರುವ ಅಧಿಕಾರಿಗಳನ್ನು ತನಿಖಾ ತಂಡದಲ್ಲಿ ಒಳಗೊಳ್ಳುವುದೂ ಅಗತ್ಯ’ ಎಂದು ಪೀಠ ಹೇಳಿತು.



‘ಈಗಾಗಲೇ ತಂಡ ರಚನೆ ಮಾಡಲಾಗಿದೆ. ಜಂಟಿ ಕಮಿಷನರ್ (ಅಪರಾಧ) ಸಂದೀಪ್ ಪಾಟೀಲ ತನಿಖೆಯ ಮೇಲ್ವಿಚಾರಣೆ ನಡೆಸುತ್ತಿದ್ದಾರೆ’ ಎಂದು ಅಡ್ವೊಕೇಟ್ ಜನರಲ್ ಪೀಠಕ್ಕೆ ಮಾಹಿತಿ ನೀಡಿದರು.

ಅಮಾನತುಗೊಂಡಿರುವ ಬಿಬಿಎಂಪಿ ವಾರ್ ರೂಂ ಉದ್ಯೋಗಿಗಳಿಗೆ ಅನ್ಯಾಯವಾಗಿದೆ ಎಂಬ ಯುವ ಕಾಂಗ್ರೆಸ್ ಮುಖಂಡ ವೈ.ಬಿ. ಶ್ರೀವತ್ಸ ಅವರ ಅರ್ಜಿಯನ್ನು ಪುರಸ್ಕರಿಸಲು ಪೀಠ ನಿರಾಕರಿಸಿತು.

ಹಾಸಿಗೆ ಬ್ಲಾಕಿಂಗ್ ದಂಧೆ:ಮತ್ತೊಬ್ಬನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸಿಗೆ ಬ್ಲಾಕಿಂಗ್ ದಂಧೆಯ ಪ್ರಕರಣದಲ್ಲಿ ಖಾಸಗಿ ಆಸ್ಪತ್ರೆಯ ಸಿಬ್ಬಂದಿಯನ್ನು ಸಿಸಿಬಿ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಸಪ್ತಗಿರಿ ಆಸ್ಪತ್ರೆಯಲ್ಲಿ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿದ್ದ ಆಂಥೋನಿ ಬಂಧಿತ ಆರೋಪಿ.

ಆಸ್ಪತ್ರೆಗೆ ಬರುವ ರೋಗಿಗಳಿಗೆ ಹಾಸಿಗೆ ಹಂಚಿಕೆ ಮಾಡುವುದಾಗಿ ಹೇಳಿ ಹೆಚ್ಚು ಹಣ ಪಡೆಯುತ್ತಿದ್ದ. ವಿಚಾರಣೆ ವೇಳೆ ಅಧಿಕಾರಿಗಳಿಗೆ ಈ ಮಾಹಿತಿ ಲಭ್ಯವಾಗಿತ್ತು, ಇದನ್ನು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.



ಆಂಥೋನಿ

ಕೊರೊನಾ ಸೋಂಕಿತರ ಹೆಸರಿನಲ್ಲಿ ಹಾಸಿಗೆಗಳನ್ನು ಬ್ಲಾಕ್ ಮಾಡುತ್ತಿದ್ದ ಆರೋಪದಡಿ ನಗರದ ಕೆಲ ಖಾಸಗಿ ಆಸ್ಪತ್ರೆಗಳ ಸಿಬ್ಬಂದಿಯ ವಿಚಾರಣೆಯನ್ನು ಸಿಸಿಬಿ ಪೊಲೀಸರು ನಡೆಸಿದ್ದರು.

ಇತ್ತೀಚೆಗಷ್ಟೇ ‘ಆರೋಗ್ಯ ಮಿತ್ರ’ ಅಧಿಕಾರಿ ಶಶಿಧರ್, ರಾಜರಾಜೇಶ್ವರಿ ನಗರದ ಸ್ಪರ್ಶ ಆಸ್ಪತ್ರೆ ನೌಕರ ವೆಂಕೋಬ ರಾವ್ ಹಾಗೂ ಬಸವೇಶ್ವರನಗರದ ಪುಣ್ಯ ಆಸ್ಪತ್ರೆ ನೌಕರ ಸುಧೀರ್ ಎಂಬುವರನ್ನು ಪೊಲೀಸರು ಬಂಧಿಸಿದ್ದರು.

ಇವರು ನೀಡಿದ್ದ ಮಾಹಿತಿ ಆಧರಿಸಿ, ಖಾಸಗಿ ಆಸ್ಪತ್ರೆಗಳ ಸಿಬ್ಬಂದಿಗೆ ಸಿಸಿಬಿ ಪೊಲೀಸರು ನೋಟಿಸ್ ನೀಡಿದ್ದರು. ಬಳಿಕ ಹಲವರನ್ನು ಮಂಗಳವಾರ ವಿಚಾರಣೆ ನಡೆಸಿದ್ದರು. ಈವರೆಗೆ ಈ ಪ್ರಕರಣದಲ್ಲಿ 10 ಮಂದಿಯನ್ನು ಬಂಧಿಸಲಾಗಿದೆ.

ಆರೋಪಿ ಕಾಲಿಗೆ ಗುಂಡಿಕ್ಕಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪೊಲೀಸರಿಂದ ತಪ್ಪಿಸಿಕೊಳ್ಳಲು ಯತ್ನಿಸಿದ ಹಲವು ಅಪರಾಧ ಪ್ರಕರಣಗಳ ಆರೋಪಿ ರೌಡಿಶೀಟರ್ ಸೂರ್ಯನನ್ನು ಸಿಸಿಬಿ ಪೊಲೀಸರು ಗುಂಡು ಹಾರಿಸಿ ಬುಧವಾರ ಬಂಧಿಸಿದ್ದಾರೆ.

‘ಎಚ್‌ಆರ್‌ಬಿಆರ್ ಬಡಾವಣೆಯಲ್ಲಿ ಸೂರ್ಯನನ್ನು ಬಂಧಿಸಲು ಮುಂದಾದಾಗ ಸಿಸಿಬಿ ಹೆಡ್ ಕಾನ್‌ಸ್ಟೆಬಲ್ ಹನುಮೇಶ್ ಮೇಲೆ ಸೂರ್ಯ ಹಲ್ಲೆಗೆ ಯತ್ನಿಸಿದ. ಈ ವೇಳೆ ಆತ್ಮರಕ್ಷಣೆಗಾಗಿ ಸಿಸಿಬಿ ಎಸಿಪಿ ಪರಮೇಶ್ವರ್ ಸೂರ್ಯನ ಕಾಲಿಗೆ ಗುಂಡು ಹಾರಿಸಿದರು. ಬಳಿಕ ಆತನನ್ನು ಬೌರಿಂಗ್ ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಲಾಯಿತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈತನ ವಿರುದ್ಧ ರಾಮಮೂರ್ತಿ ನಗರ, ಕೆ.ಜಿ.ಹಳ್ಳಿ, ಪುಲಿಕೇಶಿನಗರ ಠಾಣೆಗಳಲ್ಲಿ ಹಲವು ಕೊಲೆ ಪ್ರಕರಣಗಳು ದಾಖಲಾಗಿದ್ದವು.

ಇತ್ತೀಚೆಗೆ ಬಾಣಸವಾಡಿ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಹಲ್ಲೆ ಪ್ರಕರಣದಲ್ಲೂ ಸೂರ್ಯ ಹಾಗೂ ಆತನ ಸಹಚರರು ಭಾಗಿಯಾಗಿದ್ದರು. ಈ ಸಂಬಂಧ ಸಿಸಿಬಿ ಎಸಿಪಿ ನೇತೃತ್ವದ ತಂಡ ಇವರ ಪತ್ತೆಗೆ ತೆರಳಿತ್ತು. ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿಗಳು ಮನೆಯೊಂದರಲ್ಲಿ ಇರುವುದನ್ನು ತಿಳಿದು ಬಂಧಿಸಿದ್ದರು. ಆದರೆ, ಪ್ರಮುಖ ಆರೋಪಿಯಾಗಿದ್ದ ಸೂರ್ಯ ತಲೆಮರೆಸಿಕೊಂಡಿದ್ದ.

ವೈದ್ಯಾಧಿಕಾರಿಗಳಿಗೆ ಸೋಂಕು:ರೋಗಿಗಳ ಪರದಾಟ

ಗುಳೇದಗುಡ್ಡ: ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿನ ಮೂವರು ವೈದ್ಯರು ಹಾಗೂ ಏಳು ಜನ ಸಿಬ್ಬಂದಿಗೆ ಕೊರೊನಾ ಸೋಂಕು ತಗುಲಿದ್ದು ಅವರು ಹೋಂ ಐಸೊಲೇಷನ್‌ನಲ್ಲಿ ಇರುವುದರಿಂದ ರೋಗಿಗಳು ಚಿಕಿತ್ಸೆಗೆ ಪರದಾಡುತ್ತಿದ್ದಾರೆ.

ಪ್ರಸ್ತುತ ಆಸ್ಪತ್ರೆಯಲ್ಲಿ ಒಬ್ಬರು ಸಾಮಾನ್ಯ ರೋಗಿಗಳಿಗೆ ಚಿಕಿತ್ಸೆ ನೀಡುವ ಹಾಗೂ ಚಿಕ್ಕಮಕ್ಕಳ ವೈದ್ಯರು, ಆಯುಷ್ ಹಾಗೂ ಅರಿವಳಿಕೆ ತಜ್ಞರು ಕೆಲವು ಶುಶ್ರೂಷಕರು ಮಾತ್ರ ಸೇವೆ ಸಲ್ಲಿಸುತ್ತಿದ್ದಾರೆ. ಹೀಗಾಗಿ ಸಾರ್ವಜನಿಕರಿಗೆ ತೊಂದರೆಯಾಗಿದೆ.

ಗರ್ಭಿಣಿಯರ ಪರದಾಟ: ಪ್ರಸೂತಿ ತಜ್ಞ ಡಾ.ನಾಗರಾಜ ಕುರಿ ಅವರಿದ್ದ ಕಾರಣ ಈ ಆಸ್ಪತ್ರೆಯನ್ನು ಹೆರಿಗೆಗಾಗಿ ಮೀಸಲು ಇಡಲಾಗಿತ್ತು. ಗುಳೇದಗುಡ್ಡದ ಸುತ್ತಲಿನ ಗ್ರಾಮಗಳ ಗರ್ಭಿಣಿಯರಿಗೆ ಇದು ಹೆಚ್ಚು ಅನೂಕೂಲಕರವಾಗಿತ್ತು. ಈಗ ವೈದ್ಯರಿಲ್ಲದೇ ಪರದಾಡುವಂತಾಗಿದೆ.

ಲಾಕ್‌ಡೌನ್: 465 ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ನಗರದಾದ್ಯಂತ ಅನಗತ್ಯವಾಗಿ ಸಂಚರಿಸುತ್ತಿದ್ದ 465 ವಾಹನಗಳನ್ನು ಪೊಲೀಸರು ಬುಧವಾರ ಜಪ್ತಿ ಮಾಡಿದ್ದಾರೆ.

ಲಾಕ್‌ಡೌನ್ ವೇಳೆ ವಾಹನಗಳಲ್ಲಿ ಅನಗತ್ಯವಾಗಿ ಸಂಚರಿಸಬಾರದು ಎಂದು ಪೊಲೀಸ್ ಇಲಾಖೆ ಸೂಚಿಸಿದ್ದರೂ, ನಿಯಮ ಉಲ್ಲಂಘಿಸಿ ಕೆಲವರು ಸಂಚರಿಸುತ್ತಿದ್ದರು.

ಪೊಲೀಸರು ನಗರದಾದ್ಯಂತ ನಡೆಸಿದ ಕಾರ್ಯಾಚರಣೆಯಲ್ಲಿ 432 ದ್ವಿಚಕ್ರ ವಾಹನಗಳು, 15 ತ್ರಿಚಕ್ರ ವಾಹನಗಳು, 18 ನಾಲ್ಕು ಚಕ್ರದ ವಾಹನಗಳನ್ನು ಜಪ್ತಿ ಮಾಡಿದ್ದಾರೆ. ಎನ್‌ಡಿಎಂಎ ಕಾಯ್ದೆಯಡಿ ಐದು ಪ್ರಕರಣಗಳನ್ನು ದಾಖಲಿಸಿರುವುದಾಗಿ ಪೊಲೀಸ್ ಇಲಾಖೆ ತಿಳಿಸಿದೆ.

ಕೋವಿಡ್–19 ಜುಲೈವರೆಗೂ 2ನೇ ಅಲೆ: ವೈರಾಣು ತಜ್ಞ

ನವದೆಹಲಿ (ಪಿಟಿಐ): ಭಾರತದಲ್ಲಿ ಕೋವಿಡ್–19ರ ಎರಡನೇ ಅಲೆಯು ಏರುಗತಿಯನ್ನು ಮುಗಿಸಿದಂತೆ ಕಂಡುಬಂದರೂ, ಅದು ಕೆಳಗೆ ಇಳಿಯುವುದಕ್ಕೆ ದೀರ್ಘ ಅವಧಿ ತೆಗೆದುಕೊಳ್ಳುತ್ತದೆ. ಬಹುಶಃ ಜುಲೈವರೆಗೂ ಮುಂದುವರೆಯಬಹುದು ಎಂದು ವೈರಾಣು ತಜ್ಞ ಶಾಹಿದ್ ಜಮೀಲ್ ಅಭಿಪ್ರಾಯಪಟ್ಟಿದ್ದಾರೆ.

‘ವೈರಸ್‌ನ ಹೊಸ ರೂಪಾಂತರಗಳಿಂದ ಪ್ರಕರಣಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಗಲು ಕಾರಣವಾಗಿದ್ದರೂ, ರೂಪಾಂತರಿತ ವೈರಸ್‌ಗಳು ಹೆಚ್ಚು ಮಾರಕವಾಗಿವೆ ಎಂಬುದಕ್ಕೆ ಯಾವುದೇ ಪುರಾವೆ ಇಲ್ಲ’ ಎಂದು ಅಶೋಕ ವಿಶ್ವವಿದ್ಯಾಲಯದ ತ್ರಿವೇದಿ ಸ್ಕೂಲ್ ಆಫ್ ಬಯೋಸೈನ್ಸ್‌ನ ನಿರ್ದೇಶಕರಾಗಿರುವ ಅವರು ಹೇಳಿದ್ದಾರೆ.

ಇಂದಿರಾ ಕ್ಯಾಂಟೀನ್: ಆಹಾರ ವಿತರಣೆಗೆ ಉತ್ತಮ ಪ್ರತಿಕ್ರಿಯೆ • ನಿತ್ಯ 3 ಲಕ್ಷ ಪೊಟ್ಟಣ ಹಂಚಲಿದೆ ಬಿಬಿಎಂಪಿ

ಆಹಾರ ಪೊಟ್ಟಣ: ಗುರುತಿನ ಚೀಟಿ ಕಡ್ಡಾಯವಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ಜಾರಿಗೊಳಿಸಿರುವ ಲಾಕ್‌ಡೌನ್ ವೇಳೆ ಊಟದ ಸಮಸ್ಯೆ ಎದುರಿಸುತ್ತಿರುವ ಬಡವರಿಗೆ ಇಂದಿರಾ ಕ್ಯಾಂಟೀನ್ ಮೂಲಕ ಆಹಾರದ ಪೊಟ್ಟಣಗಳನ್ನು ಉಚಿತವಾಗಿ ವಿತರಿಸುವ ಕಾರ್ಯಕ್ರಮಕ್ಕೆ ಮೊದಲ ದಿನವೇ ಭಾರಿ ಬೇಡಿಕೆ ಬಂದಿದೆ. ಮೊದಲ ದಿನ ಬಿಬಿಎಂಪಿ 2.20 ಲಕ್ಷ ಆಹಾರದ ಪೊಟ್ಟಣಗಳನ್ನು ಬಡವರಿಗೆ ಹಂಚಿದೆ.

ಬಹುತೇಕ ಇಂದಿರಾ ಕ್ಯಾಂಟೀನ್‌ಗಳ ಬಳಿಯೂ ಜನ ಉಚಿತ ಆಹಾರದ ಪೊಟ್ಟಣಗಳನ್ನು ಪಡೆಯಲು ಸಾಲುಗಟ್ಟಿ ನಿಂತಿದ್ದರು. ಬೆಳಿಗ್ಗ ಉಪಾಹಾರಕ್ಕೆ ವೆಜ್ ಪಲಾವ್, ಮಧ್ಯಾಹ್ನದ ಊಟಕ್ಕೆ ಅನ್ನ ಸಾಂಬಾರ್ ಹಾಗೂ ರಾತ್ರಿ ಊಟಕ್ಕೆ ರೈಸ್ ಬಾತ್ ವಿತರಿಸಿತು.

ಉಚಿತ ಆಹಾರ ಪಡೆಯಲು ಆಧಾರ್ ಕಾರ್ಡ್, ಮತದಾರರ ಚೀಟಿ ಅಥವಾ ಯಾವುದಾದರೂ ಗುರುತಿನ ಚೀಟಿ ತೋರಿರಿಸುವುದನ್ನು ಬಿಬಿಎಂಪಿ ಕಡ್ಡಾಯ ಮಾಡಿತ್ತು. ಅವರು ಗುರುತಿನ ಚೀಟಿ ತೋರಿಸಿ ಆಹಾರ ಪಡೆದ ಫೋಟೊ ದಾಖಲೆ ಇಟ್ಟುಕೊಳ್ಳುವಂತೆಯೂ ಬಿಬಿಎಂಪಿ ಅಧಿಕಾರಿಗಳು ಕ್ಯಾಂಟೀನ್‌ಗಳಲ್ಲಿ ಆಹಾರ ವಿತರಿಸುವ ಸಿಬ್ಬಂದಿಗೆ ಸೂಚಿಸಿದ್ದರು. ಇದಕ್ಕೆ ಜನರಿಂದ ವಿರೋಧ ವ್ಯಕ್ತವಾಗಿತ್ತು. 'ಫೋಟೊ ತೆಗೆಯುವುದಾದರೆ ನಿಮ್ಮ ಆಹಾರ ಬೇಡ' ಎಂದು ಅನೇಕರು ವಾಪಸ್ ಹೋಗಿದ್ದರು. ಬೀದಿ ಬದಿಯ ನಿರ್ಗತಿಕರಲ್ಲಿ ಯಾವುದೇ ಗುರುತಿನ ಚೀಟಿ ಇರಲಿಲ್ಲ. ಆಹಾರ ಪಡೆಯಲು ಬಂದ ಹೆಚ್ಚಿನವರು ಗುರುತಿನ ಚೀಟಿ ತಂದಿರಲಿಲ್ಲ. ಯಾರೂ ಉಚಿತ ಆಹಾರದಿಂದ ವಂಚಿತರಾಗಬಾರದು ಎಂಬ ಕಾರಣಕ್ಕೆ ಈ ನಿಯಮವನ್ನು ಬಿಬಿಎಂಪಿ ಸಡಿಲಿಸಿದೆ.

ಇನ್ನು ಮುಂದೆ ಆಹಾರ ಪೊಟ್ಟಣ ಪಡೆಯಲು ಗುರುತಿನ ಚೀಟಿ ಕಡ್ಡಾಯವಲ್ಲ. ಅರ್ಹ ಫಲಾನುಭವಿಗಳು ಗುರುತಿನ ಚೀಟಿ ತೋರಿಸದೆಯೇ ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರದ ಪೊಟ್ಟಣಗಳನ್ನು ಉಚಿತವಾಗಿ ಪಡೆಯಬಹುದು ಎಂದು ಬಿಬಿಎಂಪಿಯ ಮುಖ್ಯ ಆಯುಕ್ತ ಗೌರವ್ ಗುಪ್ತ ಸ್ಪಷ್ಟಪಡಿಸಿದ್ದಾರೆ.

ಬೆಳಿಗ್ಗೆಯೇ ಸಾಲು: ಕ್ಯಾಂಟೀನ್‌ಗಳ ಮುಂದೆ ಬಳಿಗ್ಗೆ ಎಂಟು ಗಂಟೆಗೇ ಜನರ ಸಾಲು ಕಂಡು ಬಂತು. ಆಹಾರ ಪಡೆಯುವವರು ಅಂತರ ಕಾಪಾಡಿರಲಿಲ್ಲ. ಆದರೆ, ಗುಂಪು ಗೂಡಿರಲಿಲ್ಲ. ಸಾಲಿನಲ್ಲಿ ಬಂದವರಿಗಷ್ಟೇ ಸಿಬ್ಬಂದಿ ಆಹಾರ ವಿತರಿಸಿದರು.

'ಬಡವರ್ಗದ ಜನರು, ವಲಸಿಗರು, ಕೂಲಿ ಕಾರ್ಮಿಕರಿಗೆ ಬೆಳಗಿನ ಉಪಹಾರ, ಮಧ್ಯಾಹ್ನ ಹಾಗೂ ರಾತ್ರಿ ಊಟ, ಆಹಾರ ಪೊಟ್ಟಣಗಳನ್ನು ಉಚಿತವಾಗಿ ವಿತರಿಸಿದ್ದೇವೆ. ಈ ಹಿಂದೆ 250ರಿಂದ 300 ಊಟ ಮಾರಾಟವಾಗುತ್ತಿದ್ದ ಕ್ಯಾಂಟೀನ್‌ಗಳಲ್ಲಿ ಇಂದು 500ರಿಂದ 600ರಷ್ಟು ಆಹಾರದ ಪೊಟ್ಟಣಗಳನ್ನು ವಿತರಿಸಲಾಗಿದೆ. ಕೆಲವು ಕ್ಯಾಂಟೀನ್‌ಗಳಲ್ಲಿ ಆಹಾರ ಪೊಟ್ಟಣಗಳು ಉಳಿದಿದ್ದವು. ಅವುಗಳನ್ನು ಹೆಚ್ಚು ಬೇಡಿಕೆ ಇದ್ದ ಕ್ಯಾಂಟೀನ್‌ಗಳಿಗೆ ಸಾಗಿಸಿ ಅಲ್ಲಿ ವಿತರಿಸಿದ್ದೇವೆ. ತಯಾರಿಸಿದ ಆಹಾರ ವ್ಯರ್ಥವಾಗುವುದಕ್ಕೆ ಅವಕಾಶ ನೀಡಿಲ್ಲ' ಎಂದು ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಸಂಜೆ ವೇಳೆ ನಗರಾದ್ಯಂತ ದಿಢೀರ್ ಮಳೆಯಾಗಿದ್ದರಿಂದ ಆಹಾರ ಪೊಟ್ಟಣ ವಿತರಣೆಗೆ ಅಡ್ಡಿ ಉಂಟಾಯಿತು. 'ಮಳೆ ಬಂದಿದ್ದರಿಂದ ರಾತ್ರಿ ಊಟ ಪಡೆಯಲು ಜನ ಇಂದಿರಾ ಕ್ಯಾಂಟೀನ್‌ಗಳಿಗೆ ಬರಲು ಅಷ್ಟಾಗಿ ಆಸಕ್ತಿ ತೋರಿಸಿಲ್ಲ. ಸಿದ್ಧಪಡಿಸಿದ ಆಹಾರವನ್ನು ಸಮೀಪದ ವಸತಿ ಪ್ರದೇಶಗಳಿಗೆ ತೆರಳಿ ಬಡವರಿಗೆ ವಿತರಿಸುವಂತೆ ಸೂಚಿಸಿದ್ದೇವೆ. ರಾತ್ರಿ ವೇಳೆ ಯಾವಾಗಲೂ ಆಹಾರಕ್ಕೆ ಬೇಡಿಕೆ ಕಡಿಮೆ ಇರುತ್ತದೆ. ಹಾಗಾಗಿ ಮಧ್ಯಾಹ್ನ ತಯಾರಿಸಿದ ಅರ್ಧದಷ್ಟು ಆಹಾರವನ್ನು ಮಾತ್ರ ರಾತ್ರಿ ಊಟಕ್ಕೆ ತಯಾರಿಸಿದ್ದೆವು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಆಹಾರದ ಉಚಿತ ವಿತರಣೆ ಮೇ 24ರವರೆಗೆ ಮುಂದುವರಿಯಲಿದೆ



ಸಂಪಂಗಿರಾಮನಗರದ ಇಂದಿರಾ ಕ್ಯಾಂಟೀನ್‌ನಲ್ಲಿ ಆಹಾರದ ಪೊಟ್ಟಣ ಪಡೆಯಲು ಬುಧವಾರ ಸಾಲುಗಟ್ಟಿ ನಿಂತಿದ್ದ ಜನ
–ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ವಿತರಣೆಗೆ ಮಳೆ ಅಡ್ಡಿ
- ಮೊದಲ ದಿನ 2.20 ಲಕ್ಷ ಪೊಟ್ಟಣಗಳ ವಿತರಣೆ



ಗೌರವ ಗುಪ್ತ ಅವರು ಧರ್ಮರಾಯಸ್ವಾಮಿ ವಾರ್ಡ್‌ನ ಇಂದಿರಾ ಕ್ಯಾಂಟೀನ್ ಅಡುಗೆ ಮನೆಯಲ್ಲಿ ಆಹಾರದ ರುಚಿ ನೋಡಿದರು

ರುಚಿ ಸವಿದ ಮುಖ್ಯ ಆಯುಕ್ತ

ಧರ್ಮರಾಯಸ್ವಾಮಿ ವಾರ್ಡ್ ವ್ಯಾಪ್ತಿಯ ಇಂದಿರಾ ಕ್ಯಾಂಟೀನ್ ಅಡುಗೆ ಮನೆಗೆ ಬುಧವಾರ ಭೇಟಿ ನೀಡಿದ ಗೌರವ್ ಗುಪ್ತ ಆಹಾರದ ರುಚಿಯನ್ನು ಸವಿದರು. ಇದೇ ರೀತಿಯ ರುಚಿಯನ್ನು ನಿತ್ಯವೂ ಕಾಯ್ದುಕೊಳ್ಳಬೇಕು ಎಂದು ಸೂಚಿಸಿದರು.

'ಅಡುಗೆ ಮನೆಯಲ್ಲಿ ಕೋವಿಡ್ ಹರಡುವಿಕೆ ನಿಯಂತ್ರಣ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಹಾಗೂ ಶುಚಿತ್ವ ಕಾಪಾಡಿಕೊಳ್ಳಬೇಕು' ಎಂದು ನಿರ್ದೇಶನ ನೀಡಿದರು.

'ನಗರದಲ್ಲಿ 15 ಇಂದಿರಾ ಕ್ಯಾಂಟೀನ್ ಅಡುಗೆ ಮನೆಗಳಿವೆ. ಅಲ್ಲಿಂದ ಕಂಟೈನರ್‌ಗಳ ಮೂಲಕ ಎಲ್ಲ ಕ್ಯಾಂಟೀನ್‌ಗಳಿಗೆ ಕೊಂಡೊಯ್ದು ಅಲ್ಲಿ ಪೊಟ್ಟಣಗಳನ್ನು ತಯಾರಿಸಿ ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ. ಒಂದು ಹೊತ್ತಿಗೆ 1 ಲಕ್ಷದಂತೆ ದಿನಕ್ಕೆ 3 ಲಕ್ಷ ಆಹಾರ ಪೊಟ್ಟಣಗಳನ್ನು ವಿತರಿಸಲಿದ್ದೇವೆ' ಎಂದು ವಿವರಿಸಿದರು.

ಚಿಕ್ಕಪೇಟೆ ವಾರ್ಡ್‌ನ ಇಂದಿರಾ ಕ್ಯಾಂಟೀನ್‌ಗೆ ಭೇಟಿ ನೀಡದ ಅವರು ಆಹಾರ ಪೊಟ್ಟಣಗಳನ್ನು ವಿತರಿಸುವುದನ್ನು ಪರಿಶೀಲಿಸಿದರು. ಜಂಟಿ ಆಯುಕ್ತ (ಹಣಕಾಸು) ವೆಂಕಟೇಶ್, ಮುಖ್ಯ ಆರೋಗ್ಯ ಅಧಿಕಾರಿ ಡಾ. ಬಿ.ಕೆ. ವಿಜಯೇಂದ್ರ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಕಾಳಸಂತೆಯಲ್ಲಿ ರೆಮ್‌ಡಿಸಿವಿರ್: ಐವರು ಶುಶ್ರೂಷಕರ ಬಂಧನ

ಮೈಸೂರು: ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ಕಾಳಸಂತೆಯಲ್ಲಿ ಮಾರುತ್ತಿದ್ದ ಎರಡು ಜಾಲವನ್ನು ಪತ್ತೆ ಮಾಡಿರುವ ಮೈಸೂರು ಸಿಸಿಬಿ ಪೊಲೀಸರು, ಐವರು ಶುಶ್ರೂಷಕರನ್ನು ಬುಧವಾರ ಬಂಧಿಸಿದ್ದಾರೆ.

ಜೆ.ಪಿ.ನಗರದ ಕಾಮಾಕ್ಷಿ ಆಸ್ಪತ್ರೆಯ ಜಿ.ಸುರೇಶ್, ಕೆ.ಆರ್. ಆಸ್ಪತ್ರೆಯ ಡಿ.ಎಂ.ರಾಘವೇಂದ್ರ ಮತ್ತು ಅಶೋಕ, ವಿಶ್ವೇಶ್ವರ ನಗರದ ಗಿರೀಶ್‌ಚಂದ್ರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ (ಜಿಸಿಎಸ್) ಕೆ.ರಾಜೇಶ್ ಹಾಗೂ ಡಿ.ವಿ. ಮಲ್ಲೇಶ್ ಬಂಧಿತರು.

ಆರೋಪಿ ಸುರೇಶ್, ಕಾಮಾಕ್ಷಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ನೀಡಬೇಕಿದ್ದ ರೆಮ್‌ಡಿಸಿವಿರ್ ಚುಚ್ಚುಮದ್ದನ್ನು (4 ಕೇವೆಫಾರ್, ರೆಮ್‌ಡಿಸಿವಿರ್ 100 ಎಂಜಿ/20 ಎಂಎಲ್), ಕಾಳಸಂತೆಯಲ್ಲಿ ಮಾರಲು ರಾಘವೇಂದ್ರ ಮತ್ತು ಅಶೋಕ ಅವರಿಗೆ ನೀಡಿದ್ದಾರೆ. ಈ ಮೂವರನ್ನು ನಗರದ ಕೆ.ಆರ್. ಮೊಹಲ್ಲಾದ ಶಂಕರಮಠ ರಸ್ತೆಯಲ್ಲಿರುವ, ನಟರಾಜ ಪ್ರೌಢಶಾಲೆಯ ಮುಂಭಾಗ ಬಂಧಿಸಿರುವ ಪೊಲೀಸರು, ಅವರಿಂದ ₹ 70 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ವಿಶ್ವೇಶ್ವರನಗರದಲ್ಲಿರುವ ಗಿರೀಶ್ ಚಂದ್ರ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ರೋಗಿಗಳಿಗೆ ಕೊಡಬೇಕಿದ್ದ 6 ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿದ, ಇದೇ ಆಸ್ಪತ್ರೆಯ ಶುಶ್ರೂಷಕರಾದ ರಾಜೇಶ, ಮಲ್ಲೇಶ್‌ನನ್ನು ಖಚಿತ ಮಾಹಿತಿ ಮೇರೆಗೆ ಗಾಂಧಿನಗರದಲ್ಲಿನ ವೃದ್ಧಾಶ್ರಮದದ ಬಳಿ ಬಂಧಿಸಿದ್ದಾರೆ ಎಂದು ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ಕೋವಿಡ್‌ನಿಂದ ಸಾವು: ಪಂಚಾಯಿತಿ ಸಿಬ್ಬಂದಿಯಿಂದ ಶವಸಂಸ್ಕಾರ



ಕನಕಪುರ: ಕೊರೊನಾ ಸೋಂಕಿನಿಂದ ಮೃತಪಟ್ಟ ವ್ಯಕ್ತಿಯ ಶವಸಂಸ್ಕಾರ ಮಾಡಲು ಮೃತರ ಕುಟುಂಬಸ್ಥರು ಮುಂದೆ ಬಾರದಿದ್ದರಿಂದ ಗ್ರಾಮ ಪಂಚಾಯಿತಿ ಪಿಡಿಒ ಮತ್ತು ಸಿಬ್ಬಂದಿಯೇ ಬುಧವಾರ ಅಂತ್ಯಕ್ರಿಯೆ ನೆರವೇರಿಸಿದರು.

ತಾಲ್ಲೂಕಿನ ಹಾರೋಹಳ್ಳಿ ಹೋಬಳಿಯ ಕೊಳ್ಳಿಗನಹಳ್ಳಿ ಗ್ರಾಮ ಪಂಚಾಯಿತಿವ್ಯಾಪ್ತಿಯಗಾರೇಪಾಳ್ಯದವಿನಾಯಕನಗರದನಾಗರಾಜು (55) ಕೊರೊನಾ ಸೋಂಕಿನಿಂದ ಮೃತಪಟ್ಟಿದ್ದರು. ಅವರ ಅಂತ್ಯಸಂಸ್ಕಾರವನ್ನು ಪಿಡಿಒ ದೊಡ್ಡರಂಗೇಗೌಡ ಮತ್ತು ಪಂಚಾಯಿತಿ ಸಿಬ್ಬಂದಿ ನೆರವೇರಿಸಿದರು. ನಾಗರಾಜ್ ಅವರಿಗೆ ಕೋವಿಡ್ ಸೋಂಕು ದೃಢಪಟ್ಟು ಬೆಂಗಳೂರಿನ ರಾಜರಾಜೇಶ್ವರಿ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಸಂಜೆ ನಿಧನರಾದರು.

ಮೃತರ ಮೃತದೇಹವನ್ನು ಗ್ರಾಮಕ್ಕೆ ತಂದಾಗ ಕುಟುಂಬದವರು ಶವಸಂಸ್ಕಾರ ನೆರವೇರಿಸಲು ಮುಂದೆ ಬರಲಿಲ್ಲ. ಪಂಚಾಯಿತಿ ಸಿಬ್ಬಂದಿಯೇ ಪಿಪಿಇ ಕಿಟ್ ಧರಿಸಿ ಅಂತ್ಯಸಂಸ್ಕಾರ ನೆರವೇರಿಸಿದರು.

ಹಾಸಿಗೆ: ನೇರ ದಾಖಲಾತಿಗೆ ಅವಕಾಶ

ಬೆಂಗಳೂರು: ಸೋಂಕಿನ ಲಘು ಲಕ್ಷಣಗಳಿರುವವರು ಕೋವಿಡ್ ರೋಗಿಗಳ ಆರೈಕೆ ಕೇಂದ್ರಕ್ಕೆ ದಾಖಲಾಗುವ ಪ್ರಕ್ರಿಯೆಯನ್ನು ಬಿಬಿಎಂಪಿ ಸರಳಗೊಳಿಸಿದೆ. ಇನ್ನು ಹಾಸಿಗೆಯನ್ನು ಮುಂಚಿತವಾಗಿ ಕಾಯ್ದಿರಿಸದೆಯೇ ನೇರವಾಗಿ ಈ ಕೇಂದ್ರಗಳಿಗೆ ದಾಖಲಾಗಬಹುದು.

ಈ ಹಿಂದೆ ಕೋವಿಡ್ ಆರೈಕೆ ಕೇಂದ್ರಗಳಿಗೆ ದಾಖಲಾಗುವುದಕ್ಕೂ ಸರ್ಕಾರಿ ಕೋಟಾ ಅಡಿ ಹಾಸಿಗೆ ಕಾಯ್ದಿರಿಸುವ ಕೇಂದ್ರೀಕೃತ ವ್ಯವಸ್ಥೆಯ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಹಾಸಿಗೆ ಕಾಯ್ದಿರಿಸಬೇಕಿತ್ತು.

ನೇರವಾಗಿ ಆರೈಕೆ ಕೇಂದ್ರಕ್ಕೆ ಬರುವ ಸೊಂಕಿತರನ್ನು, ಅಲ್ಲಿನ ಚಿಕಿತ್ಸೆ ನಿರ್ಧಾರ ಕೇಂದ್ರದ ವೈದ್ಯರು ತಪಾಸಣೆಗೆ ಒಳಪಡಿಸಲಿದ್ದಾರೆ. ಅವರ ಆರೋಗ್ಯ ಸ್ಥಿತಿಯ ಆಧಾರದಲ್ಲಿ ಅವರಿಗೆ ಕೇಂದ್ರದಲ್ಲೇ ಚಿಕಿತ್ಸೆ ನೀಡಬಹುದೋ ಅಥವಾ ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಬೇಕೋ ಎಂಬ ಬಗ್ಗೆ ಶಿಫಾರಸು ಮಾಡಲಿದ್ದಾರೆ.

ಈ ಕೇಂದ್ರಗಳಿಗೆ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ದೂರವಾಣಿ ಸಂಪರ್ಕವನ್ನೂ ಕಲ್ಪಿಸಲಾಗಿದ್ದು, ಕೇಂದ್ರದ ಸಿಬ್ಬಂದಿ ದಿನದ 24 ಗಂಟೆಯೂ ಕರೆಗಳಿಗೆ ಉತ್ತರಿಸಲಿದ್ದಾರೆ.

ಕೋವಿಡ್ ಕೇಂದ್ರಕ್ಕೆ ದಾಖಲಾಗುವ ಕುರಿತ ಹೆಚ್ಚಿನ ಮಾಹಿತಿಗೆ ನಾಗರಿಕರು ಅಥವಾ ಸೋಂಕಿತರು ಬಿಬಿಎಂಪಿ ಕೇಂದ್ರ ಕಚೇರಿಯ ಕೋವಿಡ್ ಆರೈಕೆ ಕೇಂದ್ರ ಸಹಾಯವಾಣಿಗೂ (080-22493200 ಅಥವಾ 080-22493201) ಕರೆ ಮಾಡಬಹುದು.





ನಗರದಲ್ಲಿ ಬುಧವಾರ ಸಂಜೆ ಕೋಲ್ಮಿಂಚು ಮಿಂಚಿ ಮರೆಯಾಗುವ ಮುನ್ನ ಕ್ಯಾಮೆರಾ ಕಣ್ಣಿನಲ್ಲಿ ಸೆರೆಯಾಗಿದ್ದು ಹೀಗೆ (ಎಡಚಿತ್ರ) ಮೈಸೂರು ರಸ್ತೆಯಲ್ಲಿ ಮಳೆ ನೀರಿನಲ್ಲಿ ಸಾಗಿದ ಕಾರು
– ಪ್ರಜಾವಾಣಿ ಚಿತ್ರಗಳು: ಅನೂಪ್ ರಾಘ.ಟಿ.

ವಾಯುಭಾರ ಕುಸಿತ: ತಂಪೆರೆದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಬ್ಬಿ ಸಮುದ್ರದಲ್ಲಿ ವಾಯುಭಾರ ಕುಸಿತ ಹಾಗೂ ಒಳನಾಡಿನಲ್ಲಿ ಮೇಲ್ಮೈ ಸುಳಿಗಾಳಿ ಉಂಟಾಗಿರುವ ಪರಿಣಾಮ ನಗರದ ಹಲವೆಡೆ ಬುಧವಾರ ಧಾರಾಕಾರ ಮಳೆಯಾಯಿತು.

ರಾಜರಾಜೇಶ್ವರಿ ನಗರ, ಬಿಟಿಎಂ ಬಡಾವಣೆ, ರಾಜಾಜಿನಗರ, ಮಲ್ಲೇಶ್ವರ, ಬಸವನಗುಡಿ, ಯಶವಂತಪುರ, ಕೆ.ಆರ್.ಮಾರುಕಟ್ಟೆ, ಕಾರ್ಪೊರೇಷನ್ ವೃತ್ತ, ಲಾಲ್‌ಬಾಗ್, ಶಾಂತಿನಗರ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿದಂತೆ ವಿವಿಧ ಭಾಗಗಳಲ್ಲಿ ಸಂಜೆಯಿಂದಲೇ ಗಾಳಿ ಸಹಿತ ಹೆಚ್ಚು ಮಳೆ ಸುರಿಯಿತು.

ರಾತ್ರಿವರೆಗೆ ಬಿಟ್ಟು ಬಿಟ್ಟು ಸುರಿದ ಮಳೆಯಿಂದ ರಸ್ತೆಗಳಲ್ಲಿ ನೀರು ಹರಿಯಿತು. ಲಾಕ್‌ಡೌನ್ ಇದ್ದಿದ್ದರಿಂದ ಹೆಚ್ಚು ವಾಹನಗಳು ರಸ್ತೆಯಲ್ಲಿ ಸಂಚರಿಸಲಿಲ್ಲ. ಆದರೆ, ತುರ್ತು ಅಗತ್ಯಗಳಿಗಾಗಿ ಹೊರಬಂದಿದ್ದವರು ಮಳೆಯಿಂದ ಪರದಾಡಿದರು.

ಬೆಂಗಳೂರಿನಲ್ಲಿ ಸರಾಸರಿ 3 ಸೆಂ.ಮೀ ಮಳೆಯಾಗಿದೆ. ಮುಂದಿನ 48 ಗಂಟೆಗಳಲ್ಲಿ ಮೋಡಕವಿದ ವಾತಾವರಣದೊಂದಿಗೆ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆ ಇದೆ. ಮೇ 15 ಮತ್ತು 16ರಂದು ಬೆಂಗಳೂರಿನಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇರುವುದರಿಂದ ಎರಡೂ ದಿನ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

'ಗರಿಷ್ಠ 31 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 22 ಡಿಗ್ರಿ ಸೆಲ್ಸಿಯಸ್ ತಾಪಮಾನ ಇರಲಿದೆ. ಮೇ 17ರವರೆಗೆ ನಗರದಲ್ಲಿ ಮಳೆಯಾಗುವ ಸಾಧ್ಯತೆ ಇದೆ ಎಂದೂ ಮಾಹಿತಿ ನೀಡಿದೆ.

'ಶುಶ್ರೂಷಕರ ಸೇವೆ ಶ್ಲಾಘನೀಯ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಕೊರೊನಾ ಸೋಂಕು ತೀವ್ರಗತಿಯಲ್ಲಿ ಹರಡುತ್ತಿರುವ ಸಂದರ್ಭದಲ್ಲೂ ಧೃತಿಗೆಡದೆ ಶುಶ್ರೂಷಕರು ಮಾಡುತ್ತಿರುವ ಸೇವೆ ಶ್ಲಾಘನೀಯ' ಎಂದು ಕೇಂಬ್ರಿಡ್ಜ್ ಕಾಲೇಜಿನ ಅಧ್ಯಕ್ಷ ಡಿ.ಕೆ.ಮೋಹನ್ ತಿಳಿಸಿದರು.

ಕ್ಷೇತ್ರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಏರ್ಪಡಿಸಿದ್ದ ಶುಶ್ರೂಷಕರ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೊರೊನಾ ಸಂದರ್ಭದಲ್ಲಿ ನರ್ಸ್‌ಗಳ ಸೇವೆ, ತ್ಯಾಗ ಅನನ್ಯ. ಅವರನ್ನು ಅಭಿನಂದಿಸಿ, ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯ. ಅವರು ತಮ್ಮ ಪ್ರಾಣದ ಹಂಗು ತೊರೆದು ಸೇವೆ ಮಾಡುತ್ತಿದ್ದಾರೆ. ಅವರ ಸೇವೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಕುಟುಂಬಗಳಿಂದ ದೂರ ನಿಂತು ಸಾರ್ವಜನಿಕರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಮಾಡುತ್ತಿರುವ ಕಾರ್ಯ ಸ್ಮರಣೀಯ' ಎಂದು ಅವರು ಹೇಳಿದರು.

ನಮ್ಮ ಕಾಲೇಜಿನಲ್ಲಿ ಸೇರುವ ನರ್ಸ್‌ಗಳ ಹತ್ತು ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಿ ಪ್ರೋತ್ಸಾಹಿಸಲಾಗುವುದು ಎಂದು ತಿಳಿಸಿದರು.

ತಾಲ್ಲೂಕು ಆಸ್ಪತ್ರೆಯ ನಲ್ವತ್ತು ಮಂದಿಗೆ ಟಿ ಫ್ಲಾಸ್ಕ್, ಕುಕ್ಕರ್, ಹಾಟ್ ಬಾಕ್ಸ್ ವಿತರಿಸಲಾಯಿತು.

ಕೂದಲು ಕತ್ತರಿಸಲು ನಿರಾಕರಣೆ ಅಸ್ಪೃಶ್ಯತೆ ಆರೋಪ

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ(ಗದಗ): ಸಮೀಪದ ಕುಂದ್ರಳ್ಳಿ ಗ್ರಾಮದಲ್ಲಿ ಹರಿಜನಕೇರಿ ನಿವಾಸಿಗಳ ಕೂದಲು ಕತ್ತರಿಸಲು ನಿರಾಕರಿಸಿದ ಸಲೂನ್ ಅಂಗಡಿ ಮಾಲೀಕನ ವಿರುದ್ಧ ಮಂಗಳವಾರ ಕೇರಿಯ ಯುವಕರು ಅಸ್ಪೃಶ್ಯತೆ ಆರೋಪ ಮಾಡಿದ್ದಾರೆ.

ಗ್ರಾಮದಲ್ಲಿ ಅಂದಾಜು 50ಕ್ಕೂ ಹೆಚ್ಚು ಹರಿಜನ ಕುಟುಂಬಗಳು ಇದ್ದು, ಮಂಗಳವಾರ ಕೆಲ ಯುವಕರು ಅಂಗಡಿಗೆ ಬಂದು ಕೂದಲು ಕತ್ತರಿಸಲು ಒತ್ತಾಯಿಸಿದರು. ಆದರೆ, ಅಂಗಡಿಯವರು ನಿರಾಕರಿಸಿದರು ಎನ್ನಲಾಗಿದೆ. ಇದರಿಂದ ಯುವಕರು ಮತ್ತು ಅಂಗಡಿಯವರ ಮಧ್ಯೆ ಮಾತಿನ ಚಕಮಕಿ ನಡೆದಿದೆ. 'ಊರಿನ ದೈವದವರು ಒಪ್ಪಿಗೆ ಕೊಟ್ಟರೆ ಮಾತ್ರ ನಿಮಗೆ ಕಟಿಂಗ್ ಮಾಡುತ್ತೇನೆ' ಎಂದು ಅಂಗಡಿ ಮಾಲೀಕ ಹೇಳಿದರು. ಇದರಿಂದ ಆಕ್ರೋಶಗೊಂಡ ಯುವಕರು ಕೇರಿಯ ನಿವಾಸಿಗಳ ಕೂದಲು ಕತ್ತರಿಸಲು ನಿರಾಕರಿಸಲಾಗುತ್ತಿದ್ದು, ಗ್ರಾಮದಲ್ಲಿ ಅಸ್ಪೃಶ್ಯತೆ ಈಗಲೂ ಜೀವಂತವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಶಾಸಕರ ಸ್ವಕ್ಷೇತ್ರ ಕುಂದ್ರಳ್ಳಿ ಗ್ರಾಮದಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ಇದಕ್ಕೆ ಸಲೂನ್ ಅಂಗಡಿಯವರ ವರ್ತನೆಯೇ ಸಾಕ್ಷಿಯಾಗಿದೆ' ಎಂದು ಸಂಕದಾಳ ಗ್ರಾಮದ ನಿವಾಸಿ ವಕೀಲ ಮೈಲಾರೆಪ್ಪ ಡಿ.ಎಚ್. ಆರೋಪಿಸಿದ್ದಾರೆ.

'ಈವರೆಗೆ ಊರಿನ ಕೇರಿಯ ಜನ ನಮ್ಮ ಅಂಗಡಿಗೆ ಒಮ್ಮೆಯೂ ಬಂದಿಲ್ಲ. ಅವರೆಲ್ಲ ಲಕ್ಷ್ಮೇಶ್ವರಕ್ಕೆ ಹೋಗಿ ಬರುತ್ತಿದ್ದರು. ಈಗ ಏಕಾಏಕಿ ಬಂದು ಹೀಗೆ ಹೇಳುತ್ತಿದ್ದಾರೆ' ಎಂದು ಸಲೂನ್ ಅಂಗಡಿ ಮಾಲೀಕರು ತಿಳಿಸಿದರು.

ವಿಷಯ ತಿಳಿದ ಲಕ್ಷ್ಮೇಶ್ವರ ಠಾಣೆ ಪೊಲೀಸರು ಅಂಗಡಿಯವರನ್ನು ಕರೆಸಿ ಎಲ್ಲರಿಗೂ ಕೂದಲು ಕತ್ತರಿಸುವಂತೆ ಸೂಚನೆ ನೀಡಿದ್ದಾರೆ.

ಶವಗಳೊಂದಿಗೆ ಇದ್ದ ಮಾನಸಿಕ ಅಸ್ವಸ್ಥೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಾನಸಿಕ ಅಸ್ವಸ್ಥೆಯೊಬ್ಬರು ತನ್ನ ತಾಯಿ ಹಾಗೂ ಸಹೋದರನ ಶವಗಳ ಜೊತೆಗೆ ಎರಡು ದಿನ ಮನೆಯಲ್ಲೇ ಕಳೆದಿರುವ ಘಟನೆ ರಾಜರಾಜೇಶ್ವರಿ ನಗರ ಠಾಣಾ ವ್ಯಾಪ್ತಿಯ ಬಿಇಎಂಎಲ್ ಬಡಾವಣೆಯಲ್ಲಿ ನಡೆದಿದೆ.

ತಾಯಿ ಆರ್ಯಾಂಬ (65) ಹಾಗೂ ಹರೀಶ್ (45) ಎಂಬುವರ ಮೃತದೇಹಗಳು ಮನೆಯಲ್ಲಿ ಪತ್ತೆಯಾಗಿದ್ದು, ಶ್ರೀಲಕ್ಷ್ಮಿ ಎಂಬುವರು ಅದೇ ಮನೆಯಲ್ಲಿ ವಾಸವಿದ್ದ ಮಾನಸಿಕ ಅಸ್ವಸ್ಥೆ ಎನ್ನಲಾಗಿದೆ.

'ಬುಧವಾರ ಮಧ್ಯಾಹ್ನ ಮನೆಯಿಂದ ದುರ್ವಾಸನೆ ಬರುತ್ತಿರುವುದನ್ನು ಗಮನಿಸಿದ ಮನೆಯ ಮಾಲೀಕ ಪ್ರವೀಣ್, ವಿಚಾರವನ್ನು ಪೊಲೀಸರಿಗೆ ತಿಳಿಸಿದ್ದರು. ಸ್ಥಳಕ್ಕೆ ಬಂದಿದ್ದ ಪೊಲೀಸರಿಗೆ ಮೊದಲಿಗೆ ಕೋಣೆಯೊಂದರಲ್ಲಿ ಹರೀಶ್ ಮೃತಪಟ್ಟಿರುವುದು ಕಂಡುಬಂತು. ಮನೆ ಬಾಗಿಲು ಮುರಿದು ಒಳ ಪ್ರವೇಶಿಸಿದಾಗ ಮತ್ತೊಂದು ಕೋಣೆಯಲ್ಲಿ ಆರ್ಯಾಂಬ ಅವರ ಮೃತದೇಹ ಪತ್ತೆಯಾಯಿತು'.

'ಮನೆಯನ್ನು ಪರಿಶೀಲಿಸಿದಾಗ ಮತ್ತೊಂದು ಕೋಣೆಯಲ್ಲಿ ಶ್ರೀಲಕ್ಷ್ಮಿ ಇದ್ದರು. ಆದರೆ, ಅವರು ನಡೆಯುವ ಸ್ಥಿತಿಯಲ್ಲಿ ಇರಲಿಲ್ಲ. ಬಳಿಕ ಅವರು ಮಾನಸಿಕ ಅಸ್ವಸ್ಥರೆಂದು ತಿಳಿದು ಬಂತು. ಅವರಿಗೆ ಮನೆಯಲ್ಲಿ ಇಬ್ಬರೂ ಮೃತಪಟ್ಟಿರುವ ಅರಿವೂ ಇಲ್ಲ. ಆರ್ಯಾಂಬ ಹಾಗೂ ಹರೀಶ್ ಸೋಮವಾರ ಮೃತಪಟ್ಟಿರಬಹುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಮೃತದೇಹಗಳನ್ನು ವಿಕ್ಟೋರಿಯಾ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದೆ. ಈವರೆಗೆ ಅವರ ಸಾವಿಗೆ ನಿಖರ ಮಾಹಿತಿ ತಿಳಿದಿಲ್ಲ. ಮರಣೋತ್ತರ ಪರೀಕ್ಷೆಯ ನಂತರ ವಿಚಾರ ತಿಳಿಯಲಿದೆ. ಘಟನೆ ಸಂಬಂಧ ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ್ ತಿಳಿಸಿದರು.

'ಏ.25ರಂದು ರ್‍ಯಾಪಿಡ್ ಆ್ಯಂಟಿಜೆನ್ ಟೆಸ್ಟ್‌ನಲ್ಲಿ ಹರೀಶ್ ಅವರಿಗೆ ಕೊರೊನಾ ಸೋಂಕು ದೃಢವಾಗಿತ್ತು. ಈ ಸಂಬಂಧವೂ ಪೊಲೀಸರು ಮಾಹಿತಿ ಪಡೆಯುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಡಯಾಲಿಸಿಸ್ ಕೇಂದ್ರದ ಕಟ್ಟಡ ಬಳಸಿ

ನಾಗರಬಾವಿ: ಸಿ.ಟಿ.ಸ್ಕ್ಯಾನ್ ಸೇವೆ ಒದಗಿಸಲು ಕಟ್ಟಡ ಬಳಸುವಂತೆ ನಾಗರಿಕರ ಒತ್ತಾಯ

• ಚಿಕ್ಕರಾಮು

ರಾಜರಾಜೇಶ್ವರಿನಗರ: ನಾಗರಬಾವಿ ಬಿಡಿಎ ಕಾಂಪ್ಲೆಕ್ಸ್ ಸಮೀಪದ ರಾಮಕೃಷ್ಣ ಹೆಗಡೆ ಉದ್ಯಾನದ ಬಳಿ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ಡಯಾಲಿಸಿಸ್ ಕೇಂದ್ರ ಸಾರ್ವಜನಿಕರ ಉಪಯೋಗಕ್ಕೆ ಬಾರದೆ, ನನೆಗುದಿಗೆ ಬಿದ್ದಿದೆ. ಈ ಕಟ್ಟಡ ಬಳಸಿಕೊಂಡು ಸಿ.ಟಿ. ಸ್ಕ್ಯಾನ್ ಸೇವೆ ಒದಗಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಡಯಾಲಿಸಿಸ್ ಕೇಂದ್ರ ನಿರ್ಮಾಣವಾಗಿತ್ತು. ಈ ಕೇಂದ್ರವನ್ನು ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2018ರ ಮಾರ್ಚ್ 22ರಂದು ಉದ್ಘಾಟಿಸಿದ್ದರು. ಇಲ್ಲಿ ಹೆಸರಿಗೆ ಮಾತ್ರ 'ಡಯಾಲಿಸಿಸ್ ಕೇಂದ್ರ' ಎಂಬ ದೊಡ್ಡ ಫಲಕ ಅಳವಡಿಸಲಾಗಿದೆ. ಆದರೆ, ಇಲ್ಲಿ ಈ ಸೇವೆ ಲಭ್ಯ ಇಲ್ಲ.

ಕೊರೊನಾ ಎರಡನೇ ಅಲೆಯಲ್ಲಿ ಅನೇಕರು ಸೋಂಕು ಹೊಂದಿದ್ದರೂ ಕ್ಷಿಪ್ರ ಆ್ಯಂಟಿಜೆನ್ ಪರೀಕ್ಷೆಯಲ್ಲಿ ಅಥವಾ ಆರ್‌ಟಿ–ಪಿಸಿಆರ್ ಪರೀಕ್ಷೆಗಳಲ್ಲಿ ಅದು ಪತ್ತೆಯಾಗುತ್ತಿಲ್ಲ. ಇಂತಹವರ ಶ್ವಾಸಕೋಶದಲ್ಲಿ ಸೋಂಕು ವ್ಯಾಪಿಸಿರುವುದು ಸಿಟಿ ಸ್ಕ್ಯಾನ್ ನಡೆಸಿದಾಗ ಮಾತ್ರ ಪತ್ತೆಯಾಗುತ್ತಿದೆ. ಕೊರೊನಾ ಪರೀಕ್ಷೆಯಲ್ಲಿ ಸೋಂಕು ದೃಢಪಡದವರಲ್ಲೂ ಉಸಿರಾಟದ ತೀವ್ರ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಇಂತಹ ಸಮಸ್ಯೆ ಎದುರಿಸುತ್ತಿರುವ ಈ ಪ್ರದೇಶದ ಜನರು ಸಿ.ಟಿ. ಸ್ಕ್ಯಾನ್ ಮಾಡಿಸಿಕೊಳ್ಳಲು ಖಾಸಗಿ ಪ್ರಯೋಗಾಲಯಗಳನ್ನೇ ಅವಲಂಬಿಸಬೇಕಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿ ಬೆಲೆ ನೀಡಿ ಪರೀಕ್ಷೆ ಮಾಡಿಸಿಕೊಳ್ಳುವುದು ಬಡವರ ಪಾಲಿಗೆ ಹೊರೆಯಾಗುತ್ತಿದೆ. ಅಂತಹವರು ಸಿಟಿ ಸ್ಕ್ಯಾನ್ ಮಾಡಿಸಿಕೊಳ್ಳಲು ವಿಕ್ಟೋರಿಯಾ, ಬೌರಿಂಗ್, ಕೆ.ಸಿ. ಜನರಲ್ ಮೊದಲಾದ ಸರ್ಕಾರಿ ಆಸ್ಪತ್ರೆಗಳಿಗೆ ಅಲೆಯಬೇಕಾಗಿದೆ.

ಈ ಸರ್ಕಾರಿ ಆಸ್ಪತ್ರೆಗಳಲ್ಲಿ ನಿತ್ಯ ನಿರ್ದಿಷ್ಟ ಸಂಖ್ಯೆಯ ಮಂದಿಗೆ ಮಾತ್ರ ಸಿ.ಟಿ.ಸ್ಕ್ಯಾನ್ ನಡೆಸಲಾಗುತ್ತದೆ. ಹಾಗಾಗಿ ಅನೇಕ ಬಡವರು ಸಕಾಲದಲ್ಲಿ ಸಿ.ಟಿ. ಸ್ಕ್ಯಾನ್ ಮಾಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ವಿಳಂಬದಿಂದಾಗಿ ಆರೋಗ್ಯ ತೀರಾ ಹದಗೆಟ್ಟು, ಸಕಾಲದಲ್ಲಿ ಚಿಕಿತ್ಸೆ ಸಿಗದೇ ಅನೇಕರು ಪ್ರಾಣವನ್ನೇ ಕಳೆದುಕೊಂಡಿದ್ದಾರೆ. ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ಡಯಾಲಿಸಿಸ್ ಕೇಂದ್ರದಲ್ಲಿ ಸಿ.ಟಿ.ಸ್ಕ್ಯಾನ್ ಯಂತ್ರ ಅಳವಡಿಸಿ ಕೊರೊನಾ ಪರೀಕ್ಷೆಗಳು ನಡೆಸಿದರೆ ಸಾವಿರಾರು ಜನರಿಗೆ ಅನುಕೂಲವಾಗಲಿದೆ ಎನ್ನುತ್ತಾರೆ ಸ್ಥಳೀಯರು.

'ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರ ಪ್ರತಿ ವಾರ್ಡ್‌ಗೆ ಸಾಕಷ್ಟು ಅನುದಾನ ಬಿಡುಗಡೆ ಮಾಡಿದೆ. ಅದನ್ನು ಬಳಸಿ ಸಿ.ಟಿ.ಸ್ಕ್ಯಾನ್ ಯಂತ್ರವನ್ನು ಖರೀದಿಸಿ ಈ ಪ್ರದೇಶದವರಿಗೆ ಸೇವೆ ಒದಗಿಸಬೇಕು. ಇದರಿಂದ ಸಾಕಷ್ಟು ಮಂದಿಯ ಜೀವ ಉಳಿಸಬಹುದು' ಎಂದು ಸ್ಥಳೀಯ ನಿವಾಸಿ ಭಾಸ್ಕರ್ ರಾವ್ ಸಲಹೆ ನೀಡಿದರು.

ಹಿರಿಯ ನಾಗರಿಕ ನಂಜಪ್ಪ, 'ಸರ್ಕಾರ ಕೂಡಲೇ ಈ ಕಟ್ಟಡದಲ್ಲಿ ಸಿ.ಟಿ.ಸ್ಕ್ಯಾನ್ ಕೇಂದ್ರ ತೆರೆಯಬೇಕು. ಕೊರೊನಾ ನಿಯಂತ್ರಣಕ್ಕೆ ಬಿಡುಗಡೆಯಾದ ಹಣವನ್ನು ಇದಕ್ಕೆ ಬಳಸಬೇಕು. ಜನರ ಜೀವ ಉಳಿಸುವ ಕೆಲಸವನ್ನು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಮಾಡಬೇಕು' ಎಂದು ಅವರು ಒತ್ತಾಯಿಸಿದರು.



ನಾಗರಬಾವಿಯ ಡಯಾಲಿಸಿಸ್ ಕೇಂದ್ರದ ಕಟ್ಟಡ

'ಕೋವಿಡ್ ಪರೀಕ್ಷೆಗೂ ಬಳಕೆಯಾಗಲಿ'

'ಕೊರೊನಾ ಪರೀಕ್ಷೆಗಾಗಿ ಜನರು ಮಲ್ಲತ್ತಹಳ್ಳಿಯ ಸಾರ್ವಜನಿಕ ಪ್ರಾಥಮಿಕ ಆರೋಗ್ಯ ಕೇಂದ್ರ (ಪಿಎಚ್‌ಸಿ) ಸಮೀಪದ ಬಿಬಿಎಂಪಿ ಆಟದ ಮೈದಾನದಲ್ಲಿ ಮುಂಜಾನೆಯಿಂದ ಸಂಜೆವರೆಗೆ ಬಿಸಿಲು, ಮಳೆ ಎನ್ನದೇ ಕಿಲೋಮೀಟರ್ ಉದ್ದದ ಸರದಿ ಸಾಲಿನಲ್ಲಿ ನಿಂತು ಬಯಲಿನಲ್ಲಿಯೇ ಪರೀಕ್ಷೆ ಮಾಡಿಸಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾಗರಬಾವಿಯ ಡಯಾಲಿಸಿಸ್ ಕೇಂದ್ರದಲ್ಲೇ ಕೋವಿಡ್ ಪರೀಕ್ಷಾ ಕೇಂದ್ರವನ್ನೂ ಆರಂಭಿಸಿದರೆ ಮಲ್ಲತ್ತಹಳ್ಳಿಯ ಪಿಎಚ್‌ಸಿ ಮೇಲಿನ ಒತ್ತಡವೂ ಕಡಿಮೆ ಆಗಲಿದೆ' ಎಂದು ಸ್ಥಳೀಯರೊಬ್ಬರು ಸಲಹೆ ನೀಡಿದರು.

ಜನರ ಸಲಹೆಗಳು

- ಇಲ್ಲಿಯೇ ಸಿ.ಟಿ.ಸ್ಕ್ಯಾನ್ ಪರೀಕ್ಷೆಗಳು ನಡೆಸಿದರೆ ಬಡವರಿಗೆ ಅನುಕೂಲ
- ಅನುದಾನಗಳನ್ನು ಬಳಸಿ ಸಿ.ಟಿ. ಸ್ಕ್ಯಾನ್ ಯಂತ್ರ ಖರೀದಿಸಿ

ಚಿತ್ರಾವಳಿ





1. ನಗರದ ಎಂ.ಸಿ. ಲೇಔಟ್ 13ನೇ ಮುಖ್ಯರಸ್ತೆಯಲ್ಲಿ ಒಳಚರಂಡಿ ನಿರ್ಮಾಣ ಕಾಮಗಾರಿ ನಡೆಯುತ್ತಿರುವ ದೃಶ್ಯ ಬುಧವಾರ ಕಂಡುಬಂತು
2. ನಗರದ ಬಸವನಗುಡಿಯಲ್ಲಿ ಶಾಲಾ ಬಸ್‌ನಲ್ಲಿ ಆಮ್ಲಜನಕದ ಸಿಲಿಂಡರ್‌ಗಳನ್ನು ಅಳವಡಿಸಲಾಗುತ್ತಿದ್ದು ಗುರುವಾರದಿಂದ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ

ಕೋವಿಡ್ ಲಸಿಕೆಗೆ ದಿಢೀರ್ ಬೇಡಿಕೆ ಹೆಚ್ಚಳ • ಅವಶ್ಯಕತೆಯಷ್ಟು ಲಸಿಕೆ ಪೂರೈಕೆ ಆಗುತ್ತಿಲ್ಲ

ಬಿಬಿಎಂಪಿ ಬಳಿ 40 ಸಾವಿರ ಲಸಿಕೆ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಾಸಪ್ಪ ಆಸ್ಪತ್ರೆಯ ಲಸಿಕೆ ದಾಸ್ತಾನು ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸುಮಾರು 40,000 ವ್ಯಾಕ್ಸಿನ್ ಲಭ್ಯ ಇದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, 'ನಗರದಲ್ಲಿ ಬೇಡಿಕೆ ಇರುವಷ್ಟು ಪ್ರಮಾಣದಲ್ಲಿ ಲಸಿಕೆ ಪೂರೈಕೆಯಾಗಿಲ್ಲ. ಹಾಗಾಗಿ ಅವಶ್ಯಕತೆ ಇರುವವರಿಗೆ ಆದ್ಯತೆ ಮೇರೆಗೆ ಲಸಿಕೆ ನೀಡಲಾಗುತ್ತಿದೆ. ಈಗಾಗಲೇ ಮೊದಲ ಡೋಸ್ ಹಾಕಿಸಿಕೊಂಡವರು ಎರಡನೇ ಡೋಸ್ ಪಡೆಯಬೇಕಿದೆ. ಅಂತಹವರಿಗೆ ಮೊದಲು ನೀಡುತ್ತೇವೆ. ಮೊದಲನೇ ಡೋಸ್ ಪಡೆಯುವವರಲ್ಲೂ 45 ವರ್ಷ ಮೇಲ್ಪಟ್ಟವರಿಗೆ ಆದ್ಯತೆ ನೀಡಲಾಗುತ್ತದೆ. ಬಿಬಿಎಂಪಿಗೆ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ಪೂರೈಕೆಯಾದ ನಂತರ 45 ವರ್ಷ ಮೇಲ್ಪಟ್ಟವರು ಹಾಗೂ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡಲಿದ್ದೇವೆ' ಎಂದು ತಿಳಿಸಿದರು.




ಸಾಂದರ್ಭಿಕ ಚಿತ್ರ

'ಲಸಿಕೆ ದಾಸ್ತಾನು ಮಾಡಲು ಸಾಕಷ್ಟು ವ್ಯವಸ್ಥೆ ಮಾಡಿಕೊಂಡಿದ್ದೇವೆ. ಪೂರೈಕೆ ಆದಷ್ಟು ಲಸಿಕೆಯನ್ನು ವಿತರಣೆ ಮಾಡುತ್ತಿದ್ದೇವೆ. ನಾಗರಿಕರು ಕೋವಿನ್ ಪೋರ್ಟಲ್‌ನಲ್ಲಿ ಮೊದಲೇ ನೋಂದಣಿ ಮಾಡಿಕೊಂಡು, ಸಮಯ ಹಾಗೂ ಸ್ಥಳ ನಿಗದಿಯಾದ ನಂತರವೇ ಲಸಿಕೆ ಕೇಂದ್ರಗಳಿಗೆ ಬರಬೇಕು. ಇದರಿಂದ ಲಸಿಕಾ ಕೇಂದ್ರಗಳಲ್ಲಿ ಜನ ಗುಂಪುಗೂಡುವುದನ್ನು ತಡೆಯಬಹುದು' ಎಂದರು.

'ಖಾಸಗಿ ಆಸ್ಪತ್ರೆಗಳ ಲಸಿಕಾ ಕೇಂದ್ರಗಳೂ ಕೋವಿಡ್ ಲಸಿಕೆಯ ಅಭಾವ ಎದುರಿಸುತ್ತಿವೆ. ಕೆಲ ಆಸ್ಪತ್ರೆಗಳಲ್ಲಿ ಮಾತ್ರ ಲಸಿಕೆ ನೀಡಲಾಗುತ್ತಿದೆ. ಬೆಂಗಳೂರಿನ ಜನಸಂಖ್ಯೆಗೆ ಅನುಗುಣವಾಗಿ ಲಸಿಕೆ ಪೂರೈಸುವಂತೆ ಬೇಡಿಕೆ ಸಲ್ಲಿಸಿದ್ದೇವೆ' ಎಂದು ತಿಳಿಸಿದರು.

'ನಗರದಲ್ಲಿ ನಿತ್ಯ 35 ಸಾವಿರದಿಂದ 38 ಸಾವಿರ ಮಂದಿಗೆ ಕೋವಿಡ್ ಲಸಿಕೆ ಹಾಕಲಾಗುತ್ತಿದೆ. ಈ ಬೇಡಿಕೆಗೆ ಅನುಗುಣವಾಗಿ ಸರ್ಕಾರ ಲಸಿಕೆ ಪೂರೈಸಿದೆ. ಆದರೆ, ಈಗ ಬೇಡಿಕೆ ದಿಢೀರ್ ಹೆಚ್ಚಳವಾಗಿದೆ. ಹಾಗಾಗಿ ಸಮಸ್ಯೆಯಾಗಿದೆ. ಬುಧವಾರವೂ ಸರ್ಕಾರದಿಂದ 40 ಸಾವಿರ ಕೋವಿಶೀಲ್ಡ್ ಲಸಿಕೆ ಪೂರೈಕೆ ಆಗಿದ್ದು, ಲಸಿಕಾ ಕೇಂದ್ರಗಳಿಗೆ ತಲುಪಿಸಿದ್ದೇವೆ. ಅದರಲ್ಲಿ ಶೇ 70ರಷ್ಟನ್ನು ಎರಡನೇ ಡೋಸ್ ಪಡೆಯುವವರಿಗೆ ಮೀಸಲಿಡಲಿದ್ದೇವೆ. ಇನ್ನುಳಿದ ಶೇ 30ರಷ್ಟನ್ನು ಮೊದಲ ಲಸಿಕೆ ಪಡೆಯುವ 45 ವರ್ಷ ಮೇಲ್ಪಟ್ಟವರಿಗೆ ಆದ್ಯತೆ ಮೇರೆಗೆ ನೀಡಲಿದ್ದೇವೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಸದ್ಯಕ್ಕೆ ನಿತ್ಯ 40 ಸಾವಿರ ಲಸಿಕೆ ಪೂರೈಕೆ ಆಗುತ್ತಿರುವುದರಿಂದ ಲಸಿಕೆ ಅಭಿಯಾನ ಸಂಪೂರ್ಣ ನಿಲ್ಲಿಸುವ ಪ್ರಮೇಯ ಎದುರಾಗಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.




'ಬಿಬಿಎಂಪಿ ಬಳಿ ಇಲ್ಲ ಕೋವ್ಯಾಕ್ಸೀನ್'

'ಕೋವ್ಯಾಕ್ಸೀನ್ ಲಸಿಕೆ ಸದ್ಯಕ್ಕೆ ಬಿಬಿಎಂಪಿ ಬಳಿ ಇಲ್ಲ. ಹಾಗಾಗಿ ಮೊದಲ ಡೋಸ್ ಕೊವ್ಯಾಕ್ಸೀನ್ ಪಡೆದವರಿಗೆ ಎರಡನೇ ಡೋಸ್ ನೀಡುವುದಕ್ಕೆ ಸಮಸ್ಯೆ ಆಗಿದೆ. ಮುಂದಿನ ವಾರ ಈ ಲಸಿಕೆ ಪೂರೈಕೆ ಆಗುವ ನಿರೀಕ್ಷೆ ಇದೆ' ಎಂದು ಆರೋಗ್ಯ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಕೋವಿಡ್: ಪರೀಕ್ಷಾ ಕಿಟ್ ಕೊರತೆ ಇಲ್ಲ'

ನಗರದಲ್ಲಿ ಕೋವಿಡ್ ಪರೀಕ್ಷೆ ನಡೆಸಲು ಕಿಟ್‌ಗಳ ಕೊರತೆಯಾಗಲೀ, ಪ್ರಯೋಗಾಲಯಗಳ ಕೊರತೆಯಾಗಲಿ ಇಲ್ಲ. ಕೋವಿಡ್ ಲಕ್ಷಣ ಹೊಂದಿರುವವರಿಗೆ ಹಾಗೂ ಸೋಂಕಿತರ ಜೊತೆ ನೇರ ಸಂಪರ್ಕಕ್ಕೆ ಬಂದವರಿಗೆ ಹಾಗೂ ಸೋಂಕಿತರು ವಾಸವಿದ್ದ ಮನೆಯ ಸುತ್ತಮುತ್ತಲಿನವರಿಗೆ ತಕ್ಷಣವೇ ಪರೀಕ್ಷೆ ನಡೆಸುವಂತೆ ಸೂಚಿಸಲಾಗಿದೆ' ಎಂದು ಗೌರವ್ ಗುಪ್ತ ತಿಳಿಸಿದರು.

ಕೋವಿಡ್ ಜಯಿಸಿದ ಶತಾಯುಷಿ ಎಚ್.ಎಸ್. ದೊರೆಸ್ವಾಮಿ



ಬೆಂಗಳೂರು: ಕೊರೊನಾ ಸೋಂಕಿತರಾಗಿದ್ದ 104 ವರ್ಷದ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರು ಬುಧವಾರ ಚೇತರಿಸಿಕೊಂಡು ಆಸ್ಪತ್ರೆಯಿಂದ ಮನೆಗೆ ತೆರಳಿದರು.

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಅವರು ಹೃದಯ ಕಾಯಿಲೆ, ಅಧಿಕ ರಕ್ತದೊತ್ತಡ, ಬ್ರಾಂಕೈಟಿಸ್ (ಶ್ವಾಸನಾಳಗಳ ಒಳಪೊರೆಯ ಉರಿಯೂತ) ಸೇರಿದಂತೆ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಅವರಿಗೆ ಡಾ.ಸಿ.ಎನ್. ಮಂಜುನಾಥ್ ನೇತೃತ್ವದ ವೈದ್ಯರ ತಂಡವು ಚಿಕಿತ್ಸೆ ಒದಗಿಸಿದೆ. 7 ದಿನಗಳಲ್ಲಿ ಅವರು ಚೇತರಿಸಿಕೊಂಡಿದ್ದಾರೆ.

'ದೊರೆಸ್ವಾಮಿ ಅವರಿಗೆ ಜ್ವರ, ನೆಗಡಿ ಹಾಗೂ ಕೆಮ್ಮಿನ ಲಕ್ಷಣ ಗಳು ಕಾಣಿಸಿಕೊಂಡಿದ್ದವು. ಮೇ 6ರಂದು ಕೋವಿಡ್ ಪರೀಕ್ಷೆ ಮಾಡಿ ದಾಗ ಸೋಂಕಿತರಾಗಿರುವುದು ದೃಢ ಪಟ್ಟಿತು. ಅವರಿಗೆ ಹೃದಯ ಸಂಬಂಧಿ ಕಾಯಿಲೆಯಿದೆ. ಅಧಿಕ ರಕ್ತದೊತ್ತಡ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಕೂಡ ಎದುರಿಸುತ್ತಿದ್ದರು. 7 ದಿನಗಳು ಅವರಿಗೆ ಚಿಕಿತ್ಸೆ ಒದಗಿಸಲಾಗಿದೆ. ಈಗ ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಂಡಿದ್ದಾರೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

'ಅವರ ಶ್ವಾಸಕೋಶಕ್ಕೆ ಯಾವುದೇ ರೀತಿಯ ಹಾನಿ ಆಗಿರಲಿಲ್ಲ. ಹಾಗಾಗಿ, ಸಾಮಾನ್ಯ ಚಿಕಿತ್ಸೆಯನ್ನೇ ಒದಗಿಸ ಲಾಯಿತು. ರಕ್ತದಲ್ಲಿನ ಆಮ್ಲಜನಕ ಪ್ರಮಾಣವು ನಿಯಂತ್ರಣದಲ್ಲಿತ್ತು. ಆದ್ದರಿಂದ ವೈದ್ಯಕೀಯ ಆಮ್ಲಜನಕ ಬೇಕಾಗಲಿಲ್ಲ. ಶತಾಯುಷಿ ಆದ ಅವರಿಗೆ ವೈರಾಣು ಸಮಸ್ಯೆಯನ್ನು ಉಂಟು ಮಾಡಲಿಲ್ಲ. ಅದೇ 25 ರಿಂದ 30 ವರ್ಷದ ಕೆಲವರು ವೈರಾಣು ದಾಳಿತಡೆಯಲು ಸಾಧ್ಯವಾಗದೆಯೇ ಗಂಭೀರವಾಗಿ ಅಸ್ವಸ್ಥರಾಗುತ್ತಿದ್ದಾರೆ. ಹಾಗಾಗಿ, ಈ ವೈರಾಣುವಿನ ಬಗ್ಗೆ ಇನ್ನಷ್ಟು ಅಧ್ಯಯನಗಳು ನಡೆಯಬೇಕಿದೆ' ಎಂದರು.

ಕೋವಿಡ್ ರೋಗಿಗಳ ಚಿಕಿತ್ಸೆ • ಸೌಕರ್ಯ ಹೆಚ್ಚಳಕ್ಕೆ ಬಿಬಿಎಂಪಿ ಕ್ರಮ

ಸ್ಟೆಪ್‌ಡೌನ್ ಆಸ್ಪತ್ರೆ: ಹಾಸಿಗೆ ಸಂಖ್ಯೆ 2,200ಕ್ಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಮುಖ ಆಸ್ಪತ್ರೆಗಳ ಆಸುಪಾಸಿನ ಹೋಟೆಲ್‌ಗಳನ್ನು ಸ್ಟೆಪ್ ಡೌನ್ ಆಸ್ಪತ್ರೆಗಳನ್ನಾಗಿ ಪರಿವರ್ತಿಸಲು ಬಿಬಿಎಂಪಿ ಕ್ರಮ ಕೈಗೊಂಡಿದೆ. ಇಂತಹ ಆಸ್ಪತ್ರೆಗಳಲ್ಲಿ ಇದುವರೆಗೆ 1200 ಹಾಸಿಗೆಗಳ ಸೌಕರ್ಯ ಕಲ್ಪಿಸಲಾಗಿದೆ. ಇನ್ನೂ 1000 ಹಾಸಿಗೆಗಳ ಸೌಲಭ್ಯವನ್ನು ಹೆಚ್ಚುವರಿಯಾಗಿ ಒದಗಿಸಲು ಸಿದ್ಧತೆ ನಡೆದಿದೆ.

ಸ್ಟೆಪ್ ಡೌನ್ ಆಸ್ಪತ್ರೆಗಳ ಸಂಖ್ಯೆ ಹೆಚ್ಚಳ ಸಂಬಂಧ ಗೃಹ ಸಚಿವ ಬಸವರಾಜ ಬೊಮ್ಮಾಯಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳ ಒಕ್ಕೂಟ (ಫಾನಾ) ಹಾಗೂ ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಗಳ ಜೊತೆ ವರ್ಚುವಲ್ ರೂಪದಲ್ಲಿ ಬುಧವಾರ ಸಮಾಲೋಚನೆ ನಡೆಸಿದರು.

ಮುಖ್ಯಾಂಶಗಳು

- ಈ ಆಸ್ಪತ್ರೆಗಳಿಗೆ ನಿವೃತ್ತ ವೈದ್ಯರು, ವಿದ್ಯಾರ್ಥಿಗಳ ಸೇವೆ ಬಳಕೆಗೆ ಚಿಂತನೆ
- ಬಿಬಿಎಂಪಿಯಿಂದ ಆಮ್ಲಜನಕ ಸಾಂದ್ರೀಕರಣ ಸಾಧನಗಳು
- ಆಸ್ಪತ್ರೆಗಳ ಉಸ್ತುವಾರಿಗೆ ಅಧಿಕಾರಿಗಳ ನಿಯೋಜನೆ- ಗೃಹಸಚಿವ ಸೂಚನೆ

ಬಸವರಾಜ ಬೊಮ್ಮಾಯಿ, 'ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಸೋಂಕಿತರಿಗೆ ತುರ್ತಾಗಿ ಹಾಸಿಗೆ ಸೌಲಭ್ಯ ಕಲ್ಪಿಸುವ ಅಗತ್ಯವಿದೆ. ಇದಕ್ಕಾಗಿ ಖಾಸಗಿ ಆಸ್ಪತ್ರೆಗಳು ಸಮೀಪದ ಹೋಟೆಲ್‌ಗಳನ್ನು ಗುರುತಿಸಿ ಅವುಗಳನ್ನು ಸ್ಟೆಪ್ ಡೌನ್ ಆಸ್ಪತ್ರೆಗಳನ್ನಾಗಿ ಪರಿವರ್ತಿಸಲು ತ್ವರಿತವಾಗಿ ಕ್ರಮವಹಿಸಬೇಕು. ಅಗತ್ಯ ನೋಡಿಕೊಂಡು ಹಂತ ಹಂತವಾಗಿ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಳ ಮಾಡಬೇಕು' ಎಂದು ಅವರು ಸೂಚನೆ ನೀಡಿದರು.

ಸ್ಟೆಪ್ ಡೌನ್ ಆಸ್ಪತ್ರೆಗಳ ಮೇಲ್ವಿಚಾರಣೆಗೂ ಸರ್ಕಾರದ ಅಧಿಕಾರಿಯನ್ನು ನಿಯೋಜನೆ ಮಾಡುವಂತೆ ಮುಖ್ಯ ಆಯುಕ್ತರಿಗೆ ತಿಳಿಸಿದರು.

ಸ್ಟೆಪ್ ಡೌನ್ ಆಸ್ಪತ್ರೆಗಳನ್ನು ಪ್ರಾರಂಭಿಸಲು ಫಾನಾ ಹಾಗೂ ಹೋಟೆಲ್ ಮಾಲೀಕರ ಸಂಘಗಳ ಸಹಕಾರ ಕೋರಿದ ಗೌರವ್ ಗುಪ್ತ, 'ಕೆಪಿಎಂಇ ಕಾಯ್ದೆ ಅಡಿ ನೋಂದಣಿ ಆಗಿರುವ ಖಾಸಗಿ ಆಸ್ಪತ್ರೆಗಳ ಜೊತೆ ಹೋಟೆಲ್‌ಗಳು ಸಂಯೋಜನೆ ಮಾಡಿಕೊಂಡು ಸ್ಟೆಪ್ ಡೌನ್ ಆಸ್ಪತ್ರೆಗಳನ್ನು ಆರಂಭಿಸಬಹುದು. ಚಿಕಿತ್ಸೆಗೆ ಸ್ಪಂದಿಸಿ, ಆರೋಗ್ಯದಲ್ಲಿ ಸ್ವಲ್ಪ ಚೇತರಿಸಿಕೊಂಡ ಕೋವಿಡ್ ಸೋಂಕಿತರನ್ನು ಇಂತಹ ಆಸ್ಪತ್ರೆಗಳಿಗೆ ವರ್ಗಾಯಿಸುವ ಅಗತ್ಯವಿದೆ. ಆಗ ತುರ್ತು ಚಿಕಿತ್ಸೆಯ ಅವಶ್ಯಕತೆ ಇರುವ ರೋಗಿಗಳನ್ನು ಆಸ್ಪತ್ರೆಗಳಿಗೆ ದಾಖಲಿಸಲು ಅನುಕೂಲ ಆಗಲಿದೆ. ಇದರಿಂದ ನೂರಾರು ಮಂದಿಯ ಜೀವ ಉಳಿಸಬಹುದು' ಎಂದರು.


'ಸ್ಟೆಪ್ ಡೌನ್ ಆಸ್ಪತ್ರೆಗಳಿಗೆ ವೈದ್ಯರು, ಅರೆವೈದ್ಯಕೀಯ ಸಿಬ್ಬಂದಿ ಹಾಗೂ ಶುಶ್ರೂಷಕರ ಅಗತ್ಯವಿದೆ. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯು ಅವಶ್ಯಕ ಸಿಬ್ಬಂದಿಯನ್ನು ಒದಗಿಸಲಿದೆ. ನಿವೃತ್ತ ವೈದ್ಯರು ಹಾಗೂ ವಿಜ್ಞಾನದ ವಿದ್ಯಾರ್ಥಿಗಳನ್ನೂ ಇವುಗಳ ನಿರ್ವಹಣೆಗೆ ಬಳಸಿಕೊಳ್ಳಬಹುದು. ಈ ಆಸ್ಪತ್ರೆಗಳಿಗೂ ಅಗತ್ಯಕ್ಕನುಗುಣವಾಗಿ ಆಮ್ಲಜನಕ ಸಾಂದ್ರೀಕರಣ ಸಾಧನ (ಆಕ್ಸಿಜನ್ ಕಾನ್ಸಂಟ್ರೇಟರ್) ಪೂರೈಸಲಾಗುತ್ತದೆ' ಎಂದು ಅವರು ಮಾಹಿತಿ ನೀಡಿದರು.

ಹೋಟಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ.ರಾವ್, 'ನಗರದ 13 ಆಸ್ಪತ್ರೆಗಳ ಸಹಯೋಗದಲ್ಲಿ ಅನೇಕ ಹೋಟಲ್‌ಗಳನ್ನು ಈಗಾಗಲೇ ಸ್ಟೆಪ್ ಡೌನ್ ಆಸ್ಪತ್ರೆಗಳನ್ನಾಗಿ ಪರಿವರ್ತಿಸಿದ್ದೇವೆ. ಇಲ್ಲಿ 1,200 ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದೆ. 15 ಹೋಟೆಲ್‌ಗಳನ್ನು ಸ್ಟೆಪ್ ಡೌನ್ ಆಸ್ಪತ್ರೆಗಳನ್ನಾಗಿ ರೂಪಿಸಲು ಕ್ರಮ ಕೈಗೊಳ್ಳಲಾಗಿದೆ. ಇವುಗಳಲ್ಲಿ ಮತ್ತೆ 1,000 ಹಾಸಿಗೆಗಳು ಹೆಚ್ಚುವರಿಯಾಗಿ ಲಭ್ಯ ಆಗಲಿವೆ' ಎಂದು ಮಾಹಿತಿ ನೀಡಿದರು.

ವರ್ಚುವಲ್ ಸಭೆಯಲ್ಲಿ ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ರಾಜೇಂದ್ರ ಚೋಳನ್, ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ. ವಿಜಯೇಂದ್ರ, ವಲಯ ಆರೋಗ್ಯಾಧಿಕಾರಿಗಳು ಹಾಗೂ ಆರೋಗ್ಯ ವೈದ್ಯಾಧಿಕಾರಿಗಳು ಸಲಹೆ ನೀಡಿದರು.



ಸಹಾಯ... 'ಬೆಂಗಳೂರು ಹುಡುಗರು' ತಂಡದ ಸದಸ್ಯರು ಮನೆಯಲ್ಲಿ ನಿಗಾ ವ್ಯವಸ್ಥೆಗೆ ಒಳಪಟ್ಟವರಿಗೆ ಹಾಗೂ ನಗರದಲ್ಲಿನ ಬಡಜನರಿಗೆ ವಿತರಿಸಲು ಆಹಾರ ಪೊಟ್ಟಣಗಳನ್ನು ಸಿದ್ಧಪಡಿಸಿದರು –ಪ್ರಜಾವಾಣಿ ಚಿತ್ರ



ಸೆಂಟ್ರಲ್ ವಿಸ್ತಾ ಯೋಜನೆ: ಫೋಟೊ, ವಿಡಿಯೊ ರೆಕಾರ್ಡಿಂಗ್ ನಿಷೇಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೆಂಟ್ರಲ್ ವಿಸ್ತಾ ಯೋಜನೆಗೆ ತೀವ್ರ ವಿರೋಧ ವ್ಯಕ್ತವಾಗುತ್ತಿರುವ ಬೆನ್ನಲ್ಲೇ ಕೇಂದ್ರ ಲೋಕೋಪಯೋಗಿ ಇಲಾಖೆಯು ಇಂಡಿಯಾ ಗೇಟ್ ಬಳಿಯ ನಿರ್ಮಾಣ ಸ್ಥಳದಲ್ಲಿ ಛಾಯಾಗ್ರಹಣ ಹಾಗೂ ವಿಡಿಯೊ ರೆಕಾರ್ಡಿಂಗ್ ಅನ್ನು ನಿಷೇಧಿಸಿದೆ.

ಸೆಂಟ್ರಲ್ ವಿಸ್ತಾ ಯೋಜನೆಯ ನಿರ್ಮಾಣ ಸ್ಥಳದಲ್ಲಿ ಬುಧವಾರ 'ಛಾಯಾಗ್ರಹಣ ಹಾಗೂ ವಿಡಿಯೊ ರೆಕಾರ್ಡಿಂಗ್ ನಿಷೇಧಿಸಲಾಗಿದೆ' ಎನ್ನುವ ನಾಮಫಲಕಗಳನ್ನು ಹಾಕಲಾಗಿದೆ. ಕೇಂದ್ರ ಲೋಕೋಪಯೋಗಿ ಇಲಾಖೆಯು ಈ ಬಗ್ಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದೆ.

ಸುಮಾರು 23 ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಸೆಂಟ್ರಲ್ ವಿಸ್ತಾ ಯೋಜನೆಗೆ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಈ ಯೋಜನೆಯನ್ನು ನಿಲ್ಲಿಸಿ ಕೋವಿಡ್–19 ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ಆರೋಗ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಈ ಹಣವನ್ನು ವಿನಿಯೋಗಿಸಬೇಕೆಂದು ವಿರೋಧ ಪಕ್ಷಗಳು ಕೇಂದ್ರ ಸರ್ಕಾರವನ್ನು ಒತ್ತಾಯಿಸಿವೆ.



ನವದೆಹಲಿಯ ಸೆಂಟ್ರಲ್ ವಿಸ್ತಾ ಪ್ರಾಜೆಕ್ಟ್‌ನ ನಿರ್ಮಾಣ ಸ್ಥಳದಲ್ಲಿ ಬುಧವಾರ ಛಾಯಾಗ್ರಹಣ ಮತ್ತು ವಿಡಿಯೊ ರೆಕಾರ್ಡಿಂಗ್ ಅನ್ನು ನಿಷೇಧಿಸಿ ಫಲಕಗಳನ್ನು ಹಾಕಲಾಗಿದೆ –ಪಿಟಿಐ ಚಿತ್ರ

ವೈದ್ಯರ ಸಲಹೆಯೇ 'ಸಂಜೀವಿನಿ'

ಪ್ರಜಾವಾಣಿ ವಾರ್ತೆ

ಕೋವಿಡ್ ಗೆದ್ದವರ ಕಥೆ

ಬೆಂಗಳೂರು: ಕಚೇರಿಯಲ್ಲಿ ಕೋವಿಡ್ ಬಂದವರ ಜೊತೆ ಇದ್ದುದರಿಂದ ಅನುಮಾನಗೊಂಡು ಪರೀಕ್ಷೆಗೆ ಒಳಪಟ್ಟಾಗ ಸೋಂಕು ತಗುಲಿರುವುದು ದೃಢಪಟ್ಟ ನಂತರ, ಮನೆಯಲ್ಲಿಯೇ ಇದ್ದು ಗುಣಮುಖರಾದ ಖಾಸಗಿ ಕಂಪನಿ ಉದ್ಯೋಗಿ ಬಿ. ಜಯಪ್ರಕಾಶ್ ತಮ್ಮ ಅನುಭವವನ್ನು ಹಂಚಿಕೊಂಡಿದ್ದು ಹೀಗೆ...

'ಕಚೇರಿಯಲ್ಲಿ ಒಬ್ಬರಿಗೆ ಕೋವಿಡ್ ಬಂದಿತ್ತು. ಅದಾಗಲೇ ಎರಡನೇ ಅಲೆ ಪ್ರಾರಂಭವಾಗಿದ್ದೂ ನನಗೆ ಅರಿವಿತ್ತು. ಒಂದೆರಡು ದಿನಗಳ ನಂತರ ಜ್ವರ ಬಂದಿತ್ತು. ಮೊದಲು, ಡೆಂಗಿ ನಂತರ ಟೈಫಾಯಿಡ್ ಇರಬಹುದೇನೋ ಎಂದುಕೊಂಡು ಪರೀಕ್ಷೆ ಮಾಡಿಸಿಕೊಂಡೆ. ಆ ಕಾಯಿಲೆಗಳು ಇರಲಿಲ್ಲ. ಮಾ.23ಕ್ಕೆ ಆರ್‌ಟಿ ಪಿಸಿಆರ್ ಪರೀಕ್ಷೆ ಮಾಡಿಸಿಕೊಂಡೆ. 24ಕ್ಕೆ ಕೋವಿಡ್ ಪಾಸಿಟಿವ್ ಎಂದು ಫಲಿತಾಂಶ ಬಂದಿತು'

'ಮೊದಲು ನನಗೆ ತಲೆನೋವು ಇತ್ತು. ನಂತರ ಮೈ–ಕೈ ನೋವು ಶುರುವಾಯಿತು. ತುಂಬಾ ಸುಸ್ತಾಗುತ್ತಿತ್ತಲ್ಲದೆ ಬಾಯಿ ಒಣಗುತ್ತಿತ್ತು. ನೀರಡಿಕೆಯಾಗುತ್ತಿತ್ತು. ಖಾರದ ಪುಡಿ ತಿಂದರೂ ಏನೂ ಎನಿಸುತ್ತಿರಲಿಲ್ಲ. ನಿಂಬೆಹಣ್ಣಿನ ರಸ ಕುಡಿದರೂ ರುಚಿ ಗೊತ್ತಾಗುತ್ತಿರಲಿಲ್ಲ. ಅಮೃತಾಂಜನ್ ಮೂಗಿಗೆ ಹಚ್ಚಿಕೊಂಡರೂ ವಾಸನೆ ಬರುತ್ತಿರಲಿಲ್ಲ'

'ಜ್ವರ, ಕೆಮ್ಮು ಮತ್ತು ಉಸಿರಾಟದ ತೊಂದರೆಯಂತಹ ಸಮಸ್ಯೆಗಳು ಇರದ ಕಾರಣ, ಮನೆಯಲ್ಲಿಯೇ ಪ್ರತ್ಯೇಕವಾಗಿದ್ದುಕೊಂಡು ಆರೈಕೆ ಪಡೆದುಕೊಳ್ಳತೊಡಗಿದೆ. ಈ ವೇಳೆ, ಬಿಬಿಎಂಪಿಯ ವೈದ್ಯರಲ್ಲದೆ, ಪರಿಚಯವಿದ್ದ ಅನೇಕ ಹಿರಿಯ ವೈದ್ಯರು ಸಲಹೆ ನೀಡಿದರು. ಅವರ ಸಲಹೆಯಂತೆ ನಡೆದುಕೊಂಡೆ. ಅವರು ಸೂಚಿಸಿದ ಔಷಧಿಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದೆ'

'ಮನೆಯಲ್ಲಿ ಪ್ರತ್ಯೇಕ ಕೋಣೆ ಇದ್ದುದರಿಂದ ಹೆಚ್ಚು ಸಮಸ್ಯೆಯಾಗುತ್ತಿರಲಿಲ್ಲ. ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನೆಲ್ಲ ತೆಗೆದುಕೊಂಡೆ. ಮನೆಯಲ್ಲಿ ಇದ್ದದ್ದು ನಾನು ಮತ್ತು ತಮ್ಮ ಮಾತ್ರ. ತಮ್ಮ ನಿತ್ಯ ಬಿಸಿಯೂಟ ಸಿದ್ಧಮಾಡಿ ಕೊಡುತ್ತಿದ್ದ. ಊಟದಲ್ಲಿ ತರಕಾರಿ, ಸೊಪ್ಪು ಹೆಚ್ಚು ಸೇವಿಸುತ್ತಿದ್ದೆ. ಹಣ್ಣುಗಳನ್ನು ಜಾಸ್ತಿ ತಿನ್ನುತ್ತಿದ್ದೆ'

'ಏ.1ಕ್ಕೆ ಮತ್ತೆ ಪರೀಕ್ಷೆ ಮಾಡಿಸಿದೆ. ಏ.4ರಂದು ನನ್ನ ಜನ್ಮದಿನದಂದೇ ಫಲಿತಾಂಶ ಬಂದಿತು. ಕೋವಿಡ್ ನೆಗೆಟಿವ್ ವರದಿ ಬಂದಿದ್ದರಿಂದ ನಿರಾಳನಾದೆ'.

'ಸುಮಾರು 10 ದಿನಗಳಲ್ಲಿ ನಕಾರಾತ್ಮಕ ಅಂಶಗಳ ಕಡೆಗೆ ಯಾವತ್ತೂ ಗಮನ ಕೊಡಲಿಲ್ಲ. ಕೋವಿಡ್ ಪಾಸಿಟಿವ್ ಬಂದಿದ್ದರೂ, 'ಪಾಸಿಟಿವ್' ವಿಷಯಗಳ ಬಗ್ಗೆ ಮಾತ್ರ ಯೋಚಿಸುತ್ತಿದ್ದೆ. ಈ ಕಾಯಿಲೆಯಿಂದ ನನಗೇನೂ ಆಗುವುದಿಲ್ಲ ಎಂದು ಅಂದುಕೊಳ್ಳುತ್ತಿದ್ದೆ. ವೈದ್ಯರು ನಿರಂತರವಾಗಿ ಈ ನಿಟ್ಟಿನಲ್ಲಿ ಸಲಹೆ ನೀಡಿದ್ದು ನೆರವಾಯಿತು. ಧೈರ್ಯವಾಗಿ ಇದ್ದರೆ ಬೇಗ ಗುಣಮುಖವಾಗಬಹುದು'.

ಬಡ ಕುಟುಂಬಗಳಿಗೆ ಆಹಾರ ಕಿಟ್ ವಿತರಣೆ



ಥಣಿಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಶಾಸಕ ಕೃಷ್ಣಬೈರೇಗೌಡ ಅವರು ಬಡವರಿಗೆ ಆಹಾರದ ಕಿಟ್ ವಿತರಿಸಿದರು.

ಪ್ರಜಾವಾಣಿ ವಾರ್ತೆ

ಯಲಹಂಕ: ಥಣಿಸಂದ್ರ ವಾರ್ಡ್ ವ್ಯಾಪ್ತಿಯ ಹೆಗಡೆನಗರದಲ್ಲಿ ಸುಮಾರು 2000 ಬಡಕುಟುಂಬಗಳಿಗೆ ಆಹಾರದ ಕಿಟ್ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಶಾಸಕ ಕೃಷ್ಣ ಬೈರೇಗೌಡ , 'ಥಣಿಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಅಲ್ಪಸಂಖ್ಯಾತರು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಬಡ ಕುಟುಂಬಗಳು ವಾಸಿಸುತ್ತಿವೆ. ಈದ್‌ಹಬ್ಬದಪ್ರಯುಕ್ತಮುಸ್ಲಿಂಸಮುದಾಯದ ಕೆಲವು ಉದ್ಯಮಿಗಳು ದಿನಸಿ ಪದಾರ್ಥಗಳನ್ನು ದಾನವಾಗಿ ಕಳಿಸಿಕೊಟ್ಟಿದ್ದರು. ಹೀಗಾಗಿ, ವಾರ್ಡ್ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ಆಹಾರದ ಕಿಟ್ ವಿತರಿಸಲಾಗಿದೆ' ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಪಳನಿ ವೆಂಕಟೇಶ್, ಮರಿಮಾದಯ್ಯ ಮತ್ತಿತರರು ಇದ್ದರು.

ಕೋವಿಡ್ ಆರೈಕೆ ಕೇಂದ್ರಕ್ಕೆ ಮುಖ್ಯ ಆಯುಕ್ತ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ದಕ್ಷಿಣ ವಲಯ ವ್ಯಾಪ್ತಿಯ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜಿನ ಪುರುಷರ ವಸತಿನಿಲಯದಲ್ಲಿ ಕೋವಿಡ್ ಆರೈಕೆ ಕೇಂದ್ರ ಮತ್ತು ಚಿಕಿತ್ಸೆ ನಿರ್ಧಾರ ಕೇಂದ್ರವನ್ನು (ಟ್ರಯಾಜಿಂಗ್ ಸೆಂಟರ್) ಸ್ಥಾಪಿಸಲಾಗಿದೆ.

ಈ ಕೇಂದ್ರದಲ್ಲಿ 20 ಹಾಸಿಗೆಗಳಿಗೆ ಆಮ್ಲಜನಕ ಸಾಂದ್ರೀಕರಣ ಸಾಧನಗಳನ್ನು ಒದಗಿಸಲಾಗಿದೆ. ಬಿಬಿಎಂಪಿಯ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಈ ಕೇಂದ್ರಕ್ಕೆ ಬುಧವಾರ ಭೇಟಿ ನೀಡಿ ಇಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಈ ಕೇಂದ್ರಕ್ಕೆ ವೈದ್ಯರು ಮತ್ತು ಅರೆವೈದ್ಯಕೀಯ ಸಿಬ್ಬಂದಿಯನ್ನು ನಿಯೋಜಿಸಿರುವ ಬಗ್ಗೆ ವಿಚಾರಿಸಿದರು. ಚಿಕಿತ್ಸೆ ಸರದಿ ನಿರ್ಧರಿಸುವಾಗ ಪಾಲಿಸಬೇಕಾದ ಅಂಶಗಳ ಬಗ್ಗೆ ಸಿಬ್ಬಂದಿಗೆ ಸಲಹೆಗಳನ್ನು ನೀಡಿದರು.

ವಿದ್ಯಾರ್ಥಿ ನಿಯಲದಲ್ಲಿ ಇನ್ನಷ್ಟು ಸ್ಥಳಾವಕಾಶ ಇರುವುದರಿಂದ ಹೆಚ್ಚುವರಿಯಾಗಿ 20 ಸಾಮಾನ್ಯ ಹಾಸಿಗೆಗಳನ್ನು ಅಳವಡಿಸುವಂತೆ ವಲಯದ ಜಂಟಿ ಆಯುಕ್ತ ವೀರಭದ್ರಸ್ವಾಮಿ ಹಾಗೂ ಆರೋಗ್ಯಾಧಿಕಾರಿ ಡಾ.ಶಿವಕುಮಾರ್ ಅವರಿಗೆ ಸೂಚಿಸಿದರು.

ಶಾಸಕ ರವಿ ಸುಬ್ರಹ್ಮಣ್ಯ, ವಿಶೇಷ ಆಯುಕ್ತರು (ಆರೋಗ್ಯ) ರಾಜೇಂದ್ರ ಚೋಳನ್, ಮುಖ್ಯ ಆರೋಗ್ಯಾಧಿಕಾರಿ ಡಾ. ವಿಜಯೇಂದ್ರ ಜೊತೆಯಲ್ಲಿದ್ದರು.

ವಿಲ್ಸನ್ ಗಾರ್ಡನ್ ಹೆರಿಗೆ ಆಸ್ಪತ್ರೆಯಲ್ಲಿರುವ ಸ್ಥಿರೀಕರಣ ಕೇಂದ್ರ ಹಾಗೂ ಚಿಕಿತ್ಸೆ ನಿರ್ಧಾರ ಕೇಂದ್ರಕ್ಕೂ ಮುಖ್ಯ ಆಯುಕ್ತರು ಭೇಟಿ ನೀಡಿ ಪರಿಶೀಲಿಸಿದರು. ಈ ಕೇಂದ್ರದ ಬಗ್ಗೆ ಸುತ್ತಮುತ್ತಲಿನ ಪ್ರದೇಶದ ಜನರಿಗೆ ಮಾಹಿತಿ ನೀಡಬೇಕೆಂದು ಸೂಚಿಸಿದರು.

ವಿದ್ಯಾಪೀಠ ಪಿಎಚ್‌ಸಿ ಪರಿಶೀಲನೆ

ವಿದ್ಯಾಪೀಠದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬುಧವಾರ ಭೇಟಿ ನೀಡಿದ ಮುಖ್ಯ ಆಯುಕ್ತರು, 'ದಿನಕ್ಕೆ ಎಷ್ಟು ಸೋಂಕಿತರ ಪತ್ತೆಯಾಗುತ್ತಿದ್ದಾರೆ. ಸೋಂಕಿತರ ನೇರ ಸಂಪರ್ಕ ಹೊಂದಿದವರ ಪತ್ತೆ ಕಾರ್ಯ ಹೇಗೆ ನಡೆಯುತ್ತಿದೆ' ಎಂದು ಮಾಹಿತಿ ಪಡೆದರು.

'ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದು ಆರೈಕೆ ಪಡೆಯುವವರ ಮೇಲೆ ನಿಗಾ-ವಹಿಸಲಾಗುತ್ತಿದೆಯೇ. ಸೋಂಕಿತರ ಕೈಗೆ ಮುದ್ರೆ ಹಾಕುವ ಹಾಗೂ ವೈದ್ಯಕೀಯ ಕಿಟ್ ಒದಗಿಸುವ ಬಗ್ಗೆಯೂ ವಿವರ ಕೇಳಿದರು.

'ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ದೃಢಪಟ್ಟವರಿಗೆ ತಕ್ಷಣ ವೈದ್ಯಕೀಯ ಕಿಟ್ ಒದಗಿಸಬೇಕು. ಮನೆಯಲ್ಲೇ ಆರೈಕೆಗೆ ಒಳಗಾಗುವ ಸೋಂಕಿತರು ಹೊರಗೆ ಬಂದು ಅಡ್ಡಾಡದಂತೆ ಸೂಚನೇ ನೀಡಬೇಕು' ಎಂದು ತಿಳಿಸಿದರು.

ಅಗಡಿ ನರ್ಸಿಂಗ್ ಹೋಮ್‌ಗೆ ದಿಢೀರ್ ಭೇಟಿ

ಅಗಡಿ ನರ್ಸಿಂಗ್ ಹೋಮ್‌ಗೆ ಮುಖ್ಯ ಆಯುಕ್ತರು ದಿಢೀರ್ ಭೇಟಿ ನೀಡಿ ಅಲ್ಲಿನ ಚಿಕಿತ್ಸಾ ವ್ಯವಸ್ಥೆ ಮತ್ತು ಆಕ್ಸಿಜನ್ ಪೂರೈಕೆಯ ಬಗ್ಗೆ ಪರಿಶೀಲನೆ ನಡೆಸಿದರು. ಈ ಹಿಂದೆ ಆಸ್ಪತ್ರೆಗೆ ಕೋವಿಡ್ ಸೋಂಕಿತರ ಚಿಕಿತ್ಸೆಗೆ ವಾರಕ್ಕೊಮ್ಮೆ ಆಮ್ಲಜನಕ ಪೂರೈಕೆ ಆಗುತ್ತಿತ್ತು. ಬೇಡಿಕೆ ಹೆಚ್ಚಾಗಿದ್ದರಿಂದ ಈಗ ದಿನಕ್ಕೊಮ್ಮೆ ಸರಬರಾಜು ಆಗುತ್ತಿದೆ ಎಂದು ಅಲ್ಲಿನ ಸಿಬ್ಬಂದಿ ವಿವರಿಸಿದರು.

ಕೊಲ್ಲೂರು ಸಮೀಪದ ಗುಂಡನಹೊಳೆ: ಅಂತ್ಯಕ್ರಿಯೆಗಿಲ್ಲ ಜಾಗ

ಮನೆ ಎದುರೇ ನಡೆದ ಅಂತ್ಯಸಂಸ್ಕಾರ

ಪ್ರಜಾವಾಣಿ ವಾರ್ತೆ

ಕುಂದಾಪುರ: ಕೊಲ್ಲೂರು ಸಮೀಪದ ಜಡ್ಕಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುದೂರು ಗ್ರಾಮದ ಗುಂಡನಹೊಳೆಯಲ್ಲಿ ಅನಾರೋಗ್ಯದಿಂದ ಮೃತಪಟ್ಟ ವ್ಯಕ್ತಿಯೊಬ್ಬರ ಅಂತ್ಯಸಂಸ್ಕಾರಕ್ಕೆ ಜಾಗ ಸಿಗದೇ, ಮನೆ ಎದುರಿನಲ್ಲೇ ಅಂತ್ಯಕ್ರಿಯೆ ನಡೆಸಲಾಗಿದೆ.

ಕೆಲ ಸಮಯದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಕೈಲಾಸನ್ (61) ಮಂಗಳವಾರ ಬೆಳಿಗ್ಗೆ ನಿಧನರಾಗಿದ್ದರು. ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಇದ್ದಾರೆ. ಆದರೆ, ಶವಸಂಸ್ಕಾರಕ್ಕೆ ಜಾಗವಿಲ್ಲದೇ ಪರದಾಡಿದ ಮನೆಯವರು, ಮನೆ ಎದುರು ಚಿತೆ ನಿರ್ಮಿಸಿ ಅಂತ್ಯಸಂಸ್ಕಾರ ನೆರವೇರಿಸಿದ್ದಾರೆ.

ಜಡ್ಕಲ್ ಗ್ರಾಮ ಪಂಚಾಯಿತಿ ದೊಡ್ಡ ಗ್ರಾಮ ಮುದೂರು ಜನವಸತಿ ಇರುವ ಪ್ರದೇಶ. ಹಿಂದೂ ಹಾಗೂ ಕ್ರೈಸ್ತರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟರು ಇದ್ದಾರೆ. ಸ್ಮಶಾನ ನಿರ್ಮಾಣಕ್ಕೆ 1 ಎಕರೆ ಸ್ಥಳ ಕಾಯ್ದಿರಿಸಲಾಗಿದೆ. ಆದರೆ ಇದುವರೆಗೆ ಸ್ಮಶಾನ ನಿರ್ಮಾಣ ಆಗಿಲ್ಲ.

ಬಡವರು, ಬಾಡಿಗೆ ಮನೆಯಲ್ಲಿ ಇರುವವರು ತುಂಬಾ ಜನ ಇದ್ದಾರೆ. ಕಡಿಮೆ ವಿಸ್ತೀರ್ಣದ ಜಾಗದಲ್ಲಿ ಮನೆ ನಿರ್ಮಾಣ ಮಾಡಿಕೊಂಡಿರುವ ಕುಟುಂಬದವರು, ಅಂತ್ಯಕ್ರಿಯೆ ಮಾಡುವುದಕ್ಕೆ ಪರದಾಡುವ ಸ್ಥಿತಿ ಇದೆ. ಈ ಕುರಿತು ಗ್ರಾಮ ಪಂಚಾಯಿತಿಯಲ್ಲಿ ಹಲವು ಬಾರಿ ಪ್ರಸ್ತಾವನೆ ಮಾಡಿದರೂ ಪ್ರಯೋಜನವಾಗಿಲ್ಲ. ಕೈಲಾಸನ್ ಕುಟುಂಬಕ್ಕೆ ಬಂದಂತಹ ಸ್ಥಿತಿ ಯಾರಿಗೂ ಬಾರದೇ ಇರಲಿ. ಅಧಿಕಾರಿಗಳು ಇನ್ನಾದರೂ ತುರ್ತು ಕ್ರಮವನ್ನು ಕೈಗೊಳ್ಳಬೇಕು ಎಂದು ಗ್ರಾಮ ಪಂಚಾಯಿತಿ ಸದಸ್ಯ ಶ್ರೀನಿವಾಸ ಒತ್ತಾಯಿಸಿದರು.

'ಕಾಯ್ದಿರಿಸಿದ ಜಾಗದಲ್ಲಿ ಸ್ಮಶಾನ ನಿರ್ಮಾಣಕ್ಕೆ ಸಂಬಂಧಿಸಿದ ಇಲಾಖೆ ಮುತವರ್ಜಿ ವಹಿಸದೆ ಇರುವುದರಿಂದ ಇಂತಹ ಅಮಾನವೀಯ ಘಟನೆ ನಡೆದಿದೆ. ಕೋವಿಡ್‌ನಿಂದ ಸಾವಿನ ಪ್ರಕರಣ ಹೆಚ್ಚಾಗುತ್ತಿರುವ ವೇಳೆಯಲ್ಲಿ ಜಿಲ್ಲಾಡಳಿತ ಸಮಸ್ಯೆಗೆ ಸ್ಪಂದಿಸಬೇಕು' ಎಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕ ವಾಸುದೇವ ಮುದೂರು ಹೇಳಿದರು.



ಗುಂಡನಹೊಳೆಯಲ್ಲಿ ಮನೆಯ ಮುಂಭಾಗದಲ್ಲಿ ವ್ಯಕ್ತಿಯೊಬ್ಬರ ಅಂತ್ಯಸಂಸ್ಕಾರ ಮಾಡಲಾಯಿತು.

'ಫೇರ್‌ಫ್ಯಾಕ್ಸ್' ಸಂಸ್ಥೆಯಿಂದ ಕೋವಿಡ್ ಆರೈಕೆ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಫೇರ್‌ಫ್ಯಾಕ್ಸ್' ಹಣಕಾಸು ಕಂಪನಿಯು ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ 150 ಹಾಸಿಗೆಗಳ ಆಮ್ಲಜನಕ ಸಹಿತ ಕೋವಿಡ್ ಚಿಕಿತ್ಸಾ ಕೇಂದ್ರವನ್ನು ಆರಂಭಿಸಲು ಮುಂದಾಗಿದೆ.

ಇದೇ 18ರಿಂದ ಈ ಕೇಂದ್ರ ಕಾರ್ಯಾಚರಣೆ ಆರಂಭಿಸಲಿದೆ. ಈ ಕೇಂದ್ರಕ್ಕೆ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಫೌಂಡೇಷನ್(ಕೆಐಎಫ್) ಕೂಡ ಹಣಕಾಸಿನ ನೆರವು ನೀಡಲಿದೆ.

ಫೇರ್ ಫ್ಯಾಕ್ಸ್‌ನ ಹೂಡಿಕೆ ಕಂಪನಿಯಾದ ಕ್ವೆಸ್ ಕಾರ್ ಲಿಮಿಟೆಡ್ ಮತ್ತು ಕೆಐಎಫ್ ಈ ಕೇಂದ್ರವನ್ನು ನಿರ್ವಹಿಸಲಿವೆ.

ಆಸ್ಪತ್ರೆಯೊಂದಕ್ಕೆ ಪ್ರವೇಶ ಲಭ್ಯವಾಗುವವರೆಗೆ ಆಮ್ಲಜನಕದ ಬೆಂಬಲ ಅಗತ್ಯವಿರುವ ರೋಗಿಗಳಿಗೆ ಪರಿಹಾರ ಮತ್ತು ಚಿಕಿತ್ಸೆಯನ್ನು ಇದು ಪೂರೈಸಲಿದೆ.

ಡಾ. ನರೇಶ್ ಶೆಟ್ಟಿ, ಡಾ. ನಂದಕುಮಾರ್ ಜೈರಾಮ್ ಮತ್ತು ಡಾ. ಅಲೆಕ್ಸಾಂಡರ್ ಥಾಮಸ್ ಸೇರಿದಂತೆ ಪರಿಣತ ವೈದ್ಯರ ಸಮಿತಿಯು ಈ ಕೇಂದ್ರದ ಕಾರ್ಯನಿರ್ವಹಣೆಗೆ ತಾಂತ್ರಿಕ ನೆರವನ್ನು ಪೂರೈಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ ವಾರ್ತೆ

ಸಂಶೋಧಕ, ವಿದ್ವಾಂಸ ಬಿ.ಎಸ್.ಸಣ್ಣಯ್ಯ



ಮೈಸೂರು: ವಿದ್ವಾಂಸ ಹಾಗೂ ಸಂಶೋಧಕ ಬಿ.ಎಸ್.ಸಣ್ಣಯ್ಯ (93) ಅವರು ವಯೋಸಹಜ ಕಾಯಿಲೆಯಿಂದ ಇಲ್ಲಿನ ತಮ್ಮ ನಿವಾಸದಲ್ಲಿ ಬುಧವಾರ ನಿಧನರಾದರು.

ಅವರಿಗೆ ಆರು ಪುತ್ರಿಯರು ಹಾಗೂ ಒಬ್ಬ ಪುತ್ರ ಇದ್ದಾರೆ. ಮೃತರ ಸ್ವಗ್ರಾಮ ಪಿರಿಯಾಪಟ್ಟಣ ತಾಲ್ಲೂಕಿನ ಭೋಗನಹಳ್ಳಿಯಲ್ಲಿ ಗುರುವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಡುವಾರಹಳ್ಳಿ 8ನೇ ಕ್ರಾಸ್‌ನ ನಿವಾಸಿಯಾಗಿದ್ದ ಸಣ್ಣಯ್ಯ, ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ಸಹಾಯಕ ಸಂಶೋಧಕರಾಗಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥ ಸಂಪಾದನಾ ವಿಭಾಗದ ಪ್ರಭಾರ ಉಪನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಅಲ್ಲದೇ, ಶ್ರವಣಬೆಳಗೊಳದ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಪ್ರಭಾರ ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಹಸ್ತಪ್ರತಿ ಶಾಸ್ತ್ರದಲ್ಲಿ ಪಾಂಡಿತ್ಯ ಹೊಂದಿದ್ದ ಅವರು, ಸುಮಾರು 80ಕ್ಕೂ ಅಧಿಕ ಹಸ್ತಪ್ರತಿ ಗ್ರಂಥಗಳನ್ನು ಸಂಪಾದಿಸಿ, ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದರು. ಹಲವು ಸಂಶೋಧನಾ ಲೇಖನಗಳನ್ನು ಬರೆದಿದ್ದರು.

ಶಾಸಕರ ಅನುದಾನ ಕೋವಿಡ್ ಬಳಕೆಗೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಪ್ರತಿ ಕ್ಷೇತ್ರಕ್ಕೆ ನೀಡಿರುವ ₹2 ಕೋಟಿ ಅನುದಾನದಲ್ಲಿ ಕನಿಷ್ಠ ಶೇ 25 ರಷ್ಟನ್ನು ಕೋವಿಡ್ ನಿರ್ವಹಣೆಗೆ ಅಗತ್ಯ ಇರುವ ಪರಿಕರ ಮತ್ತು ಆಸ್ಪತ್ರೆಗಳ ಸುಧಾರಣೆಗೆ ಬಳಸಲು ಸರ್ಕಾರ ಅನುಮತಿ ನೀಡಿದೆ.

ಹಲವು ಶಾಸಕರು ಈ ಸಂಬಂಧ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದರು. ಕೋವಿಡ್‌ಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು ಖರೀದಿಸಿ ಸರ್ಕಾರಿ ಆಸ್ಪತ್ರೆಗಳಿಗೆ ಕೊಡಲು ಸಾಧ್ಯವಾಗುತ್ತದೆ. ಆಮ್ಲಜನಕ ಸಾಂದ್ರಕಗಳು, ಹಾಸಿಗೆ ವ್ಯವಸ್ಥೆ ಸೇರಿ ವಿವಿಧ ರೀತಿಯ ಕಾರ್ಯಗಳನ್ನು ಈ ಅನುದಾನದ ಮೂಲಕ ಮಾಡಬಹುದಾಗಿದೆ.

ಶಾಸಕರು ಶೇ 25 ರಷ್ಟು ಹಣವನ್ನು ಬಳಸಬಹುದಾಗಿದೆ ಎಂದು ಸರ್ಕಾರ ಆದೇಶದಲ್ಲಿ ತಿಳಿಸಿದೆ. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರ ಪ್ರದೇಶಾಭಿವೃದ್ಧಿ ನಿಧಿಯ ಒಟ್ಟು ಮೊತ್ತ ₹600 ಕೋಟಿ ಆಗುತ್ತದೆ. ಇದರಲ್ಲಿ ಶೇ 25ರಷ್ಟು ಎಂದರೆ ₹150 ಕೋಟಿಯಷ್ಟಾಗಲಿದೆ.

ವಿವಿಧೆಡೆ ಗುಡುಗು ಸಹಿತ ಮಳೆ

ಬಳ್ಳಾರಿ: ಜಿಲ್ಲೆಯ ವಿವಿಧೆಡೆ ಮಂಗಳವಾರ ತಡರಾತ್ರಿ ಹಾಗೂ ಬುಧವಾರ ಬೆಳಗಿನ ಜಾವ ಗುಡುಗು ಸಿಡಿಲಿನೊಂದಿಗೆ ಬಿರುಗಾಳಿ ಸಹಿತ ಮಳೆಯಾಗಿದ್ದು ತೋರಣಗಲ್ಲು ಸಮೀಪದ ತಿಮ್ಮಾಲಾಪುರ ಗ್ರಾಮದಲ್ಲಿ ಎರಡು ಎತ್ತುಗಳು ಬಲಿಯಾಗಿವೆ.

ಸಿರುಗುಪ್ಪ ತಾಲ್ಲೂಕಿನಲ್ಲಿ ಬುಧವಾರ ಬೆಳಗಿನ ಜಾವ 7.3 ಸೆಂ.ಮೀ ಮಳೆಯಾಗಿದೆ. ಮರಿಯಮ್ಮನಹಳ್ಳಿ ಪಟ್ಟಣದ ಹೋಬಳಿ ವ್ಯಾಪ್ತಿಯಲ್ಲಿ ತಡರಾತ್ರಿ ಸುರಿದ ಭಾರಿಗಾಳಿ ಮಳೆಗೆ ಎರಡು ವಿದ್ಯುತ್ ಪರಿವರ್ತಕಗಳು ಸುಟ್ಟಿವೆ.

ಸಿಡಿಲು ಬಡಿದು 2 ಎತ್ತು ಸಾವು: ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಮತ್ತೋಡು ಹೋಬಳಿಯ ಕಪ್ಪನಾಯಕನಹಳ್ಳಿ ಜಮೀನಿನಲ್ಲಿ ಬುಧವಾರ ಬೆಳಿಗ್ಗೆ ಸಿಡಿಲು ಬಡಿದು ರಮೇಶ್ ಅವರಿಗೆ ಸೇರಿದ ಎರಡು ಎತ್ತುಗಳು ಮೃತಪಟ್ಟಿವೆ. ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಗಿದೆ. ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾಧಾರಣ ಮಳೆ ಸುರಿದಿದೆ.

ದಡಕ್ಕೆ ಮರಳಲು ಸೂಚನೆ (ಮಂಗಳೂರು): ಅರಬ್ಬಿ ಸಮುದ್ರದಲ್ಲಿ ವಾಯು ಭಾರ ಕುಸಿತ ಉಂಟಾಗಿದ್ದು, 'ತೌಕ್ತೆ' ಚಂಡಮಾರುತ ಏಳುವ ಸಾಧ್ಯತೆಗಳಿವೆ. ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಸೂಚನೆ ನೀಡಲಾಗಿದೆ.

ಮೇ 16ರ ಸುಮಾರಿಗೆ ಪೂರ್ವ ಮಧ್ಯ ಅರಬ್ಬಿ ಸಮುದ್ರದಲ್ಲಿ ಬಿರುಗಾಳಿ ತೀವ್ರವಾಗಲಿದೆ. ಈ ಹಿನ್ನೆಲೆಯಲ್ಲಿ ಮೀನುಗಾರಿಕೆ ದೋಣಿಗಳು, ಮೀನುಗಾರಿಕೆಗೆ ಇಳಿಯಬಾರದು. ಈಗಾಗಲೇ ಮೀನುಗಾರಿಕೆಗೆ ತೆರಳಿರುವ ದೋಣಿಗಳು ದಡಕ್ಕೆ ಸೇರುವಂತೆ ಕರಾವಳಿ ಕಾವಲು ಪಡೆ ಸೂಚಿಸಿದೆ.

ಕೋವಿಡ್ ತಾಂತ್ರಿಕ ಸಲಹಾ ಸಮಿತಿಗೆ ಸೂಚನೆ:ಆರೋಗ್ಯ ಸಚಿವ ಸುಧಾಕರ್

'ಬ್ಲ್ಯಾಕ್ ಫಂಗಸ್: 2 ದಿನಗಳಲ್ಲಿ ವರದಿ'

ಪ್ರಜಾವಾಣಿ ವಾರ್ತೆ



ಸುಧಾಕರ್

ಬೆಂಗಳೂರು: 'ಕೋವಿಡ್‌ನಿಂದ ಚೇತರಿಸಿಕೊಂಡ ಕೆಲವರಿಗೆ ಅತ್ಯಂತ ಅಪಾಯಕಾರಿ ಕಪ್ಪು ಶಿಲೀಂಧ್ರ ಸೋಂಕು (ಮ್ಯೂಕೋರ್‌ಮೈಕೋಸಿಸ್ ಅಥವಾ ಬ್ಲ್ಯಾಕ್ ಫಂಗಸ್) ಕಾಣಿಸಿಕೊಳ್ಳುತ್ತಿರುವ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ಮಾಡಿ ಎರಡು ದಿನಗಳ ಒಳಗೆ ವರದಿ ನೀಡುವಂತೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿಗೆ ಸೂಚಿಸಿದ್ದೇನೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಕೆಲವು ಕಡೆಗಳಲ್ಲಿ ಬ್ಲ್ಯಾಕ್ ಫಂಗಸ್ ಪತ್ತೆಯಾಗಿದೆ. ವರದಿ ಬಂದ ನಂತರ ಉನ್ನತಮಟ್ಟದಲ್ಲಿ ಚರ್ಚಿಸಿ, ಸರ್ಕಾರದ ನಿಲುವು ಮತ್ತು ಚಿಕಿತ್ಸಾ ವಿಧಾನದ ಬಗ್ಗೆ ತೀರ್ಮಾನಿಸಲಾಗುವುದು' ಎಂದರು.

'ತಾಲ್ಲೂಕು ಆಸ್ಪತ್ರೆಗಳಲ್ಲಿರುವ ಎಲ್ಲ ಆರೂ ವೆಂಟಿಲೇಟರ್‌ಗಳು ಮೂರು ದಿನಗಳಲ್ಲಿ ಕಾರ್ಯನಿರ್ವಹಿಸುವಂತೆ ಮಾಡಲು ಕ್ರಮ ತೆಗೆದುಕೊಳ್ಳಲು ಕಟ್ಟುನಿಟ್ಟಿನ ಸೂಚನೆ ನೀಡಿದ್ದೇನೆ. ಅನಸ್ತೇಶಿಯಾ, ತಜ್ಞ ವೈದ್ಯರ ಕೊರತೆ ಇರುವ ಕಡೆ ಸಮೀಪದ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಿಂದ ವ್ಯವಸ್ಥೆಗೆ ಸೂಚಿಸಲಾಗಿದೆ. ಇನ್ನು ಕೆಲವೇ ದಿನಗಳಲ್ಲಿ 780 ತಜ್ಞ ವೈದ್ಯರ ಸಹಿತ 2,480 ವೈದ್ಯಕೀಯ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ. ಇದರಿಂದ ತಾಲ್ಲೂಕುಗಳಲ್ಲಿ ವೈದ್ಯರ ಕೊರತೆ ನೀಗಲಿದೆ' ಎಂದರು.

'ನಗರ ಪ್ರದೇಶಗಳಿಂದ ಹಳ್ಳಿಗಳ ಕಡೆಗೆ ಸೋಂಕು ಹರಡುತ್ತಿರುವುದು ಗಮನಕ್ಕೆ ಬಂದಿದೆ. ಹೀಗಾಗಿ ಜಿಲ್ಲಾ, ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ಹೆಚ್ಚಿಸಲಾಗುತ್ತಿದೆ' ಎಂದೂ ಅವರು ಹೇಳಿದರು.

ಶೀಘ್ರ 780 ತಜ್ಞ ವೈದ್ಯರ ನೇಮಕ

ಚಿಂತಾಮಣಿ: ರಾಜ್ಯದಲ್ಲಿ ವೈದ್ಯರ ಕೊರತೆ ತೀವ್ರವಾಗಿಲ್ಲ. ಶೀಘ್ರದಲ್ಲಿಯೇ 780 ತಜ್ಞ ವೈದ್ಯರನ್ನು ನೇಮಕದ ಮಾಡಿಕೊಳ್ಳಲಾಗುವುದು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ವೈದ್ಯರನ್ನು ಎಲ್ಲ ತಾಲ್ಲೂಕುಗಳಿಗೂ ಆದ್ಯತೆ ಮೇರೆಗೆ ನಿಯೋಜಿಸಲಾಗುವುದು ಎಂದರು.

ರಾಜ್ಯ ಕೋವಿಡ್ ಅಂಕಿ–ಅಂಶ

20,53,191 ▲ ಒಟ್ಟು ಸೋಂಕಿತರು (20,13,193 ನಿನ್ನೆಯ ವಿವರ)

5,92,182 ▲ ಸಕ್ರಿಯ ಪ್ರಕರಣಗಳು

14,40,621 ▲ ಗುಣಮುಖರಾದವರು

20,368 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	39,998	▲
ಗುಣಮುಖ	34,752	▲
ಸಾವು	517	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಂದಿರಾ ಕ್ಯಾಂಟೀನ್: ಸಿಗಲಿಲ್ಲ ಉಚಿತ ಊಟ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಲಾಕ್‌ಡೌನ್ ಸಂದರ್ಭದಲ್ಲಿ ನಿರ್ಗತಿಕರು, ಬಡವರಿಗೆ ಇಂದಿರಾ ಕ್ಯಾಂಟೀನ್ ಮೂಲಕ ಉಚಿತ ಊಟ ಕೊಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದರೂ ಕಲಬುರ್ಗಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಮೊದಲ ದಿನ ಈ ಆದೇಶ ಪಾಲನೆಯಾಗಲಿಲ್ಲ.

ಕಲಬುರ್ಗಿ ನಗರದ 7 ಇಂದಿರಾ ಕ್ಯಾಂಟೀನ್‌ಗಳಲ್ಲಿ ರಿಯಾಯಿತಿ ದರದಂತೆ ಹಣ ಪಡೆದೇ ಊಟ, ಉಪಾಹಾರ ನೀಡುತ್ತಿರುವುದು 'ಪ್ರಜಾವಾಣಿ' ಪ್ರತಿನಿಧಿ ಕೆಲವು ಕ್ಯಾಂಟೀನ್‌ಗಳಿಗೆ ತೆರಳಿ ರಿಯಾಲಿಟಿ ಚೆಕ್ ನಡೆಸಿದಾಗ ಕಂಡು ಬಂತು.

'ಕಲಬುರ್ಗಿ ಮಹಾನಗರ ಪಾಲಿಕೆ 19 ತಿಂಗಳಿಂದ ₹ 7.5 ಕೋಟಿ ಬಾಕಿ ಉಳಿಸಿಕೊಂಡಿದ್ದು, ಅದು ಪಾವತಿ ಆಗುವವರೆಗೆ ಉಚಿತವಾಗಿ ಊಟ ಕೊಡಲು ಆಗುವುದಿಲ್ಲ. ಸದ್ಯಕ್ಕೆ 5 ತಿಂಗಳ ಬಾಕಿಯನ್ನಾದರೂ ನೀಡಬೇಕು ಎಂದು ಒತ್ತಾಯಿಸಿದ್ದೇವೆ. ಬಾಕಿ ನೀಡದಿದ್ದರೆ ಕ್ಯಾಂಟೀನ್ ಬಂದ್ ಮಾಡುತ್ತೇವೆ' ಎಂದು ಕ್ಯಾಂಟೀನ್ ನಿರ್ವಹಣೆಯ ಗುತ್ತಿಗೆದಾರರು ಬೆಳಿಗ್ಗೆ ಹೇಳಿದರು.

ಜಿಲ್ಲಾಧಿಕಾರಿ ವಿ.ವಿ. ಜ್ಯೋತ್ಸ್ನಾ ಮಧ್ಯಪ್ರವೇಶಿಸಿದ ನಂತರ, ಮಹಾನಗರ ಪಾಲಿಕೆ ಆಯುಕ್ತರು ಗುತ್ತಿಗೆದಾರರೊಂದಿಗೆ ಚರ್ಚಿಸಿ ಮನವೊಲಿಸಿದರು. ಮೇ 13ರಿಂದ ಉಪಾಹಾರ, ಊಟವನ್ನು ಉಚಿತವಾಗಿ ನೀಡಲು ಗುತ್ತಿಗೆದಾರರು ಸಮ್ಮತಿಸಿದರು.

'ರಾಯಚೂರು ಜಿಲ್ಲೆಯಲ್ಲಿ 8 ಇಂದಿರಾ ಕ್ಯಾಂಟೀನ್‌ಗಳಿವೆ. ಉಚಿತ ಆಹಾರ ನೀಡುವಂತೆ ಸ್ಥಳೀಯ ಸಂಸ್ಥೆಗಳಿಂದ ಸೂಚನೆ ಬಂದಿಲ್ಲ. ಹೀಗಾಗಿ ಎಂದಿನಂತೆ ಹಣ ಪಡೆಯುತ್ತಿದ್ದೇವೆ' ಎಂದು ಕ್ಯಾಂಟೀನ್‌ನ ಗುತ್ತಿಗೆದಾರರೊಬ್ಬರು ಮಾಹಿತಿ ನೀಡಿದರು.

'ದೇವದುರ್ಗದ ಒಂದು ಕ್ಯಾಂಟೀನ್‌ನಲ್ಲಿ ಉಚಿತವಾಗಿ ಊಟ–ಉಪಾಹಾರ ನೀಡಲಾಗಿದೆ. ಉಳಿದೆಡೆ ಏಕೆ ಈ ಆದೇಶ ಪಾಲನೆಯಾಗಿಲ್ಲ ಎಂಬುದನ್ನು ಪರಿಶೀಲಿಸುತ್ತೇನೆ' ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಹೇಂದ್ರಕುಮಾರ್ ಪ್ರತಿಕ್ರಿಯಿಸಿದರು.



ಪೇಠಾ ಆಲೂರ ಗ್ರಾಮಕ್ಕೆ ಭೇಟಿ ನೀಡಿದ ಆರೋಗ್ಯ ಸಿಬ್ಬಂದಿ ಸಮೀಕ್ಷೆ ನಡೆಸಿದರು

ಪೇಠಾಆಲೂರ: 700ಕ್ಕೂ ಅಧಿಕ ಜನರಿಗೆ ಜ್ವರ

ಡಂಬಳ (ಗದಗ ಜಿಲ್ಲೆ): ಇಲ್ಲಿಗೆ ಸಮೀಪದ ಪೇಠಾ ಆಲೂರ ಗ್ರಾಮದಲ್ಲಿ ಸುಮಾರು 700ಕ್ಕೂ ಅಧಿಕ ಜನರು ಜ್ವರದಿಂದ ಬಳಲುತ್ತಿದ್ದು, ಗ್ರಾಮಸ್ಥರು ಆತಂಕದಲ್ಲಿ ದಿನ ದೂಡುತ್ತಿದ್ದಾರೆ.

ಒಂದು ವಾರದಲ್ಲಿ ಏಳು ಜನ ಸಾವನ್ನಪ್ಪಿದ್ದು, ಮೃತರಿಗೆ ಕೊರೊನಾ ಸೋಂಕು ಇರಲಿಲ್ಲ ಎನ್ನಲಾಗಿದೆ. ಗ್ರಾಮದಲ್ಲಿ 15 ಮಂದಿ ಕೋವಿಡ್ ರೋಗಿಗಳಿದ್ದು, ಅವರಲ್ಲಿ 14 ಮಂದಿ ಈಗಾಗಲೇ ಗುಣಮುಖರಾಗಿದ್ದಾರೆ. ಒಬ್ಬರು ಹೋಂ ಐಸೊಲೇಶನ್‌ನಲ್ಲಿದ್ದು, ಆರೋಗ್ಯ ಇಲಾಖೆ ಸಿಬ್ಬಂದಿ ಅವರ ಆರೋಗ್ಯದ ಬಗ್ಗೆ ನಿಗಾ ಇರಿಸಿದ್ದಾರೆ.


ಊರಿನಲ್ಲಿರುವ ಅನೇಕರು ಜ್ವರದಿಂದ ಬಳಲುತ್ತಿರುವ ಕಾರಣ ಬುಧವಾರ ಮುಂಡರಗಿ ತಹಶೀಲ್ದಾರ್ ಆಶಪ್ಪ ಪೂಜಾರ ಹಾಗೂ ಡಿಎಚ್‌ಒ ಡಾ.ಸತೀಶ್ ಬಸರಿಗಿಡದ ಹಾಗೂ ವೈದ್ಯಾಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.

'ಗ್ರಾಮದಲ್ಲಿ ಬಹಳ ಜನರಿಗೆ ಜ್ವರ ಬಂದಿರುವುದರಿಂದ ಭಯದಲ್ಲಿ ಜೀವನ ಕಳೆಯುವಂತಾಗಿದೆ. ಜನರಿಗೆ ಅಗತ್ಯ ವೈದ್ಯಕೀಯ ಸೌಲಭ್ಯ ದೊರೆಯುಂತೆ ಜಿಲ್ಲಾಡಳಿತ ಕ್ರಮ ವಹಿಸಬೇಕು' ಎಂದು ಸ್ಥಳೀಯ ನಿವಾಸಿ ಅಶೋಕರಡ್ಡಿ ಕಬ್ಬೇರಹಳ್ಳಿ ಆಗ್ರಹಿಸಿದರು.

'ಜಿಲ್ಲಾ ವೈದ್ಯಾಧಿಕಾರಿ ನೇತೃತ್ವದಲ್ಲಿ ಕುಟುಂಬದ ಸಮೀಕ್ಷೆ ಪ್ರಗತಿಯಲ್ಲಿದೆ. ಅನಾರೋಗ್ಯದ ಕಾರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಕಲೆ ಹಾಕಲಾಗುವುದು. ಅಂತಿಮವಾಗಿ ಜಿಲ್ಲಾ ವೈದ್ಯಾಧಿಕಾರಿ ವರದಿ ನೀಡುತ್ತಾರೆ' ಎಂದು ಟಿಎಚ್‌ಒ ಡಾ.ರಾಜೇಶ ತಿಳಿಸಿದ್ದಾರೆ.

ನಿಧನವಾರ್ತೆ

ಕೆ.ವಿ. ರವೀಂದ್ರನಾಥ ಟ್ಯಾಗೋರ್



ಬೆಂಗಳೂರು: ನಿವೃತ್ತ ಐಪಿಎಸ್ ಅಧಿಕಾರಿ ಕೆ.ವಿ.ರವೀಂದ್ರನಾಥ ಟ್ಯಾಗೋರ್ (72) ಕೋವಿಡ್‌ನಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ಶೃಂಗೇರಿಯವರಾದ ಇವರು ಮಾಜಿ ಶಾಸಕ ದಿವಂಗತ ಕೆ.ಎನ್.ವೀರಪ್ಪಗೌಡ ಅವರ ಪುತ್ರ. ಬೆಂಗಳೂರಿನ ಜಯನಗರದಲ್ಲಿ ವಾಸವಿದ್ದ ಇವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ನಗರದ ಹೊರವಲಯದಲ್ಲಿ ಅಂತ್ಯಕ್ರಿಯೆ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

1974ರಲ್ಲಿ ಪೊಲೀಸ್ ಇಲಾಖೆಗೆ ಸೇರಿ, 2009ರಲ್ಲಿ ಡಿಜಿಪಿಯಾಗಿ ನಿವೃತ್ತಿಯಾಗಿದ್ದರು. ಕೆಎಸ್‌ಪಿಸಿ ಪರೀಕ್ಷೆ ಬರೆದು ಡಿವೈಎಸ್‌ಪಿಯಾಗಿ ಪೊಲೀಸ್ ಇಲಾಖೆ ಸೇರಿದ್ದರು. ಬೆಂಗಳೂರು ನಗರದ ಅಪರಾಧ ವಿಭಾಗ, ಸಂಚಾರಿ ವಿಭಾಗಗಳ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡಿದ್ದರು. ಬಳಿಕ ಎಡಿಜಿಪಿ ಹುದ್ದೆಗೆ ಬಡ್ತಿ ಪಡೆದು, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

ವಾರ್ತಾ ಇಲಾಖೆಯ ಆಯುಕ್ತರಾಗಿ ಹಾಗೂ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಇವರು, 2006ರಲ್ಲಿ ನಡೆದ ಶ್ರವಣಬೆಳಗೊಳ ಶ್ರೀಬಾಹುಬಲಿ ಮಹಾಮಸ್ತಕಾಭಿಷೇಕದ ಪ್ರಚಾರ ಉಸ್ತುವಾರಿಯಾಗಿದ್ದರು. ಪ್ರಸ್ತುತ ಪುರವಂಕರ ಸುಚಿತ್ರ ಸಿನಿ ಮತ್ತು ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷರೂ ಆಗಿದ್ದರು.

ರಾಷ್ಟ್ರಕವಿ ಕುವೆಂಪು ಅವರೊಂದಿಗೆ ನಿಕಟ ಒಡನಾಟ ಇವರಿಗಿತ್ತು. ಇವರು ಪೊಲೀಸ್ ಇಲಾಖೆಗೆ ಸಾಂಸ್ಕೃತಿಕ ಸ್ಪರ್ಶ ನೀಡಿದ್ದರು.

ನಿವೃತ್ತಿ ನಂತರವೂ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಉಪನ್ಯಾಸಗಳನ್ನು ನೀಡುತ್ತಿದ್ದರು. ಸಾಹಿತ್ಯ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು.

ಡಾ.ಎಂ.ಎಸ್.ಬಿರಾದಾರ



ವಿಜಯಪುರ: ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಎಂ.ಎಸ್.ಬಿರಾದಾರ (65) ಅವರು ಬುಧವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು, ಇಬ್ಬರು ಸಹೋದರರು ಹಾಗೂ ಒಬ್ಬ ಸಹೋದರಿ ಇದ್ದಾರೆ.

ಅಂತ್ಯಕ್ರಿಯೆ ಗುರುವಾರ ಬೆಳಿಗ್ಗೆ 8ಕ್ಕೆ ಸ್ವಗ್ರಾಮ ಉಕ್ಕಲಿಯ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕೊರೊನಾ ರೋಗಿಗಳ ಸೇವೆ ಮಾಡುತ್ತಲೇ ಕೊರೊನಾ ಸೋಂಕಿಗೆ ಒಳಗಾಗಿದ್ದ ಅವರು, ವಿಜಯಪುರದ ಮನೆಯಲ್ಲಿ ಹೋಂ ಕ್ವಾರಂಟೈನ್ ಆಗಿ ಗುಣಮುಖರಾಗಿದ್ದರು.

ನಂತರ ತೀವ್ರ ಹೃದಯಾಘಾತಕ್ಕೆ ಒಳಗಾಗಿದ್ದ ಅವರನ್ನು ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಸೊಲ್ಲಾಪುರದಿಂದ ಏರ್ ಅಂಬುಲೆನ್ಸ್ ಮೂಲಕ ಬೆಂಗಳೂರಿಗೆ ಸಾಗಿಸಲಾಗಿತ್ತು. ಆಸ್ಪತ್ರೆಗೆ ದಾಖಲಾಗುವ ಮುನ್ನವೇ ಮಾರ್ಗ ಮಧ್ಯೆ ಮತ್ತೊಮ್ಮೆ ತೀವ್ರ ಹೃದಯಾಘಾತಕ್ಕೆ ಒಳಗಾದ್ದ ಅವರಿಗೆ ವೈದ್ಯರು ಹೆಚ್ಚಿನ ಚಿಕಿತ್ಸೆ ಮುಂದುವರೆಸಿದಿದ್ದರೂ ಅದಕ್ಕೆ ಸ್ಪಂದಿಸದೇ ನಿಧನರಾದರು.

ಮೂಲತಃ ಬಸವನಬಾಗೇವಾಡಿ ತಾಲ್ಲೂಕಿನ ಉಕ್ಕಲಿ ಗ್ರಾಮದವರಾದ ಅವರು, ಬಳ್ಳಾರಿ ಜಿಲ್ಲೆಯಲ್ಲಿ ವೈದ್ಯಾಧಿಕಾರಿಯಾಗಿ ಸೇವೆ ಸಲ್ಲಿಸಿದರು. 1984ರಿಂದ 1991ರವರೆಗೆ ವಿಜಯಪುರ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿದ್ದರು.

ಮತ್ತೆ ಸಾಲದ ಸುಳಿಗೆ ಸಿಲುಕುವ ಆತಂಕದಲ್ಲಿ ರೈತರು

ರಾಗಿ ಖರೀದಿ: ₹ 89.44 ಕೋಟಿ ಬಾಕಿ

● ಕೆ.ಜೆ. ಮರಿಯಪ್ಪ

ತುಮಕೂರು: ರೈತರಿಂದ ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಸಿ ತಿಂಗಳು ಕಳೆದಿದ್ದರೂ ಈವರೆಗೂ ಪೂರ್ಣ ಪ್ರಮಾಣದಲ್ಲಿ ಸರ್ಕಾರ ಹಣ ಪಾವತಿಸಿಲ್ಲ. ಜಿಲ್ಲೆಯಲ್ಲಿ 13,089 ರೈತರಿಗೆ ₹ 89.44 ಕೋಟಿಯನ್ನು ಬಾಕಿ ಉಳಿಸಿಕೊಂಡಿದೆ.

ಮುಂಗಾರು ಬಿತ್ತನೆಗೆ ರೈತರು ಸಿದ್ಧತೆ ನಡೆಸಿದ್ದು, ಬಿತ್ತನೆ ಬೀಜ, ಗೊಬ್ಬರ ಸೇರಿದಂತೆ ಕೃಷಿ ಚಟುವಟಿಕೆಗಳಿಗೆ ಬೇಕಾದ ಪರಿಕರಗಳನ್ನು ಖರೀದಿಸಬೇಕಿದೆ. ರಾಗಿ ಮಾರಾಟ ಮಾಡಿದ ಹಣದಲ್ಲಿ ಒಂದಷ್ಟು ಸಾಲ ತೀರಿಸಿಕೊಂಡು, ಮುಂದಿನ ಕೃಷಿ ಕಾರ್ಯಕ್ಕೆ ಬಳಸಬಹುದು ಎಂಬ ಲೆಕ್ಕಾಚಾರ ಹಾಕಿದ್ದರು. ಈವರೆಗೂ ಹಣ ಬಾರದೆ ಮತ್ತೆ ಸಾಲಕ್ಕೆ ಕೈಚಾಚುವ ಪರಿಸ್ಥಿತಿ ಎದುರಾಗಿದೆ.

ಒಂದು ಕ್ವಿಂಟಲ್‌ಗೆ ₹3,285ರಂತೆ ಕರ್ನಾಟಕ ರಾಜ್ಯ ಆಹಾರ ಹಾಗೂ ನಾಗರಿಕ ಸರಬರಾಜು ನಿಗಮದ (ಕೆಎಸ್‌ಎಫ್‌ಸಿ) ಮೂಲಕ ಖರೀದಿಸಿದ್ದು, ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಹಣ ವರ್ಗಾವಣೆ ಮಾಡಲಾಗುತ್ತದೆ. ಒಟ್ಟು 38,792 ರೈತರು ರಾಗಿ ಮಾರಾಟ ಮಾಡಿದ್ದು, ₹ 278.91 ಕೋಟಿ ಪಾವತಿಸಬೇಕಿತ್ತು. ಮಾರ್ಚ್ 14ರವರೆಗೆ 25,703 ರೈತರಿಗೆ ₹ 189.47 ಕೋಟಿ ಪಾವತಿಸಲಾಗಿದೆ. ಇನ್ನೂ ₹ 89.44 ಕೋಟಿ ಬಾಕಿ ನೀಡಬೇಕಾಗಿದೆ.

ಖರೀದಿ ಕೇಂದ್ರಕ್ಕೆ ಬಂದು ರಾಗಿಯ ಮಾದರಿ ತೋರಿಸಿ, ಜಮೀನಿನ ಮತ್ತು ಬ್ಯಾಂಕ್ ದಾಖಲೆಗಳನ್ನು ಕೊಟ್ಟು ರೈತರು ಹೆಸರು ನೋಂದಾಯಿಸಿಕೊಂಡಿದ್ದರು. ಮತ್ತೆ ನಿಗದಿತ ದಿನದಂದು ರಾಗಿ ಖರೀದಿ ಕೇಂದ್ರಕ್ಕೆ ಬಂದು ಒಂದೆರಡು ದಿನಗಳ ಕಾಲ ಹಗಲು–ರಾತ್ರಿ ಕಾದು ಕುಳಿತು ತೂಕ ಹಾಕಿ ರಾಗಿ ಕೊಟ್ಟು ಹೋಗಿದ್ದರು. ಖರೀದಿಸಿದ ಒಂದೆರಡು ವಾರದಲ್ಲಿ ಆಹಾರ ಇಲಾಖೆಯಿಂದ ನೇರವಾಗಿ ರೈತರ ಖಾತೆಗೆ ಹಣ ಪಾವತಿಯಾಗಲಿದೆ ಎಂದು ಅಧಿಕಾರಿಗಳು ಭರವಸೆ ನೀಡಿದ್ದರು. ಆದರೆ, ಈವರೆಗೂ ಹಣ ರೈತರ ಕೈಸೇರಿಲ್ಲ.

ರಾಗಿ ಕೊಯ್ಲು ಆರಂಭವಾದ ಸಮಯದಲ್ಲಿ ಮಾರುಕಟ್ಟೆಯಲ್ಲಿ ಕ್ವಿಂಟಲ್ ಬೆಲೆ ₹ 2,000ದಿಂದ ₹2,500 ದರ ಇತ್ತು. ಖರೀದಿ ಕೇಂದ್ರ ಆರಂಭವಾಗುತ್ತಿದ್ದಂತೆ ಮಾರುಕಟ್ಟೆಯಲ್ಲೂ ಧಾರಣೆ ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡಿತು. ಹೆಚ್ಚಿನ ಮಂದಿ ಖರೀದಿ ಕೇಂದ್ರದಲ್ಲೇ ಮಾರಾಟ ಮಾಡಿದ್ದರು. ಈಗ ಮಳೆ ಬಿದ್ದು ಮುಂಗಾರು ಕೃಷಿ ಚಟುವಟಿಕೆ ಆರಂಭವಾಗಿದ್ದು, ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದ್ದರೂ ಹಣ ಬಾರದೆ ಆತಂಕಕ್ಕೆ ಒಳಗಾಗಿದ್ದಾರೆ.



ರಾಗಿ ರಾಶಿ (ಸಾಂದರ್ಭಿಕ ಚಿತ್ರ)

ರೈತರಿಗೆ ತಲುಪದ ಬೆಂಬಲ ಬೆಲೆ ಹಣ

● ಎಸ್.ಸುರೇಶ್ ನೀರಗುಂದ

ಹೊಸದುರ್ಗ: ಇಲ್ಲಿಯ ಖರೀದಿ ಕೇಂದ್ರದಲ್ಲಿ ಬೆಂಬಲ ಬೆಲೆಗೆ ಖರೀದಿಸಿದ್ದ ರಾಗಿ ಹಣ ಎರಡು ತಿಂಗಳಾದರೂ ರೈತರ ಬ್ಯಾಂಕ್ ಖಾತೆ ಸೇರಿಲ್ಲ.

ಕಳೆದ ಜನವರಿ ತಿಂಗಳಿನಿಂದ ಎರಡು ತಿಂಗಳ ಕಾಲ ಖರೀದಿ ಕೇಂದ್ರದಲ್ಲಿ ರಾಗಿ ಮಾರಾಟ ಮಾಡುವ ರೈತರ ನೋಂದಣಿ ನಡೆಯಿತು. 8,000ಕ್ಕೂ ಹೆಚ್ಚು ರೈತರು ನೋಂದಣಿ ಮಾಡಿಸಿದ್ದರು. 7,000ಕ್ಕೂ ಹೆಚ್ಚು ರೈತರು ಎಪಿಎಂಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ್ದರು.

‘ಬಹುತೇಕ ರೈತರಿಂದ ರಾಗಿ ಖರೀದಿಸಿರುವುದಕ್ಕೆ ಹಣ ಪಡೆಯುವ ಅಧಿಕೃತ ಚೀಟಿ ನೀಡಿಲ್ಲ. ಈ ಬಗ್ಗೆ ಮಾಹಿತಿ ಪಡೆಯಲು ಖರೀದಿ ಕೇಂದ್ರದ ಅಧಿಕಾರಿಯೂ ಸಿಗುತ್ತಿಲ್ಲ. ರೈತರ ಬ್ಯಾಂಕ್ ಖಾತೆಗೂ ಹಣ ಜಮಾ ಆಗಿಲ್ಲ. ಇದರಿಂದ ರೈತರಿಗೆ ಆತಂಕ ಎದುರಾಗಿದೆ’ ಎನ್ನುತ್ತಾರೆ ರೈತ ಸಂಘದ ಅಧ್ಯಕ್ಷ ಕೆ.ಸಿ. ಮಹೇಶ್ವರಪ್ಪ.

ಬೆಂಬಲ ಬೆಲೆಗೆ ತಾಲ್ಲೂಕಿನ ಎಷ್ಟು ರೈತರಿಂದ, ಎಷ್ಟು ಕ್ವಿಂಟಲ್ ರಾಗಿ ಖರೀದಿಸಲಾಗಿದೆ? ಎಷ್ಟು ರೈತರಿಗೆ ಹಣ ಪಡೆಯುವ ಅಧಿಕೃತ ಚೀಟಿ ಕೊಡಲಾಗಿದೆ? ಎಷ್ಟು ರೈತರ ಬ್ಯಾಂಕ್ ಖಾತೆಗೆ ಈಗಾಗಲೇ ಹಣ ಜಮಾ ಆಗಿದೆ ಎಂಬ ಬಗ್ಗೆ ತಹಶೀಲ್ದಾರ್ ವೈ.ತಿಪ್ಪೇಸ್ವಾಮಿ ಅವರನ್ನು ಕೇಳಿದರೆ, ಈ ಬಗ್ಗೆ ಮಾಹಿತಿ ಲಭ್ಯವಿಲ್ಲ ಎಂದು ಪ್ರತಿಕ್ರಿಯಿಸಿದರು.

‘ತಕ್ಷಣ ಬಾಕಿ ಕೊಡಿ’



ಎ. ಗೋವಿಂದ ರಾಜು

ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಸಿರುವ ಬಾಕಿ ಹಣವನ್ನು ತಕ್ಷಣವೇ ರಾಜ್ಯ ಸರ್ಕಾರ ಬಿಡುಗಡೆ ಮಾಡಬೇಕು ಎಂದು ರಾಜ್ಯ ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎ. ಗೋವಿಂದರಾಜು ಒತ್ತಾಯಿಸಿದರು.

‘ನಾನು ಸಹ ರಾಗಿ ಮಾರಾಟ ಮಾಡಿ ಎರಡು ತಿಂಗಳಾಗಿದ್ದರೂ ಹಣ ಬಂದಿಲ್ಲ. ಕೋವಿಡ್–19ನಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮುಂಗಾರು ಕೃಷಿ ಚಟುವಟಿಕೆಗಳು ಆರಂಭವಾಗಿದ್ದು, ಬಿತ್ತನೆ ಬೀಜ, ರಸಗೊಬ್ಬರಕ್ಕೆ ರೈತರ ಬಳಿ ಹಣ ಇಲ್ಲವಾ ಗಿದೆ. ಇತರೆ ಕ್ಷೇತ್ರದಲ್ಲಿ ವಸ್ತು ಕೊಂಡುಕೊಂಡ ತಕ್ಷಣ ಹಣ ನೀಡುತ್ತಾರೆ. ಆದರೆ, ರೈತರು ಮಾತ್ರ ತಮ್ಮ ವಸ್ತು ಮಾರಾಟ ಮಾಡಿ ಹಣಕ್ಕಾಗಿ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ’ ಎಂದರು.

ಕೋವಿಡ್: 24 ಗಂಟೆಗಳ ಅವಧಿಯಲ್ಲಿ 39,998 ಮಂದಿಗೆ ಸೋಂಕು ದೃಢ

ನಾಲ್ಕೂವರೆ ತಿಂಗಳಲ್ಲಿ 8 ಸಾವಿರ ಮಂದಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 275 ಮಂದಿ ಸೇರಿದಂತೆ ರಾಜ್ಯದಲ್ಲಿ 517 ಮಂದಿ ಮೃತಪಟ್ಟಿರುವುದು ಬುಧವಾರ ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 20 ಸಾವಿರ (20,368) ದಾಟಿದೆ.

ಕಳೆದ ವರ್ಷ ಮಾರ್ಚ್ 10ರಂದು ರಾಜ್ಯದಲ್ಲಿ ಮೊದಲ ಕೋವಿಡ್ ಮರಣ ಪ್ರಕರಣ ವರದಿಯಾಗಿತ್ತು. ವರ್ಷಾಂತ್ಯದ ವೇಳೆಗೆ ಮೃತಪಟ್ಟವರ ಸಂಖ್ಯೆ 12 ಸಾವಿರಕ್ಕೆ ಏರಿಕೆಯಾಗಿತ್ತು. ಈ ವರ್ಷ ನಾಲ್ಕೂವರೆ ತಿಂಗಳಿನಲ್ಲಿ 8 ಸಾವಿರಕ್ಕೂ ಅಧಿಕ ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ.

ಮಂಗಳವಾರ 1.16 ಲಕ್ಷಕ್ಕೆ ಇಳಿಕೆಯಾಗಿದ್ದ ಕೋವಿಡ್ ಪರೀಕ್ಷೆಗಳ ಸಂಖ್ಯೆ ಬುಧವಾರ 1.34 ಲಕ್ಷಕ್ಕೆ ಏರಿಕೆಯಾಗಿದೆ.

24 ಗಂಟೆಗಳ ಅವಧಿಯಲ್ಲಿ 39,998 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 20.53 ಲಕ್ಷಕ್ಕೆ ಏರಿಕೆಯಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 6 ಲಕ್ಷದತ್ತ (5.92 ಲಕ್ಷ) ದಾಪುಗಾಲು ಇರಿಸಿದೆ.

ಕಳೆದ 15 ದಿನಗಳಿಂದ ಡಬಲ್ ಮ್ಯುಟೆಂಟ್ ಬಿ.1.617 ಮಾದರಿಯ ವೈರಾಣು ಕೂಡ ಕೆಲವರಲ್ಲಿ ಕಾಣಿಸಿಕೊಳ್ಳುತ್ತಿದೆ. ಮತ್ತೆ 86 ಮಂದಿಯಲ್ಲಿ ಈ ಮಾದರಿಯ ವೈರಾಣು ಪತ್ತೆಯಾಗಿದೆ. ಇದರಿಂದಾಗಿ ಈವರೆಗೆ ಹೊಸ ಮಾದರಿಯ ವೈರಾಣು ವನ್ನು ಹೊಂದಿದವರ ಸಂಖ್ಯೆ 148ಕ್ಕೆ ಏರಿಕೆಯಾಗಿದೆ. ನಿಮ್ಹಾನ್ಸ್ ಪ್ರಯೋಗಾಲಯದಲ್ಲಿ ಶಂಕಿತ ಮಾದರಿಗಳ ಜಿನೋಮಿಕ್ ಸಿಕ್ವೆನ್ಸೀಸ್ ಪರೀಕ್ಷೆ ನಡೆಸಲಾಗುತ್ತಿದ್ದು, ಅಲ್ಲಿ ಇನ್ನೂ 650 ರಿಂದ 700 ಮಾದರಿಗಳ ಪರೀಕ್ಷೆ ನಡೆಸಬೇಕಿದೆ. ಸದ್ಯ ವಾರಕ್ಕೆ 150ರಿಂದ 200 ಮಾದರಿಗಳ ಜಿನೋಮಿಕ್ ಸಿಕ್ವೆನ್ಸೀಸ್ ಪರೀಕ್ಷೆ ಮಾತ್ರ ಸಾಧ್ಯವಾಗುತ್ತಿದೆ ಎಂದು ಪ್ರಯೋಗಾಲಯದ ಮೂಲಗಳು ತಿಳಿಸಿವೆ.

ರಾಜ್ಯದ 9 ಜಿಲ್ಲೆಗಳಲ್ಲಿ ಸಾವಿರಕ್ಕೂ ಅಧಿಕ ಹೊಸ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 16,286 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ತುಮಕೂರು (2,360), ಬಳ್ಳಾರಿ (1,823), ಮೈಸೂರು (1,773), ಹಾಸನ (1,572), ಮಂಡ್ಯ (1,223), ಬೆಂಗಳೂರು ಗ್ರಾಮಾಂತರ (1,138), ಶಿವಮೊಗ್ಗ (1,125), ದಕ್ಷಿಣ ಕನ್ನಡ (1,077) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ವರದಿಯಾಗಿವೆ. ಕೋವಿಡ್ ಪೀಡಿತರಲ್ಲಿ ಮತ್ತೆ 34,752 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 14.40 ಲಕ್ಷಕ್ಕೆ ಏರಿಕೆಯಾಗಿದೆ.

ಕೋವಿಡ್ ಲಸಿಕೆ: ಅಂಗವಿಕಲರಿಗೆ ಮೊದಲ ಆದ್ಯತೆ

‘ಕೋವಿಡ್ ಲಸಿಕೆ ಕೇಂದ್ರಗಳಲ್ಲಿ ಅಂಗವಿಕಲರಿಗೆ ಮೊದಲ ಆದ್ಯತೆ ನೀಡಬೇಕು. ಅವರು ಲಸಿಕೆಗಾಗಿ ಕಾಯುವಂತಾಗಬಾರದು’ ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕಿ ಅರುಂಧತಿ ಚಂದ್ರಶೇಖರ್ ಸುತ್ತೋಲೆ ಹೊರಡಿಸಿದ್ದಾರೆ.

18 ವರ್ಷ ಮೇಲ್ಪಟ್ಟ ಫಲಾನುಭವಿಗಳಿಗೆ ಮತ್ತು ಅವರ ಆರೈಕೆದಾರರಿಗೆ ಆದ್ಯತೆ ಅನುಸಾರ ಕೋವಿಡ್ ಲಸಿಕೆ ನೀಡಲು ಹೈಕೋರ್ಟ್ ಸೂಚಿಸಿತ್ತು.

‘ಏ.1ರಿಂದ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ವಿತರಣೆ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಹಾಗಾಗಿ, ಸಂಬಂಧಪಟ್ಟ ಇಲಾಖೆಗಳು ಲಸಿಕೆ ಪಡೆಯಲು ಅರ್ಹರಾದ ಅಂಗವಿಕಲ ಫಲಾನುಭವಿಗಳ ಮಾಹಿತಿಯ ಪಟ್ಟಿಯನ್ನು ಆರೋಗ್ಯ ಇಲಾಖೆಗೆ ಸಲ್ಲಿಸಬೇಕು. ಆ ಪಟ್ಟಿಯ ಅನುಸಾರ ಕ್ರಿಯಾಯೋಜನೆ ತಯಾರಿಸಿ, ಫಲಾನುಭವಿಗಳಿಗೆ ಸುಲಭವಾಗಿ ಲಸಿಕೆ ದೊರೆಯಬಹುದಾದ ಕೇಂದ್ರಗಳನ್ನು ಆರೋಗ್ಯ ಇಲಾಖೆ ಗುರುತಿಸಬೇಕು. ಅಂತಹ ಕೇಂದ್ರಗಳಲ್ಲಿ ಅವರಿಗೆ ವಿಳಂಬ ಮಾಡದೆಯೇ ಲಸಿಕೆ ಒದಗಿಸಬೇಕು’ ಎಂದು ಸೂಚಿಸಿದ್ದಾರೆ.

‘ಕೇಂದ್ರಗಳಲ್ಲಿ ಗಾಲಿ ಕುರ್ಚಿ, ನೀರಿನ ಸೌಲಭ್ಯ, ಶೌಚಾಲಯ ಸೇರಿದಂತೆ ವಿವಿಧ ವ್ಯವಸ್ಥೆಗಳು ಇರಬೇಕು. ಅರ್ಹ ಫಲಾನುಭವಿಗಳ ವಿವರವನ್ನು ವಾಟ್ಸ್ ಆ್ಯಪ್, ಇ-ಮೇಲ್ ಮತ್ತು ಮೊಬೈಲ್ ಸಂದೇಶಗಳ ಮೂಲಕ ಕೂಡ ಪಡೆದು, ಹೆಸರನ್ನು ನೋಂದಣಿ ಮಾಡಿಕೊಳ್ಳಬಹುದು. ಲಸಿಕೆ ಪಡೆಯುವ ದಿನಾಂಕ ಮತ್ತು ಸಮಯದ ಬಗ್ಗೆ ಮುಂಚಿತವಾಗಿ ಸಂದೇಶ ರವಾನಿಸಬೇಕು. ಲಸಿಕೆ ಕೇಂದ್ರಗಳಿಗೆ ಬರಲು ಮತ್ತು ಅಲ್ಲಿಂದ ಮನೆಗೆ ತೆರಳಲು ವಾಹನ ವ್ಯವಸ್ಥೆ ಕಲ್ಪಿಸುವ ಸಂಬಂಧ ರೋಟರಿ, ಲಯನ್ಸ್ ಸೇರಿದಂತೆ ವಿವಿಧ ಸರ್ಕಾರೇತರ ಸಂಸ್ಥೆಗಳ ನೆರವು ಪಡೆಯಬಹುದಾಗಿದೆ’ ಎಂದು ತಿಳಿಸಿದ್ದಾರೆ.

‘18ರಿಂದ 44 ವರ್ಷದವರೆಗಿನ ಅಂಗವಿಕಲ ಫಲಾನುಭವಿಗಳಿಗೆ ಲಸಿಕೆ ಒದಗಿಸಲು ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು’ ಎಂದು ಸುತ್ತೋಲೆಯಲ್ಲಿ ವಿವರಿಸಿದ್ದಾರೆ.

ದೇಶದಲ್ಲಿ 24 ಗಂಟೆಗಳಲ್ಲಿ 4,205 ಮಂದಿ ಸಾವು

ನವದೆಹಲಿ (ಪಿಟಿಐ): ಕೋವಿಡ್‌–19ನಿಂದ ದೇಶದಲ್ಲಿ ಸಾವಿಗೀಡಾದವರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಬುಧವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡಂತೆ 24 ಗಂಟೆಗಳಲ್ಲಿ 4,205 ಮಂದಿ ಸೋಂಕಿನಿಂದ ಮೃತಪಟ್ಟಿದ್ದಾರೆ. ಇದು ಒಂದು ದಿನದಲ್ಲಿ ಸಂಭವಿಸಿದ ಗರಿಷ್ಠ ಸಂಖ್ಯೆ ಸಾವು ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಇದೇ ಅವಧಿಯಲ್ಲಿ ಹೊಸದಾಗಿ ದೃಢಪಟ್ಟ ಕೋವಿಡ್ ಪ್ರಕರಣಗಳ ಸಂಖ್ಯೆ 3,48,421 ಎಂದೂ ಸಚಿವಾಲಯ ತಿಳಿಸಿದೆ.

ಒಟ್ಟು ಕೋವಿಡ್–19 ಪ್ರಕರಣಗಳ ಸಂಖ್ಯೆ 2,33,40,938ಕ್ಕೆ ಏರಿಕೆಯಾಗಿದೆ. ಈ ಪೈಕಿ 1,93,82,642 ಮಂದಿ ಗುಣಮುಖರಾಗಿದ್ದು, 2,54,197 ಜನ ಸಾವಿಗೀಡಾಗಿದ್ದಾರೆ. ಪ್ರಸ್ತುತ ಒಟ್ಟು ಸಕ್ರಿಯ ಪ್ರಕರಣಗಳು 37,04,099 ಇದ್ದು, ಸೋಂಕಿನಿಂದ ಗುಣಮುಖರಾಗುತ್ತಿರುವ ಪ್ರಮಾಣ ಶೇ 83.04 ಹಾಗೂ ಸಾವಿನ ಪ್ರಮಾಣ ಶೇ 1.09ರಷ್ಟಿದೆ ಎಂದೂ ಸಚಿವಾಲಯ ತಿಳಿಸಿದೆ.

ಪಡಿತರ: ಬಯೋಮೆಟ್ರಿಕ್ ಕಡ್ಡಾಯವಲ್ಲ



ಬೆಂಗಳೂರು: ‘ಮೇ ತಿಂಗಳ ಆಹಾರ ಧಾನ್ಯ ಪಡೆಯಲು ಪಡಿತರ ಚೀಟಿದಾರರ ಬಯೋಮೆಟ್ರಿಕ್ (ಬೆರಳಚ್ಚು) ಕಡ್ಡಾಯ ಅಲ್ಲ’ ಎಂದು ಆಹಾರ ಇಲಾಖೆ ತಿಳಿಸಿದೆ.

ಕೋವಿಡ್ ಎರಡನೇ ಅಲೆ ವ್ಯಾಪಕ ವಾಗಿ ಹರಡುತ್ತಿರುವ ಕಾರಣ ಪಡಿತರ ಚೀಟಿದಾರರು ಮತ್ತು ನ್ಯಾಯಬೆಲೆ ಅಂಗಡಿದಾರರ ಆರೋಗ್ಯ ಹಿತರಕ್ಷಣೆ ದೃಷ್ಟಿಯಿಂದ ಬಯೋಮೆಟ್ರಿಕ್ ಪಡೆ ಯದೆ ಆಹಾರಧಾನ್ಯ ವಿತರಿಸಲು ನ್ಯಾಯ ಬೆಲೆ ಅಂಗಡಿದಾರರಿಗೆ ಇಲಾಖೆ ಸೂಚನೆ ನೀಡಿದೆ.

‘ಪಡಿತರ ಚೀಟಿದಾರರ ಆಧಾರ್ ಗೆ ಜೋಡಿಸಿಕೊಂಡಿರುವ ಮೊಬೈಲ್‌ಗೆ ಬಂದ ಒಟಿಪಿ ಪಡೆದು ಪಡಿತರ ವಿತರಿ ಸಬಹುದು. ವಯೋವೃದ್ಧರು, ಅನಾರೋಗ್ಯಪೀಡಿತರು, ಅಂಗವಿಕಲರಿಗೆ ವಿನಾಯಿತಿ ಸೌಲಭ್ಯದಡಿ ಪಡಿತರ ವಿತರಿ ಸಲಾಗುವುದು. ಪಡಿತರ ಚೀಟಿದಾರರ ಪರಿಶೀಲನಾ ಪಟ್ಟಿ ಮೂಲಕವೂ ಧಾನ್ಯ ವಿತರಿಸಲಾಗುವುದು’ ಎಂದು ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

ರೈಲ್ವೆ: 100 ‘ಆಕ್ಸಿಜನ್ ಎಕ್ಸ್‌ಪ್ರೆಸ್’ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧ ರಾಜ್ಯಗಳಿಗೆ ದ್ರವೀಕೃತ ವೈದ್ಯಕೀಯ ಆಮ್ಲಜನಕ ಸಾಗಣೆ ಮಾಡುವ ಸಲುವಾಗಿ ಭಾರತೀಯ ರೈಲ್ವೆಯು ಬುಧವಾರದವರೆಗೆ 100 ‘ಆಕ್ಸಿಜನ್ ಎಕ್ಸ್‌ಪ್ರೆಸ್’ ರೈಲುಗಳ ಕಾರ್ಯಾಚರಣೆ ನಡೆಸಿದೆ.

ಏ. 19ರಂದು ‘ಆಕ್ಸಿಜನ್ ಎಕ್ಸ್‌ಪ್ರೆಸ್’ ರೈಲುಗಳ ಸಂಚಾರ ಆರಂಭಗೊಂಡಿತು. ಈ ವರೆಗೆ ವಿವಿಧ ರಾಜ್ಯಗಳಿಗೆ 396 ಟ್ಯಾಂಕರ್‌ಗಳ ಮೂಲಕ 6,260 ಟನ್ ದ್ರವೀಕೃತ ವೈದ್ಯಕೀಯ ಆಮ್ಲಜನಕ ತಲುಪಿಸಲಾಗಿದೆ ಎಂದು ರೈಲ್ವೆಯ ಪ್ರಕಟಣೆ ತಿಳಿಸಿದೆ.

ಏ. 19ರಂದು ಕಾರ್ಯಾಚರಣೆ ಆರಂಭಗೊಂಡಾಗ, ಮೊದಲ ‘ಆಕ್ಸಿಜನ್ ಎಕ್ಸ್‌ಪ್ರೆಸ್’ ರೈಲು ಜಾರ್ಖಂಡ್‌ನ ಟಾಟಾನಗರದಿಂದ ಉತ್ತರಾಖಂಡಕ್ಕೆ 120 ಟನ್ ಆಮ್ಲಜನಕ ಸಾಗಿಸಿತು. ಅದೇ ದಿನ ಮತ್ತೊಂದು ರೈಲು ಒಡಿಶಾದ ಅಂಗೂಲ್‌ನಿಂದ ಪುಣೆಗೆ 50 ಟನ್ ಆಮ್ಲಜನಕ ಹೊತ್ತೊಯ್ದಿತು ಎಂದೂ ಪ್ರಕಟಣೆ ತಿಳಿಸಿದೆ.

ಸರ್ಕಾರ ರಚನೆಗೆ ಹಕ್ಕು ಮಂಡನೆ: ನೇಪಾಳಿ ಕಾಂಗ್ರೆಸ್ ನಿರ್ಧಾರ

ಕಠ್ಮಂಡು (ಪಿಟಿಐ): ನೇಪಾಳದ ಪ್ರಮುಖ ವಿರೋಧ ಪಕ್ಷವಾದ ನೇಪಾಳಿ ಕಾಂಗ್ರೆಸ್ ಪಕ್ಷ, ಸರ್ಕಾರ ರಚನೆ ಸಂಬಂಧ ಹಕ್ಕು ಮಂಡಿಸಲು ನಿರ್ಧರಿಸಿದೆ.

ಪ್ರಧಾನಿ ಕೆ.ಪಿ.ಶರ್ಮಾ ಒಲಿ ಅವರು ಮಂಡಿಸಿದ್ದ ವಿಶ್ವಾಸ ಮತಕ್ಕೆ ಸೋಲುಂಟಾದ ಹಿನ್ನೆಲೆಯಲ್ಲಿ, ಹೊಸ ಸರ್ಕಾರ ರಚನೆಗೆ ಹಕ್ಕು ಮಂಡಿಸುವಂತೆ ನೇಪಾಳ ಅಧ್ಯಕ್ಷೆ ವಿದ್ಯಾದೇವಿ ಭಂಡಾರಿ ಅವರು ರಾಜಕೀಯ ಪಕ್ಷಗಳಿಗೆ ಆಹ್ವಾನ ನೀಡಿದ್ದಾರೆ.

ಸರ್ಕಾರ ರಚನೆಗೆ ಹಕ್ಕು ಮಂಡಿಸಲು ನೀಡಿದ್ದ ಗಡುವು ಗುರುವಾರ ಕೊನೆಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಹುದ್ದೆ ತನಗೆ ನೀಡಬೇಕು ಎಂಬ ಬೇಡಿಕೆಯೊಂದಿಗೆ ನೇಪಾಳಿ ಕಾಂಗ್ರೆಸ್ ಸಮಾನ ಮನಸ್ಕ ಪಕ್ಷಗಳೊಂದಿಗೆ ಮೈತ್ರಿ ಸಾಧಿಸಲು ಕಸರತ್ತು ನಡೆಸಿದೆ.



ಶೇರ್ ಬಹದ್ದೂರ್ ದೇವುಬಾ

ಪಕ್ಷದ ಅಧ್ಯಕ್ಷ ಶೇರ್ ಬಹದ್ದೂರ್ ದೇವುಬಾ ನೇತೃತ್ವದಲ್ಲಿ ನೇಪಾಳಿ ಕಾಂಗ್ರೆಸ್ ಮುಖಂಡರು ಮಂಗಳವಾರ ಒಂದು ಸುತ್ತಿನ ಚರ್ಚೆ ನಡೆಸಿದ್ದಾರೆ. ನಂತರ ಇತರ ಪಕ್ಷಗಳ ಮುಖಂಡ ಸಭೆ ನಡೆಸಿ, ಸರ್ಕಾರ ರಚನೆ ಕುರಿತು ಚರ್ಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಸಿಪಿಎನ್ (ಮಾವೋವಾದಿ ಕೇಂದ್ರ) ಮುಖ್ಯಸ್ಥ ಪುಷ್ಪಕಮಲ್ ದಹಾಲ್ ‘ಪ್ರಚಂಡ’, ಜನತಾ ಸಮಾಜವಾದಿ ಪಾರ್ಟಿ (ಜೆಎಸ್‌ಪಿ–ಎನ್)ಉಪಾಧ್ಯಕ್ಷ ಉಪೇಂದ್ರ ಯಾದವ್ ಈ ಸಭೆಯಲ್ಲಿ ಉಪಸ್ಥಿತರಿದ್ದರು.

ಶೇರ್ ಬಹದ್ದೂರ್ ದೇವುಬಾ ಅವರು ಪ್ರಧಾನಿಯಾಗುವುದಕ್ಕೆ ಪ್ರಚಂಡ ನೇತೃತ್ವದ ಪಾರ್ಟಿ ಸಮ್ಮತಿಸಿದೆ. ಆದರೆ, ಸಂಸತ್‌ನಲ್ಲಿ 32 ಜನ ಸಂಸದರನ್ನು ಹೊಂದಿರುವ ಜನತಾ ಸಮಾಜವಾದಿ ಪಾರ್ಟಿಯಲ್ಲಿ ಈ ವಿಷಯ ಕುರಿತು ಒಡಕು ಮೂಡಿದೆ.

271 ಸದಸ್ಯ ಬಲದ ನೇಪಾಳದ ಸಂಸತ್‌ನಲ್ಲಿ ನೇಪಾಳಿ ಕಾಂಗ್ರೆಸ್ 61 ಸ್ಥಾನ ಹಾಗೂ ಸಿಪಿಎನ್(ಮಾವೋವಾದಿ ಕೇಂದ್ರ) 49 ಸ್ಥಾನಗಳನ್ನು ಹೊಂದಿವೆ. ಹೀಗಾಗಿ ಜೆಎಸ್‌ಪಿ–ಎನ್ ಬೆಂಬಲ ಇಲ್ಲದೆಯೇ ನೇಪಾಳಿ ಕಾಂಗ್ರೆಸ್ ಸರ್ಕಾರ ರಚನೆ ಮಾಡಲಾಗುವುದಿಲ್ಲ.

ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ಹೈಕೋರ್ಟ್ ಪ್ರಶ್ನೆ

ಸಿದ್ಧವಿರುವ ಹಾಸಿಗೆ; ವಿಳಂಬವೇಕೆ?

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡಲು ರೈಲ್ವೆ ಇಲಾಖೆ ಮತ್ತು ಭಾರತೀಯ ವಾಯುಪಡೆ (ಐಎಎಫ್) ಒದಗಿಸಲು ಮುಂದಾಗಿರುವ ಹಾಸಿಗೆ ಸೌಲಭ್ಯಗಳನ್ನು ಬಳಸಿಕೊಳ್ಳಲು ಕೂಡಲೇ ಕಾರ್ಯಪ್ರವೃತ್ತರಾಗಬೇಕು ಎಂದು ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಸೌಲಭ್ಯಗಳನ್ನು ಬಳಸಿಕೊಳ್ಳಲು ಮೇ 4ರಂದೇ ನೈರುತ್ಯ ರೈಲ್ವೆ ಮತ್ತು ಭಾರತೀಯ ವಾಯುಪಡೆ ಸೂಚನೆ ನೀಡಿದ್ದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ ಎಂಬುದನ್ನು ಗಮನಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದಕುಮಾರ್ ಅವರನ್ನು ಒಳಗೊಂಡ ವಿಶೇಷ ವಿಭಾಗೀಯ ಪೀಠ, 'ವಿಳಂಬಕ್ಕೆ ಕಾರಣ ಏನು ಎಂಬುದರ ವಿವರ ಸಲ್ಲಿಸಬೇಕು' ಎಂದು ಈ ಆದೇಶ ನೀಡಿತು.

ರಾಜ್ಯದಲ್ಲಿ ಆಮ್ಲಜನಕ ಸಹಿತ 45,754 ಹಾಸಿಗೆ, 5,305 ಐಸಿಯು ಹಾಸಿಗೆ, 4,109 ವೆಂಟಿಲೇಟರ್ ಸಹಿತ ಹಾಸಿಗೆಗಳು ಲಭ್ಯ ಇವೆ ಎಂದು ರಾಜ್ಯ ಸರ್ಕಾರ ವಿವರ ಸಲ್ಲಿಸಿತು.

'ಅಗತ್ಯಕ್ಕೆ ತಕ್ಕಷ್ಟು ಹಾಸಿಗೆ ಸೌಲಭ್ಯ ಇಲ್ಲ ಎಂಬುದನ್ನು ಈ ಅಂಕಿ– ಅಂಶ ತೋರಿಸುತ್ತದೆ. ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿಯಲ್ಲಿ ನೈರುತ್ಯ ರೈಲ್ವೆ ಸಿದ್ಧಪಡಿಸಿರುವ ಹಾಸಿಗೆಗಳನ್ನು ಕೂಡಲೇ ಬಳಸಿಕೊಳ್ಳಬೇಕು' ಎಂದು ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿತು.

'ಜಾಲಹಳ್ಳಿಯಲ್ಲಿ ಐಎಎಫ್ ಸಿದ್ಧಪಡಿಸಿರುವ ವೈದ್ಯಕೀಯ ಮತ್ತು ಅರೆವೈದ್ಯಕೀಯ ಸಿಬ್ಬಂದಿ ಸಹಿತ ಹಾಸಿಗೆ ಸೌಲಭ್ಯವನ್ನು 24 ಗಂಟೆಯೊಳಗೆ ಸ್ವಾಧೀನಕ್ಕೆ ಪಡೆಯಬೇಕು ಎಂದು ಪಾಲಿಕೆ ಮುಖ್ಯ ಆಯುಕ್ತರಿಗೆ ಸೂಚನೆ ನೀಡಲಾಗುತ್ತಿದೆ' ಎಂದು ಪೀಠ ಹೇಳಿತು.

ಲಸಿಕೆ ವಿಚಾರದಲ್ಲಿ ದ್ರೋಹ: ಕಾಂಗ್ರೆಸ್ ಕಿಡಿ

ಪ್ರಜಾವಾಣಿ ವಾರ್ತೆ



ವಿಕಾಸಸೌಧ ಆವರಣದಲ್ಲಿರುವ ಗಾಂಧಿ ಪ್ರತಿಮೆ ಮುಂಭಾಗದಲ್ಲಿ ಕಾಂಗ್ರೆಸ್ ಹಿರಿಯ ನಾಯಕರು ಬುಧವಾರ ಪ್ರತಿಭಟನೆ ನಡೆಸಿದರು

ಬೆಂಗಳೂರು: 'ಲಸಿಕೆ ವಿಚಾರದಲ್ಲಿ ಸುಳ್ಳು ಮಾಹಿತಿ ನೀಡುವ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರ ಜನರಿಗೆ ದ್ರೋಹ ಎಸಗಿದೆ. ಲಭ್ಯ ಇಲ್ಲ ಎಂದಾದರೆ ಎಲ್ಲರಿಗೂ ಲಸಿಕೆ ಹಾಕುವುದಾಗಿ ಏಕೆ ಹೇಳಬೇಕಿತ್ತು. ರಾಜ್ಯದಲ್ಲಿ ಅಭಿಯಾನಕ್ಕೆ ಚಾಲನೆ ನೀಡುವ ಅಗತ್ಯವಾದರೂ ಏನಿತ್ತು' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಕೊರೊನಾ ಸೋಂಕು ನಿಯಂತ್ರಿಸುವಲ್ಲಿ ಮತ್ತು ಸೋಂಕಿತರ ಪ್ರಾಣ ರಕ್ಷಣೆ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿರ್ಲಕ್ಷ್ಯ ವಹಿಸುತ್ತಿದೆ ಎಂದು ಆರೋಪಿಸಿ ವಿಕಾಸಸೌಧ ಆವರಣದಲ್ಲಿರುವ ಗಾಂಧಿ ಪ್ರತಿಮೆ ಮುಂಭಾಗದಲ್ಲಿ ಕಾಂಗ್ರೆಸ್ ಹಿರಿಯ ನಾಯಕರು ಬುಧವಾರ ಸಂಜೆ ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಸಿದ್ದರಾಮಯ್ಯ, '45, 60 ವರ್ಷ ಮೀರಿದವರಿಗೇ ಇನ್ನೂ ಲಸಿಕೆ ಸಿಗುತ್ತಿಲ್ಲ. ಮೊದಲ ಡೋಸ್ ಪಡೆದವರೇ ಎರಡನೇ ಡೋಸ್‌ಗೆ ಪರದಾಡುತ್ತಿದ್ದಾರೆ' ಎಂದರು.

'18 ವರ್ಷ ದಾಟಿದವರಿಗೆ ಲಸಿಕೆ ಅಭಿಯಾನಕ್ಕೆ ಮುಖ್ಯಮಂತ್ರಿ ಮೇ 1ರಂದು ಚಾಲನೆ ನೀಡಿದರು. ಆಗ ಲಸಿಕೆ ಎಲ್ಲಿತ್ತು. ಮೇ ಮೂರು ಅಥವಾ ನಾಲ್ಕನೇ ವಾರದಲ್ಲಿ ಲಸಿಕೆ ಬರುತ್ತದೆ ಎಂದು ಮುಖ್ಯ ಕಾರ್ಯದರ್ಶಿ ಹೇಳಿದ್ದಾರೆ. ಆರೋಗ್ಯ ಸಚಿವರು 15 ದಿನ ಲಸಿಕೆ ಹಾಕಲು ಸಾಧ್ಯವಿಲ್ಲ ಎನ್ನುತ್ತಾರೆ. ಇದನ್ನು ಜವಾಬ್ದಾರಿಯುತ ಸರ್ಕಾರ ಎಂದು ಕರೆಯಲು ಆಗುವುದೇ. ಜನರು ಲಸಿಕೆಗಾಗಿ ಸರದಿಯಲ್ಲಿ ದಿನಗಟ್ಟಲೇ ಕಾಯುತ್ತಿದ್ದಾರೆ. ಇದರ ಹೊಣೆಗಾರರು ಯಾರು' ಎಂದು ಪ್ರಶ್ನಿಸಿದರು.

'ದೇಶ ಮತ್ತು ರಾಜ್ಯ ಇಂಥ ಸ್ಥಿತಿಗೆ ಬರಲು ಕೇಂದ್ರ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವವರೇ ನೇರ ಹೊಣೆಗಾರರು. ಹೀಗಾದರೆ, ಮುಖ್ಯಮಂತ್ರಿಯಾಗಿ ಯಡಿಯೂರಪ್ಪ ಏಕಿರಬೇಕು? ಹಾಸಿಗೆಗೆ ಒಬ್ಬರು, ಲಸಿಕೆಗೆ ಇನ್ನೊಬ್ಬರು ಹೀಗೆ ಸಚಿವರನ್ನು ನೇಮಕ ಮಾಡಲಾಗಿದೆ. ಆದರೂ ಸೋಂಕಿತರ ಪರದಾಟ ನಿಂತಿಲ್ಲ. ಸಿದ್ಧತೆ ಮಾಡಿಕೊಳ್ಳದೆ ರಾಜ್ಯವನ್ನು ಇಂಥ ಸ್ಥಿತಿಗೆ ತಳ್ಳಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

ಪ್ರತಿಭಟನೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಸಲೀಂ ಅಹಮದ್, ಶಾಸಕರಾದ ಜಿ. ಪರಮೇಶ್ವರ, ಕೆ.ಆರ್. ರಮೇಶ್ ಕುಮಾರ್, ಕೆ.ಜೆ. ಜಾರ್ಜ್, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಸಂಸದ ಜಿ.ಸಿ. ಚಂದ್ರಶೇಖರ್, ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ ಇದ್ದರು.

ಕುವೆಂಪು ವಿವಿ: ಠಾಣೆ ಮೆಟ್ಟಿಲೇರಿದ ಕುಲಪತಿ–ಕುಲಸಚಿವರ ಜಗಳ

ಪ್ರಜಾವಾಣಿ ವಾರ್ತೆ



ಡಾ.ಬಿ. ಪಿ.ವೀರಭದ್ರಪ್ಪ



ಎಸ್‌.ಎಸ್‌. ಪಾಟೀಲ್

ಶಿವಮೊಗ್ಗ: ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವರ ಕುರ್ಚಿ ಜಗಳ ಬೀದಿಗೆ ಬಿದ್ದಿದ್ದು, ಕುಲಪತಿ ಪ್ರೊ.ಬಿ.ಪಿ. ವೀರಭದ್ರಪ್ಪ ಹಾಗೂ ಕುಲಸಚಿವ ಎಸ್‌.ಎಸ್‌.ಪಾಟೀಲ್ ಅವರು ಬುಧವಾರ ಭದ್ರಾವತಿ ಗ್ರಾಮಾಂತರ ಠಾಣೆಗೆ ದೂರು– ಪ್ರತಿ ದೂರು ನೀಡಿದ್ದಾರೆ.

ಸರ್ಕಾರ ವಿಶ್ವವಿದ್ಯಾಲಯದ ಆಡಳಿತ ಕುಲಸಚಿವ ಎಸ್‌.ಎಸ್‌. ಪಾಟೀಲ್ ಅವರನ್ನು ಬದಲಿಸಿ, ಆ ಸ್ಥಾನಕ್ಕೆ ಸೋಮವಾರ ಕೆಎಎಸ್ ಅಧಿಕಾರಿ ಸಿ.ಎನ್‌.ಶ್ರೀಧರ್ ಅವರನ್ನು ವರ್ಗಾವಣೆ ಮಾಡಿತ್ತು. ಮಂಗಳವಾರ ವಿಶ್ವವಿದ್ಯಾಲಯಕ್ಕೆ ಬಂದ ಶ್ರೀಧರ್ ಹುದ್ದೆಯ ಜವಾಬ್ದಾರಿ ವಹಿಸಿಕೊಂಡಿದ್ದರು. ಈ ಮಧ್ಯೆ ಸರ್ಕಾರ ತಾನೇ ಹೊರಡಿಸಿದ್ದ ಪಾಟೀಲ್ ಅವರ ವರ್ಗಾವಣೆ ಆದೇಶವನ್ನು ಒಂದೇ ದಿನದಲ್ಲಿ ರದ್ದು ಮಾಡಿತ್ತು. ಬುಧವಾರ ಕಚೇರಿಗೆ ಬಂದ ಅವರು ಎಂದಿನಂತೆ ಕುಲಸಚಿವರ ಕರ್ತವ್ಯ ಆರಂಭಿಸಿದ್ದರು.

'ಸರ್ಕಾರದ ಆದೇಶದಂತೆ ಶ್ರೀಧರ್ ಹುದ್ದೆಯ ಜವಾಬ್ದಾರಿ ವಹಿಸಿಕೊಂಡಿದ್ದರು. ಕಚೇರಿಯ ಬೀಗದ ಕೀ ಅವರ ಬಳಿ ಇತ್ತು. ಪಾಟೀಲ್ ಅವರು ತಮ್ಮ ಗಮನಕ್ಕೆ ತಾರದೇ ಬೀಗ ಒಡೆಸಿದ್ದಾರೆ. ನಿಯಮಬಾಹಿರವಾಗಿ ಕುರ್ಚಿ ಮೇಲೆ ಕುಳಿತಿದ್ದಾರೆ' ಎಂದು ಕುಲಪತಿ ವೀರಭದ್ರಪ್ಪ ದೂರು ನೀಡಿದ್ದಾರೆ.

'ತಮ್ಮ ಅನುಪಸ್ಥಿತಿಯಲ್ಲಿ ಕುಲಪತಿಗಳು ಶ್ರೀಧರ್ ಅವರಿಗೆ ಹುದ್ದೆಯ ಜವಾಬ್ದಾರಿ ವಹಿಸಿದ್ದಾರೆ. ಇದು ಕಾನೂನುಬಾಹಿರ. ಅಲ್ಲದೇ ತಮ್ಮ ವರ್ಗಾವಣೆ ಆದೇಶ ರದ್ದಾಗಿದೆ. ಹುದ್ದೆಯ ಹೊಣೆ ವರ್ಗಾಯಿಸದ ಕಾರಣ ನಾವೇ ಕುಲಸಚಿವರಾಗಿ ಮುಂದುವರಿದಿರುವೆ. ಅನಗತ್ಯ ಕಿರುಕುಳ ನೀಡುತ್ತಿರುವ ವೀರಭದ್ರಪ್ಪ ಅವರ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ಎಸ್‌.ಎಸ್‌. ಪಾಟೀಲ್ ದೂರು ಸಲ್ಲಿಸಿದ್ದಾರೆ.

ಎರಡು ವರ್ಷಗಳ ಹಿಂದೆ ಇಬ್ಬರೂ ಸ್ಥಾನ ಅಲಂಕರಿಸಿದ್ದು, ಆಡಳಿತ ವ್ಯವಹಾರದಲ್ಲಿ ಹೊಂದಾಣಿಕೆ ಇರಲಿಲ್ಲ. ಇದು ವಿಶ್ವವಿದ್ಯಾಲಯದಲ್ಲಿ ಹಲವು ಅಹಿತಕರ ಬೆಳವಣಿಗೆಗಳಿಗೆ ಸಾಕ್ಷಿಯಾಗಿತ್ತು. ಸುಗಮ ಆಡಳಿತ ನಿರ್ವಹಣೆಗೂ ತೊಡಕಾಗಿತ್ತು.

'ಕಡಿಮೆ ವೆಚ್ಚದ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆ'

ನವದೆಹಲಿ: ಕಡಿಮೆ ವೆಚ್ಚದಲ್ಲಿ ಎಲೆಕ್ಟ್ರಿಕ್ ವಾಹನಗಳನ್ನು ಚಾರ್ಜಿಂಗ್ ಮಾಡಿಕೊಳ್ಳಬಹುದಾದ ಕೇಂದ್ರಗಳನ್ನು ಶೀಘ್ರವೇ ಸ್ಥಾಪಿಸಲಾಗುವುದು ಎಂದು ಕೇಂದ್ರ ಸರ್ಕಾರ ಬುಧವಾರ ಹೇಳಿದೆ.

ಈ ಸೌಲಭ್ಯ ಕೈಗೆಟಕುವ ಬೆಲೆಯಲ್ಲಿ ಇರಲಿದೆ. ಇದರ ಜೊತೆಗೆ ದೇಶದಾದ್ಯಂತ ವಾಹನಗಳ ಚಾರ್ಜಿಂಗ್‌ಗೆ ಸಂಬಂಧಿಸಿದ ಮೂಲಸೌಕರ್ಯ ಹೆಚ್ಚಿಸಲಾಗುವುದು ಎಂದು ನೀತಿ ಆಯೋಗದ ಪ್ರಕಟಣೆ ತಿಳಿಸಿದೆ.

'ಲೋ ಕಾಸ್ಟ್ ಎ.ಸಿ ಚಾರ್ಜ್ ಪಾಯಿಂಟ್' (ಎಲ್‌ಎಸಿ) ನೆರವಿನಿಂದ 3 ಕಿಲೊವಾಟ್ ವರೆಗೆ ವಿದ್ಯುತ್ ಪೂರೈಕೆಯಾಗಲಿದ್ದು, ಎಲೆಕ್ಟ್ರಿಕ್ ವಾಹನ ಚಾರ್ಜ್ ಮಾಡಬಹುದು. ಚಾರ್ಜ್ ಮಾಡಲು ಅಗತ್ಯವಿರುವ ಸಾಧನಗಳನ್ನು ಉತ್ಪಾದನೆಗೆ ಹಲವು ಕಂಪನಿಗಳು ಆಸಕ್ತಿ ತೋರಿಸಿವೆ ಎಂದೂ ಪ್ರಕಟಣೆ ತಿಳಿಸಿದೆ.

'ಚಾಮರಾಜನಗರ ದುರಂತಕ್ಕೆ ಆಮ್ಲಜನಕ ಕೊರತೆ ಕಾರಣ'

ಒಂದನೇ ಪುಟದಿಂದ...

24 ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಶಸ್ತ್ರಚಿಕಿತ್ಸಕ ಮತ್ತು ಇತರ ನಾಲ್ವರನ್ನು ಒಳಗೊಂಡ ಸಮಿತಿ ನಡೆಸಿದ ವರದಿಯನ್ನೂ ಸಮಿತಿ ವಿಶ್ಲೇಷಿಸಿದೆ. ಆಮ್ಲಜನಕದ ಕೊರತೆಯಿಂದ ಮೂವರು, ಮೆದುಳಿಗೆ ಆದ ಗಾಯದಿಂದ 7 ಮಂದಿ ಮತ್ತು ಕೋವಿಡ್ ಕಾರಣದಿಂದ 14 ಮಂದಿ ಮೃತಪಟ್ಟಿದ್ದಾರೆ ಎಂದು ಆ ಸಮಿತಿಯ ವರದಿ ಹೇಳಿದೆ.

'ನಿರ್ಣಾಯಕ ಸಮಯದಲ್ಲಿ ಅವರಿಗೆ ಆಮ್ಲಜನಕದ ಅಗತ್ಯವಿತ್ತು. ಆದರೆ, ಆಸ್ಪತ್ರೆಯಲ್ಲಿ ಆಮ್ಲಜನಕ ಪೂರೈಕೆಯೇ ಇರಲಿಲ್ಲ. ಮೃತಪಟ್ಟವರ ಕೇಸ್ ಶೀಟ್‌ಗಳನ್ನು ಗಮನಿಸಿದರೆ ಅವರಿಗೆ ಆಮ್ಲಜನಕದ ಅಭಾವ ಇತ್ತು ಎಂಬುದನ್ನು ಸೂಚಿಸುತ್ತದೆ. ಆಮ್ಲಜನಕ ಕೊರತೆ ಕಾರಣಕ್ಕೆ ಮೆದುಳಿನ ಕೋಶಗಳಿಗೆ ಹಾನಿಯಾಗಿದೆ' ಎಂದು ಹೈಕೋರ್ಟ್ ನೇಮಿಸಿದ್ದ ಸಮಿತಿ ಅಭಿಪ್ರಾಯಪಟ್ಟಿದೆ.

'ಮೈಸೂರಿನಲ್ಲಿನ ಆಮ್ಲಜನಕ ಸಿಲಿಂಡರ್ ಮರುಪೂರಣ ಘಟಕದಿಂದ ಆಸ್ಪತ್ರೆಗೆ ಆಮ್ಲಜನಕ ಸರಬರಾಜು ಮಾಡಿಕೊಳ್ಳುವುದು ಜಿಲ್ಲಾಡಳಿತ ಮತ್ತು ಆಸ್ಪತ್ರೆ ಅಧಿಕಾರಿಗಳ ಜವಾಬ್ದಾರಿ. ಆಸ್ಪತ್ರೆಯ ಆಡಳಿತ ಜಾಗರೂಕರಾಗಿದ್ದರೆ, ಪೂರೈಕೆದಾರರು ಸಮಯೋಚಿತವಾಗಿ ಮರುಪೂರಣಗೊಳಿಸಿದ್ದರೆ ಸಾಕಷ್ಟು ಆಮ್ಲಜನಕ ಸಂಗ್ರಹಿಸಬಹುದಿತ್ತು. ಅದನ್ನು ಮಾಡದೆ ಇರುವುದು ಅಮೂಲ್ಯ ಜೀವಗಳ ಹಾನಿಗೆ ಕಾರಣವಾಗಿದೆ' ಎಂದು ವರದಿ ಹೇಳಿದೆ.

'ಶಾಲಾ ವಿದ್ಯಾರ್ಥಿಗಳಿಗೆ ಆಹಾರ ಧಾನ್ಯ'

ಬೆಂಗಳೂರು: ಶಾಲಾ ವಿದ್ಯಾರ್ಥಿಗಳಿಗೆ ನೀಡಲು ಬಾಕಿ ಉಳಿದಿರುವ ಆಹಾರಧಾನ್ಯಗಳನ್ನು ಇದೇ ತಿಂಗಳ ಅಂತ್ಯದೊಳಗೆ ಪೂರ್ಣವಾಗಿ ವಿತರಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ಇಲಾಖೆಯ ಅಧಿಕಾರಿಗಳ ಜೊತೆ ಬುಧವಾರ ಚರ್ಚಿಸಿದ ಬಳಿಕ ಮಾತನಾಡಿದ ಅವರು, 'ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಹಾರದ ಬದಲಿಗೆ ನೀಡಲಾಗುತ್ತಿದ್ದ ಬಾಕಿ ಉಳಿದಿರುವ ಅಡುಗೆ ಎಣ್ಣೆ ಸೇರಿದಂತೆ ಆಹಾರಧಾನ್ಯಗಳನ್ನು ಲಾಕ್ ಡೌನ್ ಅವಧಿ ಮುಗಿದ ತಕ್ಷಣ ವಿತರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದರು.


'ಪೂರ್ಣ ದಿನಗಳಿಗೆ ವಿತರಣೆ ಮಾಡಲು ಅಗತ್ಯವಿರುವ ಆಹಾರಧಾನ್ಯ ಕೆಎಸ್‌ಎಫ್‌ಸಿ ಗೋದಾಮುಗಳಲ್ಲಿ ಏಕಕಾಲದಲ್ಲಿ ಸಂಗ್ರಹಣೆ ಮಾಡಿ ಎತ್ತುವಳಿ ಮಾಡಲು ಕಷ್ಟ. ಹೀಗಾಗಿ, ಎರಡು ಹಂತಗಳಲ್ಲಿ ವಿತರಿಸಲು ತೀರ್ಮಾನಿಸಿ, ಮೊದಲ ಹಂತದಲ್ಲಿ 108 ದಿನಗಳ ಆಹಾರ ಧಾನ್ಯಗಳನ್ನು ಎಲ್ಲ ಶಾಲೆಗಳಿಗೆ ವಿತರಿಸಲಾಗಿದೆ. 2020ರ ನವೆಂಬರ್‌ನಿಂದ 2021ಮಾರ್ಚ್ ವರೆಗಿನ 132 ದಿನಗಳ ಆಹಾರಧಾನ್ಯಗಳನ್ನು ಕೆಲವು ಶಾಲೆಗಳಿಗೆ ವಿತರಿಸಲಾಗಿದೆ' ಎಂದರು.

ಆರ್‌ಟಿಇ ಹಣ ಮರುಪಾವತಿಗೆ ಸೂಚನೆ: 'ಆರ್‌ಟಿಇ ಹಣ ಮರುಪಾವತಿ ಬಾಕಿ ಇರುವ ಶಾಲೆಗಳಿಗೆ ಇದೇ ತಿಂಗಳ ಅಂತ್ಯದೊಳಗೆ ಬಿಡುಗಡೆ ಮಾಡಲು ಹಾಗೂ ಶಾಲೆಗಳಿಗೆ ನೀಡಬೇಕಾದ ಹಣವನ್ನು ತಮ್ಮ ಖಾತೆಯಲ್ಲಿ ಉಳಿಸಿಕೊಂಡಿರುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕೆ ಆಯುಕ್ತರಿಗೆ ಸೂಚಿಸಲಾಗಿದೆ' ಎಂದೂ ಹೇಳಿದರು.

ಬೆಂಗಳೂರು ವಿಭಾಗದ ದಾವಣಗೆರೆ, ಶಿವಮೊಗ್ಗ ಮತು ಚಿತ್ರದುರ್ಗ ಜಿಲ್ಲೆಗಳಿಗೆ ಸೇರಿದ ಖಾಸಗಿ ಅನುದಾನರಹಿತ ಪದವಿಪೂರ್ವ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರೊಂದಿಗೂ ಸಚಿವರು ಸಭೆ ನಡೆಸಿದರು.

ಲಸಿಕೆ: ಕೈ ಚೆಲ್ಲಿದ ಸರ್ಕಾರ

ಒಂದನೇ ಪುಟದಿಂದ...



ರವಿಕುಮಾರ್

'ನಮ್ಮ ಬಳಿ ಲಸಿಕೆ ಇರುತ್ತಿದ್ದರೆ ಹಾಕುತ್ತಿದ್ದೆವು. ಏಪ್ರಿಲ್ 2ನೇ ವಾರದಲ್ಲಿ ಲಸಿಕೆಗೆ ಆರ್ಡರ್ ನೀಡಿದ್ದು, ಮೇ 1ರಿಂದ ನಮಗೆ ಕಂಪನಿಗಳು ಪೂರೈಕೆ ಮಾಡುತ್ತಿವೆ. ಸದ್ಯ ಬೇರೆ ದೇಶಗಳಲ್ಲಿ ಉತ್ಪಾದಿಸುವ ಲಸಿಕೆ ಆಮದಿಗೂ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ರಾಜ್ಯದಲ್ಲಿ ಲಸಿಕೆ ಉತ್ಪಾದನೆಗೆ ಯಾವುದೇ ಕಂಪನಿ ಮುಂದೆ ಬಂದಿಲ್ಲ. ಯಾವುದಾದರೂ ಕಂಪನಿ ಮುಂದೆ ಬಂದರೆ ಅಂಥ ಕಂಪನಿಗಳಿಗೆ ಸಹಾಯ ಮಾಡುತ್ತೇವೆ' ಎಂದೂ ಅವರು ಹೇಳಿದರು.

ಲಸಿಕೆ ಅಭಿಯಾನ– ಅಂಕಿಅಂಶ (ಫೆ. 16ರಿಂದ ಮೇ 12ರವರೆಗೆ)

ವಯೋಮಾನ	ಮೊದಲ ಡೋಸ್	ಎರಡನೇ ಡೋಸ್
60 ವರ್ಷ ದಾಟಿದವರು	85,88,870	22,93,210
45 ವರ್ಷ ದಾಟಿದವರು	73,49,685	16,52,819
18ರಿಂದ 44*	70371	–

(* ಮೇ 1ರಿಂದ ಆರಂಭ)

'ಸ್ಪುಟ್ನಿಕ್ ಲಸಿಕೆಗೂ ಪ್ರಯತ್ನ'

'ಸ್ಪುಟ್ನಿಕ್ ಲಸಿಕೆಗೆ ಅನುಮತಿ ಕೊಟ್ಟಿರುವ ಬಗ್ಗೆ ಕೇಂದ್ರ ಸರ್ಕಾರ ಏನೂ ಹೇಳಿಲ್ಲ. ಟ್ರಯಲ್ ಹಂತದಲ್ಲಿದೆ ಎಂದೂ ಹೇಳುತ್ತಿದೆ. ಆದರೆ, ಇಲ್ಲಿಯೇ ಸ್ಥಳೀಯವಾಗಿ ರೆಡ್ಡಿ ಲ್ಯಾಬ್ಸ್ ಪರವಾನಗಿ ಪಡೆದು ಸ್ಪುಟ್ನಿಕ್ ಲಸಿಕೆ ಉತ್ಪಾದನೆ ಮಾಡುತ್ತಿದೆ ಎಂಬ ಸುದ್ದಿ ಬಂದಿದೆ. ಅವರಿಂದ ಲಸಿಕೆ ಪಡೆಯಬಹುದೇ ಎಂದು ನಾವು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ' ಎಂದು ರವಿಕುಮಾರ್ ಹೇಳಿದರು.

'ಲಸಿಕೆಗಾಗಿ ನಾವು ಜಾಗತಿಕ ಟೆಂಡರ್ ಕರೆದಿದ್ದೇವೆ. ನಮ್ಮಂತೆ ಬೇರೆ ರಾಜ್ಯಗಳು ಕೂಡಾ ಜಾಗತಿಕ ಟೆಂಡರ್ ಕರೆದಿವೆ. ಟೆಂಡರ್ ಪಡೆದು ಪೂರೈಸಲು 15 ದಿನ ಕೊಟ್ಟಿದ್ದೇವೆ. ಆದರೆ, ಪೂರೈಸುವ ಕಂಪನಿಗೆ ಉತ್ಪಾದನೆ ಸಾಮರ್ಥ್ಯ ಬೇಕಲ್ಲ. ಅಲ್ಲದೆ, ಎಲ್ಲ ದೇಶಗಳು ಲಸಿಕೆ ರಫ್ತು ಮಾಡಲು ಅವಕಾಶ ಕೊಡುತ್ತಿಲ್ಲ' ಎಂದರು.

ಲಸಿಕೆ ರಫ್ತು: ಬಿಜೆಪಿ ಸಮರ್ಥನೆ

ಒಂದನೇ ಪುಟದಿಂದ...

'ತಯಾರಿಕಾ ಕಂಪನಿಗಳು ಮಾಡಿಕೊಂಡಿರುವ ಒಪ್ಪಂದದ ಬಾಧ್ಯತೆಯ ಭಾಗವಾಗಿ 5.50 ಕೋಟಿ ಡೋಸ್‌ಗಳಷ್ಟು ಲಸಿಕೆ ರಫ್ತು ಮಾಡಲಾಗಿದೆ. ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಲ್ಲಿ ತಯಾರಿಸಲಾಗಿರುವ ಕೋವಿಶೀಲ್ಡ್ ಲಸಿಕೆಯ ಬೌದ್ಧಿಕ ಆಸ್ತಿ ಹಕ್ಕು ಅದರ ಪಾಲುದಾರ ಸಂಸ್ಥೆ ಅಸ್ಟ್ರಾಜೆನೆಕಾದ ಬಳಿಯಲ್ಲಿದೆ. ಆದ್ದರಿಂದ ತಯಾರಿಸಿದ ಲಸಿಕೆಯ ಒಂದು ಭಾಗವನ್ನು ರಫ್ತು ಮಾಡುವ ಬಾಧ್ಯತೆ ಆ ಸಂಸ್ಥೆಗೆ ಇದೆ. ಕೋವ್ಯಾಕ್ಸಿನ್ ಲಸಿಕೆ ತಯಾರಿಸುತ್ತಿರುವ ಭಾರತ್ ಬಯೊಟೆಕ್ ಸಂಸ್ಥೆಯು ಲಸಿಕೆಗೆ ಬೇಕಾದ ಕಚ್ಚಾ ವಸ್ತು ಆಮದು ಮಾಡಿಕೊಳ್ಳಲು ವಿದೇಶಿ ಸಂಸ್ಥೆಗಳ ಜತೆಗೆ ಒಪ್ಪಂದ ಮಾಡಿಕೊಂಡಿದೆ. ಅದರ ಭಾಗವಾಗಿ ಒಂದಷ್ಟು ಪ್ರಮಾಣದ ಲಸಿಕೆಯನ್ನು ರಫ್ತು ಮಾಡಬೇಕಾದ ಬಾಧ್ಯತೆ ಇದೆ' ಎಂದು ಪಾತ್ರಾ ತಿಳಿಸಿದರು.

ಹಿರಿಯರು ಇರುವ ಸ್ಥಳಗಳಿಗೇ ಹೋಗಿ ಲಸಿಕೆ ಹಾಕುವ ಕಾರ್ಯ ಏಕೆ ಆರಂಭಿಸಬಾರದು: ಬಾಂಬೆ ಹೈಕೋರ್ಟ್

‘ಮನೆಗೇ ಹೋಗಿ ಲಸಿಕೆ ಹಾಕಿ ಜೀವ ಉಳಿಸಬಹುದಿತ್ತು’

ಮುಂಬೈ: ‘ಕೇಂದ್ರ ಸರ್ಕಾರವು ಕೆಲ ತಿಂಗಳುಗಳ ಹಿಂದೆಯೇ ಮನೆಮನೆಗೆ ಹೋಗಿ ಹಿರಿಯ ನಾಗರಿಕರಿಗೆ ಕೋವಿಡ್ ನಿರೋಧಕ ಲಸಿಕೆ ಹಾಕುವ ವ್ಯವಸ್ಥೆ ಮಾಡಿದ್ದರೆ ಅನೇಕ ಗಣ್ಯವ್ಯಕ್ತಿಗಳು ಸೇರಿದಂತೆ ಅನೇಕರ ಜೀವಗಳನ್ನು ಉಳಿಸಬಹುದಿತ್ತು’ ಎಂದು ಬಾಂಬೆ ಹೈಕೋರ್ಟ್ ಬುಧವಾರ ಹೇಳಿದೆ.

ಲಸಿಕಾ ಕೇಂದ್ರಗಳಿಗೆ ತೆರಳಿ ಅನೇಕ ಹಿರಿಯ ನಾಗರಿಕರಿಗೆ ಲಸಿಕೆ ಪಡೆಯಲು ಸಾಧ್ಯವಾಗುತ್ತಿಲ್ಲ ಎನ್ನುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಮುಖ್ಯ ನ್ಯಾಯಮೂರ್ತಿ ದೀಪಂಕರ್ ದತ್ತ ಮತ್ತು ನ್ಯಾಯಮೂರ್ತಿ ಜಿ.ಎಸ್.ಕುಲಕರ್ಣಿ ಅವರನ್ನೊಳಗೊಂಡ ವಿಭಾಗೀಯ ಪೀಠವು, ಹಿರಿಯರು ಇರುವ ಸ್ಥಳಗಳಿಗೇ ಹೋಗಿ ಲಸಿಕೆ ಹಾಕುವ ಕಾರ್ಯಕ್ರಮವನ್ನು ಏಕೆ ಆರಂಭಿಸಬಾರದು ಎಂದು ಕೇಂದ್ರ ಸರ್ಕಾರವನ್ನು ಕೇಳಿತು.

75 ವರ್ಷಕ್ಕಿಂತ ಮೇಲ್ಪಟ್ಟ ಹಿರಿಯ ನಾಗರಿಕರು, ವಿಶೇಷ ಸಾಮರ್ಥ್ಯವುಳ್ಳ ವ್ಯಕ್ತಿಗಳು ಮತ್ತು ಹಾಸಿಗೆ ಹಿಡಿದ ಅಥವಾ ಗಾಲಿಕುರ್ಚಿಯಲ್ಲಿರುವವರಿಗೆ ಮನೆ-ಮನೆ-ಲಸಿಕೆ ಸೌಲಭ್ಯ ನೀಡಬೇಕೆಂದು ಕೋರಿ ವಕೀಲರಾದ ಧೃತಿ ಕಪಾಡಿಯಾ ಮತ್ತು ಕುನಾಲ್ ತಿವಾರಿ ಅವರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ನ್ಯಾಯಪೀಠ ವಿಚಾರಣೆ ನಡೆಸಿತು.


ರಾಜಸ್ಥಾನದ ಬಿಕಾನೇರ್‌ನಲ್ಲಿ ಬುಧವಾರ ಅಂತರರಾಷ್ಟ್ರೀಯ ಶುಶ್ರೂಷಕರ ದಿನದ ಶುಭಾಶಯ ವಿನಿಮಯ ಮಾಡಿಕೊಂಡ ದಾದಿಯರು –ಚಿತ್ರ: ಪಿಟಿಐ

ಈಗಾಗಲೇ ವಿದೇಶಗಳಲ್ಲಿ ಹಲವೆಡೆ ಮನೆಮನೆಗೆ ಲಸಿಕೆ ಕಾರ್ಯಕ್ರಮವನ್ನು ಜಾರಿಗೆ ತಂದಿರುವ ಕ್ರಮವನ್ನು ಗಮನಿಸಿದ್ದನ್ನು ಉಲ್ಲೇಖಿಸಿದ ನ್ಯಾಯಮೂರ್ತಿ ಜಿ.ಎಸ್.ಕುಲಕರ್ಣಿ ಅವರು, ‘ಭಾರತದಲ್ಲಿ ನಾವು ಕೆಲಸಗಳನ್ನು ಬಹಳ ತಡವಾಗಿ ಮಾಡುತ್ತೇವೆ. ಅಂತೆಯೇ ಅನೇಕ ವಿಷಯಗಳು ನಮಗೆ ತಡವಾಗಿ ತಿಳಿಯುತ್ತವೆ’ ಎಂದರು.

‘ನಾವು ಮನೆ ಬಾಗಿಲಿಗೆ ಲಸಿಕೆ ಹಾಕುವ ಕಾರ್ಯಕ್ರಮವನ್ನು ಕೆಲ ಸಮಯದ ಹಿಂದೆಯೇ ಮಾಡಿದ್ದರೆ ನಮ್ಮ ದೇಶದ ಅನೇಕ ಹಿರಿಯ ನಾಗರಿಕರು, ಸಮಾಜದ ಅನೇಕ ಹಿರಿಯ ಗಣ್ಯರ ಜೀವ ಉಳಿಸಬಹುದಿತ್ತು. ಹಿರಿಯ ನಾಗರಿಕರು, ಕೆಲವರು ಗಾಲಿಕುರ್ಚಿಯಲ್ಲಿ ಕುಳಿತೇ ಲಸಿಕಾ ಕೇಂದ್ರಗಳ ಹೊರಗೆ ದೀರ್ಘ ಸರತಿ ಸಾಲಿನಲ್ಲಿ ಕಾಯುತ್ತಿರುವುದನ್ನು ನ್ಯಾಯಾಲಯವು ಗಮನಿಸಿದೆ’ ಎಂದು ಅವರು ಹೇಳಿದರು.

‘ಇಂಥ ದೃಶ್ಯಗಳು ಮನಸ್ಸಿಗೆ ನೋವುಂಟು ಮಾಡುತ್ತವೆ. ಇದು ಖಂಡಿತಾ ಉತ್ತಮ ದೃಷ್ಟಿಯಂತೂ ಅಲ್ಲವೇ ಅಲ್ಲ. ಈಗಾಗಲೇ ಹಿರಿಯರು ಅನೇಕ ಕಾಯಿಲೆಗಳಿಂದ ಬಳಲುತ್ತಿರುತ್ತಾರೆ ಮತ್ತು ಅಂಥವರು ಕೋವಿಡ್ ಸೋಂಕಿಗೆ ಒಳಗಾಗುವ ಅಪಾಯವನ್ನೂ ಎದುರಿಸುತ್ತಿರುತ್ತಾರೆ. ಇಂಥ ಸ್ಥಿತಿಯಲ್ಲೇ ಅವರು ಜನಸಂದಣಿಯಲ್ಲಿ ಸರತಿಯಲ್ಲಿ ನಿಂತು ಕಾಯುತ್ತಿದ್ದಾರೆ’ ಎಂದು ನ್ಯಾಯಪೀಠವು ಕಳವಳ ವ್ಯಕ್ತಪಡಿಸಿತು.

ನ್ಯಾಯಾಲಯವು ತನ್ನ ಹಿಂದಿನ ಏಪ್ರಿಲ್ 22ರ ಆದೇಶವನ್ನು ಪುನರುಚ್ಚರಿಸಿ, ಇದರಲ್ಲಿ ಮನೆ-ಮನೆಗೆ ಲಸಿಕೆ ಕಾರ್ಯಕ್ರಮವನ್ನು ಪ್ರಾರಂಭಿಸದಿರುವ ನಿರ್ಧಾರವನ್ನು ಕೇಂದ್ರ ಸರ್ಕಾರವು ಮರುಪರಿಶೀಲಿಸುವಂತೆಯೂ ಕೇಳಿತು.

‘ಮೂರು ವಾರಗಳಾದರೂ ಕೇಂದ್ರ ಸರ್ಕಾರವು ತನ್ನ ನಿರ್ಧಾರವನ್ನು ಇನ್ನೂ ನಮಗೆ ತಿಳಿಸಿಲ್ಲ. ಸರ್ಕಾರವು ಯಾವುದಾದರೂ ಒಂದು ರೀತಿಯಲ್ಲಿ ನಿರ್ಧಾರ ತೆಗೆದುಕೊಳ್ಳಬೇಕು’ ಎಂದು ಹೇಳಿದ ನ್ಯಾಯಾಲಯವು, ಲಸಿಕಾ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸರ್ಕಾರವು ಯಾವ ಕ್ರಮಗಳನ್ನು ರೂಪಿಸಿದೆ ಮತ್ತು ಅವು ಯಾವಾಗ ಪ್ರಾರಂಭವಾಗುತ್ತವೆ ಎನ್ನುವ ವಿವರಗಳನ್ನು ಮೇ 19ರೊಳಗೆ ನ್ಯಾಯಾಲಯಕ್ಕೆ ಅಫಿಡ್‌ವಿಟ್ ಸಲ್ಲಿಸಬೇಕು’ ಎಂದೂ ನಿರ್ದೇಶನ ನೀಡಿತು.

ಲಸಿಕೆಗಳ ಲಭ್ಯತೆಯೂ ಒಂದು ಸಮಸ್ಯೆಯಾಗಿದೆ ಎಂದು ನ್ಯಾಯಾಲಯವು ಹೇಳಿದಾಗ, ಇದಕ್ಕೆ ಪ್ರತಿಕ್ರಿಯಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅನಿಲ್ ಸಿಂಗ್ ಅವರು ಕೋವಿಶೀಲ್ಡ್ ಕೆಲವೇ ದಿನಗಳಲ್ಲಿ ಲಭ್ಯವಾಗಲಿದೆ ಎಂದು ತಿಳಿಸಿದರು.

ನಿರ್ಗತಿಕರು, ಭಿಕ್ಷಕರು ಮತ್ತು ಬೀದಿಯಲ್ಲಿ ವಾಸಿಸುತ್ತಿರುವವರಿಗೆ ಲಸಿಕೆ ಹಾಕಲು ಯಾವ ಕ್ರಮಗಳನ್ನು ಕೈಗೊಂಡಿದ್ದೀರಿ ಎಂದೂ ನ್ಯಾಯಾಲಯವು ಸರ್ಕಾರವನ್ನು ಪ್ರಶ್ನಿಸಿತು.

ಲಸಿಕೆ: 2ರಿಂದ 18 ವರ್ಷದವರ ಮೇಲೆ ಕ್ಲಿನಿಕಲ್ ಟ್ರಯಲ್

ನವದೆಹಲಿ: ಭಾರತ್ ಬಯೋಟೆಕ್‌ನ 'ಕೋವ್ಯಾಕ್ಸಿನ್' ಕೋವಿಡ್–19 ಲಸಿಕೆಯನ್ನು ಎರಡು ವರ್ಷ ವಯಸ್ಸಿನಿಂದ 18 ವರ್ಷ ವಯೋಮಾನದವರಲ್ಲಿ ಕ್ಲಿನಿಕಲ್ ಟ್ರಯಲ್ ನಡೆಸಲು ತಜ್ಞರ ಸಮಿತಿಯು ಮಂಗಳವಾರ ಶಿಫಾರಸು ಮಾಡಿದೆ.

ದೆಹಲಿಯ ಏಮ್ಸ್ , ಪಟ್ನಾದ ಏಮ್ಸ್ ಹಾಗೂ ನಾಗ್ಪುರದ ಮೆಡಿಟ್ರಿನಾ ಇನ್‌ಸ್ಟಿಟ್ಯೂಟ್ ಸೇರಿದಂತೆ ಹಲವು ಸಂಸ್ಥೆಗಳಲ್ಲಿ ಎರಡು ಮತ್ತು ಮೂರನೇ ಹಂತದ ಕ್ಲಿನಿಕಲ್ ಟ್ರಯಲ್ ನಡೆಸಲಾಗುತ್ತದೆ.

'ಮೂರನೇ ಹಂತದ ಪ್ರಯೋಗಕ್ಕೂ ಮುನ್ನ, ಎರಡನೇ ಹಂತದ ಕ್ಲಿನಿಕಲ್ ಟ್ರಯಲ್‌ನ ಮಧ್ಯಂತರ ಅಧ್ಯಯನ ವರದಿ (ಸುರಕ್ಷತೆಗೆ ಸಂಬಂಧಿಸಿದ ದತ್ತಾಂಶ) ಜೊತೆಗೆ ಡಿಎಸ್‌ಎಂಬಿ ಶಿಫಾರಸುಗಳನ್ನು ಸಿಡಿಎಸ್‌ಸಿಒಗೆ ಸಲ್ಲಿಸಬೇಕು' ಎಂದು ಕೇಂದ್ರ ಔಷಧ ಮತ್ತು ಗುಣಮಟ್ಟ ನಿಯಂತ್ರಣ ಸಂಸ್ಥೆಯ (ಸಿಡಿಎಸ್‌ಸಿಒ) ಕೋವಿಡ್–19 ತಜ್ಞರ ಸಮಿತಿಯು ಶಿಫಾರಸು ಮಾಡಿರುವುದಾಗಿ ವರದಿಯಾಗಿದೆ. ಎರಡು ವರ್ಷ ವಯಸ್ಸಿನ ಮಕ್ಕಳಿಂದ 18 ವರ್ಷದ ವಯೋಮಾನದವರ ಮೇಲೆ ಕೋವ್ಯಾಕ್ಸಿನ್ ಲಸಿಕೆಯ ಕ್ಲಿನಿಕಲ್ ಟ್ರಯಲ್ ನಡೆಸಲು ಭಾರತ್ ಬಯೋಟೆಕ್ ಮನವಿ ಸಲ್ಲಿಸಿತ್ತು.

ಕೊರೊನಾ ‘ಬಿ.1.617’ ರೂಪಾಂತರ ಭಾರತದ್ದಲ್ಲ: ಆರೋಗ್ಯ ಸಚಿವಾಲಯ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಎರಡನೇ ಅಲೆಗೆ ಕಾರಣವಾಗಿರುವ ಕೊರೊನಾ ವೈರಸ್ ರೂಪಾಂತರವು ಭಾರತದ್ದು ಎಂಬ ವರದಿಗಳನ್ನು ಕೇಂದ್ರ ಆರೋಗ್ಯ ಸಚಿವಾಲಯ ತಳ್ಳಿಹಾಕಿದೆ.

‘ಬಿ.1.617’ ಅನ್ನು ಭಾರತೀಯ ರೂಪಾಂತರ ಎಂದು ಉಲ್ಲೇಖಿಸುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಕೇಂದ್ರ ಸರ್ಕಾರ, ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಕೂಡ ಆ ರೀತಿ ಉಲ್ಲೇಖಿಸಿಲ್ಲ. ಆದರೆ ರೂಪಾಂತರ ವೈರಸ್ ಜಾಗತಿಕ ಕಳವಳಕ್ಕೆ ಸಂಬಂಧಿಸಿದ್ದು ಎಂದು ಡಬ್ಲ್ಯುಎಚ್‌ಒ ಮಂಗಳವಾರ ಹೇಳಿರುವುದಾಗಿ ವರದಿಯಾಗುತ್ತಿದೆ. ಇದು ಆಧಾರ ರಹಿತ ಎಂದು ಹೇಳಿದೆ.

ವಿಶ್ವ ಆರೋಗ್ಯ ಸಂಸ್ಥೆಯು ತನ್ನ 32 ಪುಟಗಳ ದಾಖಲೆಯಲ್ಲಿ ‘ಬಿ.1.617’ ಭಾರತದ ರೂಪಾಂತರ ಎಂದು ಉಲ್ಲೇಖಿಸಿಲ್ಲ. ಭಾರತೀಯ ರೂಪಾಂತರ ಎಂಬ ಪದವನ್ನೂ ಬಳಸಿಲ್ಲ. ಈ ರೂಪಾಂತರವು ಜಾಗತಿಕ ಕಳವಳಕ್ಕೆ ಸಂಬಂಧಿಸಿದ್ದು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿರುವುದಾಗಿ ಅನೇಕ ಸುದ್ದಿ ಮಾಧ್ಯಮಗಳು ವರದಿ ಮಾಡಿವೆ. ಈ ಪೈಕಿ ಕೆಲವು ವರದಿಗಳಲ್ಲಿ ಅದನ್ನು ಭಾರತೀಯ ರೂಪಾಂತರ ಎಂದೂ ಉಲ್ಲೇಖಿಸಲಾಗಿದೆ. ಈ ವರದಿಗಳಲ್ಲಿ ಹುರುಳಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ.

ಜಿನೀವಾ ವರದಿ: ಕೋವಿಡ್–19 'ಬಿ.1.617' ಮಾದರಿಯು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಪತ್ತೆಯಾಗಿತ್ತು. ಅದೇ ಮಾದರಿಯ ಕೊರೊನಾ ವೈರಸ್ ಸೋಂಕು 44 ರಾಷ್ಟ್ರಗಳಲ್ಲಿರುವುದು 4,500 ಪರೀಕ್ಷೆ ಮಾದರಿಗಳ ಫಲಿತಾಂಶಗಳಿಂದ ತಿಳಿದು ಬಂದಿದೆ ಎಂದು ಕೋವಿಡ್ ಸಾಂಕ್ರಾಮಿಕದ ಕುರಿತ ವಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ತರುಣ್ ತೇಜ್‌ಪಾಲ್ ಪ್ರಕರಣ: ಇದೇ 19ಕ್ಕೆ ತೀರ್ಪು

ಪಣಜಿ (ಪಿಟಿಐ): ‘ತೆಹಲ್ಕಾ’ದ ಮಾಜಿ ಪ್ರಧಾನ ಸಂಪಾದಕ ತರುಣ್ ತೇಜ್‌ಪಾಲ್ ವಿರುದ್ಧ ಮಾಡಲಾಗಿರುವ ಲೈಂಗಿಕ ದೌರ್ಜನ್ಯ ಪ್ರಕರಣದ ತೀರ್ಪನ್ನು ಇದೇ 19 ರಂದು ಪ್ರಕಟಿಸುವುದಾಗಿ ಗೋವಾದ ಸೆಷನ್ಸ್ ನ್ಯಾಯಾಲಯ ಬುಧವಾರ ತಿಳಿಸಿದೆ.

2013ರಲ್ಲಿ ಗೋವಾದ ಐಷಾರಾಮಿ ಹೋಟೆಲ್‌ನ ಲಿಫ್ಟ್‌ನೊಳಗೆ ಮಹಿಳಾ ಸಹೋದ್ಯೋಗಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ತರುಣ್ ಅವರ ಮೇಲಿದೆ.

ಸಂಕ್ಷಿಪ್ತ ಸುದ್ದಿ

ಸ್ಮಾರಕಗಳಿಗೆ ಪ್ರವೇಶ ನಿಷೇಧ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ವ್ಯಾಪ್ತಿಯ ಸಂರಕ್ಷಿತ ಸ್ಮಾರಕಗಳಿಗೆ ಮೇ 31ರ ವರೆಗೆ ಸಾರ್ವಜನಿಕರ ಪ್ರವೇಶ ನಿಷೇಧಿಸಲಾಗಿದೆ ಎಂದು ಕೇಂದ್ರ ಸಂಸ್ಕೃತಿ ಸಚಿವ ಪ್ರಹ್ಲಾದ್ ಪಟೇಲ್ ಬುಧವಾರ ತಿಳಿಸಿದರು.

ಈ ಮೊದಲು, ಎಎಸ್‌ಐ ವ್ಯಾಪ್ತಿಯ ಸಂರಕ್ಷಿತ ಸ್ಮಾರಕಗಳು, ಐತಿಹಾಸಿಕ ತಾಣಗಳು ಮತ್ತು ವಸ್ತು ಸಂಗ್ರಹಾಲಯಗಳಿಗೆ ಸಾರ್ವಜನಿಕರ ಪ್ರವೇಶವನ್ನು ಮೇ 15ರವರೆಗೆ ನಿರ್ಬಂಧಿಸಲಾಗಿತ್ತು.

ರುಂಜ್ ನದಿಯಲ್ಲಿ 2 ಶವಗಳು ಪತ್ತೆ

ಭೋಪಾಲ್: ಬಿಹಾರ, ಉತ್ತರ ಪ್ರದೇಶದ ಗಂಗಾ ನದಿಯಲ್ಲಿ ಹೆಣಗಳು ತೇಲಿಕೊಂಡ ಬೆನ್ನಲ್ಲೇ ಮಧ್ಯಪ್ರದೇಶದ ಪನ್ನಾ ಜಿಲ್ಲೆಯ ನಂದನಪುರ ಗ್ರಾಮದ ರುಂಝ್ ನದಿಯಲ್ಲಿ 2 ಶವಗಳು ಪತ್ತೆಯಾಗಿವೆ.

ನದಿಯಲ್ಲಿ ಆರು ಶವಗಳು ಪತ್ತೆಯಾಗಿವೆ ಎನ್ನುವ ಕೆಲ ವರದಿಗಳನ್ನು ಅಲ್ಲಗಳೆದಿರುವ ಅಧಿಕಾರಿಗಳು, ಎರಡು ಶವಗಳಷ್ಟೇ ಪತ್ತೆಯಾಗಿವೆ ಎಂದು ಬುಧವಾರ ತಿಳಿಸಿದ್ದಾರೆ.

ಶವಗಳ ವಾರಸುದಾರರ ಕುಟುಂಬಗಳು ಸತ್ತವರಿಗೆ ಕೋವಿಡ್–19 ಸೋಂಕು ಇರಲಿಲ್ಲ ಎಂದು ಸ್ಪಷ್ಟಪಡಿಸಿವೆ.

ನವಲಖಾಗೆ ಜಾಮೀನು ಇಲ್ಲ

ನವದೆಹಲಿ: ಭೀಮಾ ಕೋರೆಗಾಂವ್ ಪ್ರಕರಣದ ಆರೋಪಿ, ಸಾಮಾಜಿಕ ಹೋರಾಟಗಾರ ಗೌತಮ್ ನವಲಖಾ ಅವರ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ತಿರಸ್ಕರಿಸಿದೆ.

ಫೆಬ್ರುವರಿ 8 ರಂದು ಬಾಂಬೆ ಹೈಕೋರ್ಟ್, ನವಲಖಾ ಅವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ನ್ಯಾಯಮೂರ್ತಿ ಯು.ಯು. ಲಲಿತ್ ಮತ್ತು ಕೆ.ಎಂ.ಜೋಸೆಫ್ ಅವರನ್ನು ಒಳಗೊಂಡ ನ್ಯಾಯಪೀಠವು ನವಲಖಾ ಅವರ ಮನವಿಯನ್ನು ತಿರಸ್ಕರಿಸಿದೆ.

ಎಲ್ಗಾರ್ ಪರಿಷದ್–ಮಾವೊ ನಡುವೆ ಸಂಪರ್ಕ ಇದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ನವಲಖಾ ಅವರನ್ನು ಬಂಧಿಸಲಾಗಿತ್ತು. ಪುಣೆಯಲ್ಲಿ ನಡೆದ ಎಲ್ಗಾರ್ ಪರಿಷದ್ ಸಭೆಯಲ್ಲಿ ಹೋರಾಟಗಾರರೊಬ್ಬರು ಮಾಡಿದ ಭಾಷಣವು ಭೀಮಾ ಕೋರೆಗಾಂವ್ ಹಿಂಸಾಚಾರಕ್ಕೆ ಪ್ರಚೋದನೆ ನೀಡಿತ್ತು.

ಇಸ್ರೇಲ್‌ನಲ್ಲಿ ರಾಕೆಟ್ ದಾಳಿ ಕೇರಳ ಮೂಲದ ಮಹಿಳೆ ಸಾವು

ಇಡುಕ್ಕಿ, ಕೇರಳ: ಗಾಜಾದಲ್ಲಿ ಪ್ಯಾಲೆಸ್ಟೈನ್ ಮೂಲದ ಭಯೋತ್ಪಾದಕ ಸಂಘಟನೆಯು ನಡೆಸಿದ ರಾಕೆಟ್ ದಾಳಿಯಲ್ಲಿ ಇಸ್ರೇಲ್‌ನಲ್ಲಿ ಕೆಲಸ ಮಾಡುತ್ತಿದ್ದ ಕೇರಳದ ಸೌಮ್ಯ ಸಂತೋಷ್ ಸಾವಿಗೀಡಾಗಿದ್ದಾರೆ.

ಕೇರಳದ ಇಡುಕ್ಕಿ ಜಿಲ್ಲೆಯ ಸೌಮ್ಯ ಸಂತೋಷ್, ದಕ್ಷಿಣ ಇಸ್ರೇಲ್‌ನ ಕರಾವಳಿ ನಗರವಾದ ಅಶ್ಕೆಲೋನ್‌ನ ಮನೆಯೊಂದರಲ್ಲಿ ವೃದ್ಧರೊಬ್ಬರಿಗೆ ಆರೈಕೆ ಮಾಡುವ ಕೆಲಸ ಮಾಡುತ್ತಿದ್ದರು.

ಉಗ್ರರು ಉಡಾಯಿಸಿದ ರಾಕೆಟ್ ವೃದ್ಧೆಯ ಮನೆಗೆ ಅಪ್ಪಳಿಸಿತ್ತು. ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಸೌಮ್ಯ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾರೆ.

ಮಂಗಳವಾರ ಮಧ್ಯಾಹ್ನ ಘಟನೆ ಸಂಭವಿಸಿದಾಗ ಸೌಮ್ಯ ಅವರು ಪತಿ ಸಂತೋಷ್ ಅವರೊಂದಿಗೆ ವಿಡಿಯೊ ಕರೆ ಮೂಲಕ ಮಾತನಾಡುತ್ತಿದ್ದರು.

‘ಇಲ್ಲಿ ಯುದ್ಧದ ವಾತಾವರಣವಿದೆ’ ಎಂದು ಅತ್ತಕಡೆಯಿಂದ ಸೌಮ್ಯ ಅವರು ಹೇಳುತ್ತಿದ್ದಂತೆ ಜೋರಾದ ಶಬ್ದ ಕೇಳಿಸಿತು. ಆದರೆ, ಫೋನ್ ಸಂಪರ್ಕ ಕಡಿತಗೊಂಡಿರಲಿಲ್ಲ. ಈ ಕಡೆಯಿಂದ ಸಂತೋಷ್ ಅವರು ‘ಹಲೋ ಹಲೋ’ ಎಂದು ಅನೇಕ ಬಾರಿ ಹೇಳಿದರೂ ಅತ್ತಲಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಗಾಬರಿಗೊಂಡ ಸಂತೋಷ್ ಇಸ್ರೇಲ್‌ನಲ್ಲಿರುವ ತಮ್ಮ ಸ್ನೇಹಿತರಿಗೆ ಕರೆ ಮಾಡಿ ವಿಚಾರಿಸಿದಾಗ, ರಾಕೆಟ್ ದಾಳಿಯಲ್ಲಿ ಸೌಮ್ಯ ಸಾವಿಗೀಡಾದ ಸುದ್ದಿ ತಿಳಿಯಿತು ಎಂದು ಮೂಲಗಳು ಹೇಳಿವೆ.

ಅಮ್ಮನ ಕರೆಗಾಗಿ ಕಾಯುತ್ತಿರುವ ಮಗ: ತಾಯಿ ಮೃತಪಟ್ಟ ವಿಷಯ ತಿಳಿಯದ ಅವರ ಒಂಬತ್ತು ವರ್ಷ ಮಗ ಅಮ್ಮನ ಫೋನ್ ಕರೆಗಾಗಿ ಕಾಯುತ್ತಿದ್ದಾನೆ.

‘ನನ್ನ ಮಗ ತಾಯಿಯ ಕರೆಗಾಗಿ ಕಾಯುತ್ತಿದ್ದಾನೆ’ ಎಂದು ಇಡುಕ್ಕಿ ಜಿಲ್ಲೆಯ ಕೀರಿಥೋಡು ನಿವಾಸಿ ಸಂತೋಷ್ ನೋವಿನಿಂದ ಸುದ್ದಿಗಾರರಿಗೆ ತಿಳಿಸಿದರು.

‘ಇಸ್ರೇಲ್ ಸರ್ಕಾರದ ಸಂಪರ್ಕದಲ್ಲಿ ರಾಜತಾಂತ್ರಿಕ ಸಿಬ್ಬಂದಿ’: ನವದೆಹಲಿ (ಪ್ರಜಾವಾಣಿ ವಾರ್ತೆ): ‘ಇಸ್ರೇಲ್ ಮೇಲೆ ನಡೆದ ರಾಕೆಟ್ ದಾಳಿಯಲ್ಲಿ ಸಾವನ್ನಪ್ಪಿರುವ ಕೇರಳ ಮೂಲದ ಸೌಮ್ಯ ಸಂತೋಷ್ ಅವರ ಪಾರ್ಥಿವ ಶರೀರವನ್ನು ಭಾರತಕ್ಕೆ ತರುವ ಪ್ರಯತ್ನ ನಡೆಯುತ್ತಿದೆ. ಟೆಲ್ ಅವಿವ್‌ನಲ್ಲಿರುವ ರಾಯಭಾರಿ ಕಚೇರಿ ಸಿಬ್ಬಂದಿ ಇಸ್ರೇಲ್ ಸರ್ಕಾರದೊಂದಿಗೆ ಸತತ ಸಂಪರ್ಕದಲ್ಲಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಇಸ್ರೇಲ್‌ನಲ್ಲಿರುವ ಭಾರತೀಯರು ಸುರಕ್ಷಿತ ಸ್ಥಳಗಳಲ್ಲಿ ಆಶ್ರಯ ಪಡೆಯಬೇಕು’ ಎಂದೂ ರಾಯಭಾರ ಕಚೇರಿ ಸಲಹೆ ನೀಡಿದೆ.

ಸಂಘರ್ಷ: ಯುದ್ಧದ ಭೀತಿ

ಟೆಲ್ ಅವೀವ್ (ಎಎಫ್‌ಪಿ): ಮೂರು ದಿನಗಳ ಹಿಂದೆ ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಹಾಗೂ ಪಾಲೆಸ್ಟೈನ್‌ನ ಹಮಾಸ್ ಬಂಡುಕೋರರ ನಡುವೆ ಆರಂಭವಾದ ಸಂಘರ್ಷ ತೀವ್ರಗೊಂಡಿದ್ದು, ಎರಡೂ ಕಡೆ ಸೇರಿ 50 ಜನರು ಮೃತಪಟ್ಟಿದ್ದಾರೆ. ಉಭಯ ದೇಶಗಳ ನಡುವಿನ ಸಂಘರ್ಷ ಪೂರ್ಣಪ್ರಮಾಣದ ಯುದ್ಧದ ಹಂತ ತಲುಪಿದರೆ ಆಶ್ಚರ್ಯ ಇಲ್ಲ ಎಂದು ತಜ್ಞರು ಬುಧವಾರ ಆತಂಕ ವ್ಯಕ್ತಪಡಿಸಿದ್ದಾರೆ.

ಉಚಿತ ಲಸಿಕೆ ಕಾರ್ಯಕ್ರಮ: ಪ್ರಧಾನಿಗೆ ವಿಪಕ್ಷಗಳಿಂದ ಪತ್ರ

ನವದೆಹಲಿ: ಕೋವಿಡ್–19 ಪ್ರಸರಣದ ಸರಪಳಿಯನ್ನು ತುಂಡರಿಸಲು ಉಚಿತ ಸಾಮೂಹಿಕ ಲಸಿಕೆ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಒತ್ತಾಯಿಸಿ 12 ವಿರೋಧ ಪಕ್ಷಗಳ ಮುಖಂಡರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬುಧವಾರ ಪತ್ರ ಬರೆದಿದ್ದಾರೆ.

ಅಲ್ಲದೇ, ಸೆಂಟ್ರಲ್ ವಿಸ್ತಾ ಯೋಜನೆಯನ್ನು ಕೈಬಿಡಬೇಕು. ಅದಕ್ಕೆ ಮೀಸಲಿಟ್ಟಿರುವ ಹಣವನ್ನು ಕೋವಿಡ್–19 ವಿರುದ್ಧದ ಹೋರಾಟಕ್ಕೆ ಬಳಸಬೇಕು ಎಂದೂ ಅವರು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ಈ ಪತ್ರಕ್ಕೆ ಸಹಿ ಹಾಕಿದ್ದಾರೆ.

ಅರ್ಹ ಫಲಾನುಭವಿಗಳಿಗೆ ಉಚಿತವಾಗಿ ಆಹಾರಧಾನ್ಯ ವಿತರಿಸಬೇಕು, ನಿರುದ್ಯೋಗಿಗಳಿಗೆ ಪ್ರತಿ ತಿಂಗಳು ₹ 6,000 ನೀಡಬೇಕು ಎಂಬುದು ಸೇರಿದಂತೆ 9 ಅಂಶಗಳನ್ನು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

PARAS




ಸುಭಾಷಿತ

ಏಕಾಗ್ರತೆ ಮತ್ತು ಸರಳತೆ... ಒಮ್ಮೆ ಇವುಗಳನ್ನು ಮೈಗೂಡಿಸಿಕೊಂಡರೆ, ಪರ್ವತಗಳನ್ನೇ ನೀವು ಅಲುಗಾಡಿಸಬಹುದು.

–ಸ್ಟೀವ್ ಜಾಬ್ಸ್

ಬಿಕ್ಕಟ್ಟಿನ ಈ ಸಂದರ್ಭದಲ್ಲಿ ಪ್ರಧಾನಿಯ ಮೌನ ಸರಿಯೇ?

ಕೋವಿಡ್-19 ಸಾಂಕ್ರಾಮಿಕವು ದೇಶದಲ್ಲಿ ನಗರ, ಪಟ್ಟಣಗಳೆನ್ನದೆ ತನ್ನ ವಿಕಾರ ರೂಪವನ್ನು ಪ್ರದರ್ಶಿಸುತ್ತ ಸಾಗಿದೆ. ನಾವು ಈಗ ಕಾಣುತ್ತಿರುವ ಸಾವುಗಳ ಸುಳಿಗೆ ಬಂದು ಸಿಲುಕಿದ್ದು ಹೇಗೆ ಎಂಬ ಬಗ್ಗೆ ದೇಶದಲ್ಲಿ ಚರ್ಚೆ ನಡೆಯುತ್ತಿದೆ. ಪದಗಳನ್ನು ಬಳಸಿ, ಕೆಲವೊಮ್ಮೆ ಅಂಕಿಅಂಶಗಳನ್ನು ಬಳಸಿ ಚರ್ಚೆಗಳನ್ನು ನಡೆಸಲಾಗುತ್ತಿದೆ. ಈ ಚರ್ಚೆಗಳು ಟಿ.ವಿ. ಸ್ಟುಡಿಯೋಗಳಿಗೆ, ಪತ್ರಿಕೆಗಳಿಗೆ ಸೀಮಿತವಾಗಿವೆ ಎನ್ನಲಾಗದು. ಪ್ರತೀ ವ್ಯಕ್ತಿಯ ಮನಸ್ಸನ್ನೂ ಕೋವಿಡ್-19 ಸಂಬಂಧಿತ ಚರ್ಚೆಯು ತಲುಪಿದೆ. ಪ್ರತೀ ವ್ಯಕ್ತಿಯೂ ತನ್ನದೇ ಆದ ಬಗೆಯಲ್ಲಿ ಈ ಸಾಂಕ್ರಾಮಿಕದ ಬಗ್ಗೆ ಆಲೋಚನೆ ನಡೆಸಿದ್ದಾನೆ. ಆದರೆ, ಈ ಹೊತ್ತಿನಲ್ಲಿ ಜನರ ನಡುವೆ ಮಾತುಕತೆ ನಡೆಯುತ್ತಿಲ್ಲ. ಏಕೆಂದರೆ, ಒಬ್ಬರು ಇನ್ನೊಬ್ಬರನ್ನು ಭೇಟಿ ಮಾಡಿ ಮಾತುಕತೆ ನಡೆಸಲು ಅವಕಾಶ ಸಿಗುತ್ತಿಲ್ಲ. ಚುನಾವಣಾ ರ್‍ಯಾಲಿ ಸೇರಿದಂತೆ, ಚಲನಶೀಲ ಸಮಾಜವೊಂದರಲ್ಲಿ ಹತ್ತು ಹಲವು ಬೇಡಿಕೆಗಳನ್ನು ಇಟ್ಟುಕೊಂಡು ನಡೆಯುತ್ತಿದ್ದ ರ್‍ಯಾಲಿಗಳ ಆರ್ಭಟ ತಗ್ಗಿದೆ. ಪ್ರತಿಭಟನೆಗಳ ಬಿಸಿ ತಗ್ಗಿದೆ, ಪ್ರತಿಭಟನೆಗಳು ಆನ್‌ಲೈನ್‌ಗೆ ಸೀಮಿತ ಆದಂತಿವೆ. ನಗರ, ಪೇಟೆಗಳ ಬೀದಿಗಳಲ್ಲಿ ವಾಹನಗಳ ಅಬ್ಬರ ಇಲ್ಲ, ಜನರ ಹೆಜ್ಜೆಯ ಸದ್ದು ಕೂಡ ಇಲ್ಲ. ಕೋವಿಡ್ ಪೀಡಿತರಾಗಿದ್ದ ಕೆಲವು ಯುವಕರಿಗೆ, ಇಳಿ ವಯಸ್ಸಿನವರಿಗೆ ಸಾವಿಗೆ ಮೊದಲು ತಮ್ಮ ಕುಟುಂಬದವರ ಜೊತೆ ಕೊನೆಯ ಮಾತುಗಳನ್ನು ಆಡಲೂ ಸಾಧ್ಯವಾಗಿಲ್ಲ. ಇಂತಹ ಸಾವುಗಳು ಮೌನವನ್ನೂ ಅಸಹನೀಯ ಆಗಿಸುತ್ತವೆ. ಮೌನ ದಿನಹೋದಂತೆಲ್ಲ ಹೆಚ್ಚು ಗಾಢವಾಗುತ್ತಿದೆ. ಚರ್ಚೆಗಳ, ಮಾತುಕತೆಗಳ ಕೇಂದ್ರದಲ್ಲಿ ಇರಬೇಕಿದ್ದ, ಮೌನದ ನಡುವೆಯೂ ಕಾಣಿಸಿಕೊಳ್ಳಬೇಕಿದ್ದ ಧ್ವನಿಯೊಂದು ಕಾಣದಂತೆ ಆಗಿದೆ. ಅದು ಪ್ರಧಾನಿ ನರೇಂದ್ರ ಮೋದಿ ಅವರ ದನಿ. ಆತಂಕ ಮತ್ತು ಭಯ ಜನರ ಮನಸ್ಸನ್ನು ಆಳುತ್ತಿರುವ, ಅತ್ಯಂತ ಗಂಭೀರವಾದ ಈ ಸಂದರ್ಭದಲ್ಲಿ ಪ್ರಧಾನಿಯವರು ರಾಷ್ಟ್ರವನ್ನು ಉದ್ದೇಶಿಸಿ ಮಾತುಗಳನ್ನು ಆಡಿಲ್ಲ. ಅವರು ಕಡೆಯ ಬಾರಿ ಜನರನ್ನು ಉದ್ದೇಶಿಸಿ ಮಾತನಾಡಿದ್ದು ಏಪ್ರಿಲ್ ತಿಂಗಳಲ್ಲಿ. ಆಗ ಅವರು ಚುನಾವಣಾ ವೇದಿಕೆಗಳಿಂದ ಒಂದಿಷ್ಟು ಭರವಸೆಗಳನ್ನು ನೀಡುತ್ತಿದ್ದರು, ಎದುರಾಳಿಗಳಿಗೆ ಸವಾಲು ಹಾಕುತ್ತಿದ್ದರು. ನಂತರ ಅವರು, ಜನರನ್ನು ಉದ್ದೇಶಿಸಿ ಒಂದು ಭಾಷಣ ಮಾಡಿದರು. ಆ ಭಾಷಣದಲ್ಲಿ ಅವರು, ಕೆಲವು ನಿಯಮಗಳನ್ನು ಪಾಲಿಸುವಂತೆ ಜನರಿಗೆ ಕರೆ ನೀಡಿದ್ದರು. ಆ ನಿಯಮಗಳನ್ನು ಕೆಲವು ಸಂದರ್ಭಗಳಲ್ಲಿ ಅವರೂ ಪಾಲಿಸಿಲ್ಲ, ಇತರರೂ ಪಾಲಿಸುತ್ತಿಲ್ಲ.



ಜನತಂತ್ರ ವ್ಯವಸ್ಥೆಯಲ್ಲಿ ನಾಯಕನು ಜನರಿಗೆ ಬೇಕಾದಾಗ ಅವರ ಜೊತೆ ಮಾತನಾಡಬೇಕು, ತನಗೆ ಬೇಕಾದಾಗ ಮಾತ್ರ ಜನರ ಜೊತೆ ಮಾತನಾಡುವುದಲ್ಲ

ಕೋವಿಡ್-19ರ ಎರಡನೆಯ ಅಲೆಯು ದೇಶದಾದ್ಯಂತ ತನ್ನ ಬಾಹುಗಳನ್ನು ಚಾಚಿರುವಾಗ, ಸಾಂಕ್ರಾಮಿಕದ ನಿರ್ವಹಣೆಗೆ ಸಂಬಂಧಿಸಿದಂತೆ ಹಲವು ವಿಷಯಗಳು ಚರ್ಚೆಯ ಮುನ್ನೆಲೆಗೆ ಬಂದಿವೆ. ಲಸಿಕೆ, ಆಮ್ಲಜನಕದ ಸಿಲಿಂಡರ್, ಆಸ್ಪತ್ರೆಗಳಲ್ಲಿನ ಹಾಸಿಗೆಗಳ ಕೊರತೆ, ಸ್ಮಶಾನಗಳಲ್ಲಿ ಅಂತ್ಯಸಂಸ್ಕಾರಕ್ಕೆ ಜನ ಕಾದು ನಿಂತಿದ್ದು, ಲಾಕ್‌ಡೌನ್ ಕ್ರಮಗಳನ್ನು ಜಾರಿಗೆ ತಂದ ಬಗೆ, ಜೀವನೋಪಾಯಕ್ಕೆ ಸಂಬಂಧಿಸಿದ ವಿಚಾರಗಳು, ಮುಂದಿನ ದಿನಗಳಲ್ಲಿ ದೇಶದ ಅರ್ಥ ವ್ಯವಸ್ಥೆಯ ಮೇಲೆ ಆಗಲಿರುವ ಪರಿಣಾಮ... ಇವೆಲ್ಲ ಚರ್ಚೆಯಾಗುತ್ತಿವೆ. ಇವೆಲ್ಲವುಗಳ ಬಗ್ಗೆ ಸರ್ಕಾರ ಏನೆಂದು ಯೋಚಿಸುತ್ತಿದೆ? ಅದು ಏನು ಮಾಡುತ್ತಿದೆ? ಇಂದಿಗೆ, ನಾಳೆಗೆ ಸರ್ಕಾರ ರೂಪಿಸುತ್ತಿರುವ ಯೋಜನೆಗಳೇನು? ಪ್ರಧಾನಿಯವರು ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಿದ್ದಾರೆ. ಪ್ರಧಾನಿಯವರು ತಮ್ಮ ಸಂಪುಟ ಸಹೋದ್ಯೋಗಿಗಳು ಹಾಗೂ ಅಧಿಕಾರಿಗಳ ಜೊತೆ ಮಾತುಕತೆ ನಡೆಸುತ್ತಿರಬಹುದು. ಆದರೆ, ಅತ್ಯಂತ ಕಷ್ಟದ ಹಾಗೂ ಅತ್ಯಂತ ಅನಿಶ್ಚಿತವಾದ ಈ ದಿನಗಳಲ್ಲಿ ಜನರ ಜೊತೆ ಪ್ರಧಾನಿ ಮಾತನಾಡುತ್ತಿಲ್ಲ. ಮೋದಿ ಅವರು ಮಾತನ್ನು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಂಡವರು. ಅವರು ಸಂವಾದವನ್ನು ಹೆಚ್ಚಾಗಿ ನಡೆಸುವುದಿಲ್ಲವಾದರೂ, ಬೇರೆ ರಾಜಕಾರಣಿಗಳು ಅಸೂಯೆಪಟ್ಟುಕೊಳ್ಳುವ ರೀತಿಯಲ್ಲಿ ಜನರ ಜೊತೆ ಸಂವಹನ ನಡೆಸುತ್ತಾರೆ. ಜನತಂತ್ರ ವ್ಯವಸ್ಥೆಯಲ್ಲಿ ನಾಯಕನು ಜನರಿಗೆ ಬೇಕಾದಾಗ ಅವರ ಜೊತೆ ಮಾತನಾಡಬೇಕು, ತನಗೆ ಬೇಕಾದಾಗ ಮಾತ್ರ ಜನರ ಜೊತೆ ಮಾತನಾಡುವುದಲ್ಲ. ಮೌನವಾಗಿರುವುದು ಕಾರ್ಯತಂತ್ರದ ಒಂದು ಭಾಗವೆಂದಾದರೆ, ಅದು ತಪ್ಪು ಎನ್ನಬೇಕಾಗುತ್ತದೆ. ಪ್ರಧಾನಿಯವರ ಮಾತು ಬೆಳ್ಳಿ. ಆದರೆ, ಅವರ ಮೌನವು ಬಂಗಾರವೇನೂ ಅಲ್ಲ. ರಾಷ್ಟ್ರೀಯ ಬಿಕ್ಕಟ್ಟಿನ ಸಂದರ್ಭದಲ್ಲಿ ಯಾವ ಪ್ರಧಾನಿಯೂ ಮೌನದಿಂದ ಇರಬಾರದು.

ದಿನದ ಟ್ವೀಟ್

ಈಗಲೇ ಕಾರ್ಯೋನ್ಮುಖರಾಗೋಣ



ಮಕ್ಕಳನ್ನು ಕೋವಿಡ್ ಮರು ಅಲೆಯಿಂದ ರಕ್ಷಿಸಲು ಮಹಾರಾಷ್ಟ್ರದ ಕೋವಿಡ್ ಕಾರ್ಯಪಡೆ ಈಗಾಗಲೇ ಕಾರ್ಯೋನ್ಮುಖವಾಗಿದೆ. ನಾವು ಉತ್ತಮ ಸನ್ನದ್ಧತೆಗಾಗಿ ವಿಚಾರ ವಿನಿಮಯ ಮಾಡಿಕೊಂಡು, ನಮ್ಮ ನಾಳೆಯ ನಾಗರಿಕರ ಭವಿಷ್ಯಕ್ಕೆ ಇಂದೇ ಮುನ್ನುಡಿ ಬರೆಯಬೇಕಿದೆ.

ಕೆ.ಜೆ.ಜಾರ್ಜ್, ಶಾಸಕ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 13-5-1996

• ರಾಷ್ಟ್ರೀಯ– ಎಡರಂಗಕ್ಕೆ ಕಾಂಗ್ರೆ ಹೊರಗಿನಿಂದ ಬೆಂಬಲ

ನವದೆಹಲಿ, ಮೇ 12 (ಪಿಟಿಐ, ಯುಎನ್‌ಐ)– ಭಾರತೀಯ ಜನತಾ ಪಕ್ಷವು ಕೇಂದ್ರದಲ್ಲಿ ಅಧಿಕಾರದ ಗದ್ದುಗೆ ಏರುವುದನ್ನು ತಪ್ಪಿಸಲು 'ಜಾತ್ಯತೀತ ಸರ್ಕಾರ' ರಚನೆಗೆ ಹೊರಗಿನಿಂದ ಬೆಂಬಲ ನೀಡಲು ಕಾಂಗ್ರೆ ಕಾರ್ಯಕಾರಿಣಿ ಸಭೆ ಇಂದು ತೀರ್ಮಾನ ಕೈಗೊಂಡಿದೆ.

ಪ್ರಧಾನಿ ಹಾಗೂ ಕಾಂಗ್ರೆ ಪಕ್ಷದ ಅಧ್ಯಕ್ಷರೂ ಆದ ಪಿ.ವಿ.ನರಸಿಂಹ ರಾವ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಪಕ್ಷದ ಹಿರಿಯ ನಾಯಕ ಕೆ. ಕರುಣಾಕರನ್, 'ರಾಷ್ಟ್ರೀಯ ಹಾಗೂ ಎಡರಂಗ ಸರ್ಕಾರ ರಚನೆ ಮಾಡಲು ಹೊರಗಿನಿಂದ ಬೆಂಬಲ ನೀಡಲು ನಾವು ನಿರ್ಧರಿಸಿದ್ದೇವೆ. ಕೋಮುವಾದಿ ಶಕ್ತಿಗಳು ಅಧಿಕಾರಕ್ಕೆ ಬರಲು ಅವಕಾಶ ನೀಡಬಾರದು ಎಂಬುದು ನಮ್ಮ ಆಶಯವಾಗಿದೆ' ಎಂದರು.

• ಕಾಂಗ್ರೆ ನಾಯಕರಾಗಿ ರಾವ್ ಆಯ್ಕೆ

ನವದೆಹಲಿ, ಮೇ 12– ಚುನಾವಣೆಯಲ್ಲಿನ ಸೋಲಿನಿಂದಾಗಿ ಈಗಿನ ನಾಯಕತ್ವದ ಬಗೆಗೆ ತೀವ್ರ ವಿರೋಧ ವ್ಯಕ್ತವಾಗಿದ್ದರ ನಡುವೆಯೂ ಇಂದು ಸಂಜೆ ಕಾಂಗ್ರೆಸ್ ಸಂಸದೀಯ ಪಕ್ಷವು ಪಿ.ವಿ.ನರಸಿಂಹ ರಾವ್ ಅವರನ್ನು ಮತ್ತೆ ಒಮ್ಮತದ ನಾಯಕರನ್ನಾಗಿ ಆಯ್ಕೆ ಮಾಡುವ ಮೂಲಕ ಪಕ್ಷದಲ್ಲಿ ಏಕತೆಯನ್ನು ಪ್ರದರ್ಶಿಸಿತು.

ಪಕ್ಷದ ನೂತನ ಲೋಕಸಭೆ ಸದಸ್ಯರು ಮತ್ತು ರಾಜ್ಯಸಭೆ ಸದಸ್ಯರು ಒಮ್ಮತದಿಂದ ರಾವ್ ಅವರನ್ನು ಮತ್ತೆ ತಮ್ಮ ನಾಯಕರನ್ನಾಗಿ ಆಯ್ಕೆ ಮಾಡಿದರು.

50 ವರ್ಷಗಳ ಹಿಂದೆ

ಗುರುವಾರ, 13-5-1971

• ಕೈಗಾರಿಕೆ ಲೈಸೆನ್ಸ್: ಸರಳ ವಿಧಾನಗಳ ಜಾರಿಗೆ ಸಲಹೆ

ನವದೆಹಲಿ, ಮೇ 12– ಕೈಗಾರಿಕೆ ಲೈಸೆನ್ಸ್ ಕೋರಿ ಬರುವ ಅರ್ಜಿಗಳನ್ನು ವರಿಷ್ಠ ಮಟ್ಟದಲ್ಲಿ ಪರಿಶೀಲಿಸಿ ಇತ್ಯರ್ಥಗೊಳಿಸುವುದರ ಮೂಲಕ ಕೈಗಾರಿಕೆ ಲೈಸೆನ್ಸ್ ನೀಡಿಕೆ ವಿಧಾನವನ್ನು ಸರಳಗೊಳಿಸುವ ಸಲಹೆಯನ್ನು ಕೇಂದ್ರ ಕೈಗಾರಿಕೆ ಅಭಿವೃದ್ಧಿ ಸಚಿವ ಶಾಖೆ ಪರಿಶೀಲಿಸುತ್ತಿದೆ.

ಈಗಿರುವ ವಿಧಾನದಂತೆ ಅರ್ಜಿಗಳನ್ನು ಗುಮಾಸ್ತೆಯಿಂದ ಹಿಡಿದು ಅನೇಕ ಮಂದಿ ಅಧಿಕಾರಿಗಳು ಅನೇಕ ಹಂತಗಳಲ್ಲಿ ಪರಿಶೀಲಿಸುತ್ತಿದ್ದಾರೆ. ಇದನ್ನು ತಪ್ಪಿಸಿ ಉನ್ನತಾಧಿಕಾರಿ ಮಟ್ಟದಲ್ಲಿ ಮಾತ್ರ ಅರ್ಜಿಗಳ ಪರಿಶೀಲನೆ ನಡೆಸಬೇಕು. ಏನಾದರೂ ಟೀಕೆಗಳಿದ್ದಲ್ಲಿ ತಕ್ಷಣವೇ ಸಮಜಾಯಿಷಿ ನೀಡಿ ಇತ್ಯರ್ಥಗೊಳಿಸಬಹುದೆಂದು ಕೇಂದ್ರ ಸಲಹಾ ಮಂಡಳಿಯ ಸ್ಥಾಯಿ ಸಮಿತಿ ಸಲಹೆ ನೀಡಿದೆ.

• ರಣಹದ್ದುಗಳ ಜಯ ಶಾಶ್ವತವೆ?

ಢಾಕಾ, ಮೇ 12– ಗಂಗಾ ನದಿಯ ಉದ್ದಕ್ಕೂ ರಣಹದ್ದುಗಳ ಹಾರಾಟ. ಮಾರ್ಚ್ 25ರಿಂದ ಅವುಗಳಿಗೆ ತಿಂದು ತೇಗುವಷ್ಟು ಆಹಾರ. ಕುಕ್ಕಿತಿಂದು ಕಟರೆಯಾಗುವಷ್ಟು ಹೆಣಗಳ ಬಣವೆ. ಕೊಲೆಯಾದ ಐದು ಲಕ್ಷಕ್ಕಿಂತ ಹೆಚ್ಚು ಮಂದಿ ಪಾಕಿಸ್ತಾನೀಯರ ಶವಗಳನ್ನು ಕಂಡು ಅವುಗಳಿಗೂ ಒಂದು ಬಗೆಯ ಭೀಕರ ಅನುಭವ.

ದಿವಾಳಿತನದ ರಾಷ್ಟ್ರವನ್ನು ಅದರ ಅಂತ್ಯದ ಅಂಚಿಗೆ ನೂಕುವ ಅಂತರ್ಯುದ್ಧ ಪಾಕಿಸ್ತಾನದ ಪೂರ್ವ ವಿಭಾಗದಲ್ಲಿ ಪ್ರಾರಂಭವಾದುದು ಮಾರ್ಚ್ 25ರಂದು. ಅಂದಿನಿಂದ ಅಪಾರವಾದ ದುರದೃಷ್ಟಕರ ಆರ್ಥಿಕ ನಷ್ಟ, ಅಸಂಖ್ಯ ಸಾವು–ನೋವು. ಮಾನವೀಯತೆಯಲ್ಲೇ ನಂಬಿಕೆ ಅಳಿದು ಹೋಗುವಂತಹ ದುಷ್ಕೃತ್ಯ ಪರಂಪರೆ.

ಸಾವಿನ ಲೆಕ್ಕವನ್ನು ಸರಿಯಾಗಿ ಇಡದಿದ್ದರೆ ಬದುಕಿದ್ದವರ ಬಾಳೂ ನರಕವಾಗುತ್ತದೆ

ಉರಿವ ಚಿತೆಗೆ ಪರದೆಯೇಕೆ?



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಗಂಗೆಯಲ್ಲಿ ಅನಾಥ ಶವಗಳು ತೇಲುತ್ತಿರುವ ಚಿತ್ರ ವರದಿಗಳು ಇದೀಗ ಬರತೊಡಗಿವೆ. 102 ವರ್ಷಗಳ ಹಿಂದೆ ಹೀಗೇ ಆಗಿತ್ತು. 'ಗಂಗೆಯಲ್ಲಿ ಹೆಣಗಳ ಪ್ರವಾಹವೇ ಬರುತ್ತಿದೆ' ಎಂದು ಆಗ ಹಿಂದೀ ಕವಿ ಸೂರ್ಯಕಾಂತ್ ತ್ರಿಪಾಠಿ ತಮ್ಮದೊಂದು ಕವನದಲ್ಲಿ ವರ್ಣಿಸಿದ್ದರು. ಅಂದಿನ ಬ್ರಿಟಿಷ್ ಆಡಳಿತದ ಸ್ಯಾನಿಟರಿ ಕಮಿಷನರ್ ವರದಿಯ ಪ್ರಕಾರ, ದೇಶದ ಎಲ್ಲ ನದಿಗಳಲ್ಲೂ ಶವಗಳು ತೇಲುತ್ತಿದ್ದವು. ಏಕೆಂದರೆ ಚಿತೆಗೆ ಬೇಕಿದ್ದಷ್ಟು ಒಣ ಕಟ್ಟಿಗೆಯೇ ಇರಲಿಲ್ಲ. ಈಗಿನ ಸ್ಥಿತಿಗೂ ಸೌದೆಯ ಅಭಾವವೇ ಕಾರಣವೆಂದು ಹೇಳಲಾಗುತ್ತಿದೆ. ದಕ್ಷಿಣದಲ್ಲಂತೂ ನದಿಗಳಲ್ಲಿ ನೀರಿಗೂ ಅಭಾವವಿದೆ. ಒಡಲ ಬೆಂಕಿಯಲ್ಲಿ ಚಿತೆ ಉರಿಯುವಂತಿದ್ದಿದ್ದರೆ...

ಸಂಪರ್ಕ ತಂತ್ರಜ್ಞಾನದಲ್ಲಿ ನಾವು 4ಜಿ ನಂತರದ 5ಜಿಗೆ ಕಾಲಿಡುತ್ತಿದ್ದೇವೆ. ಭಾರತದ ಮಹಾಮರಣಗಳ ಚರಿತೆಯ ಪ್ರಕಾರವೂ 4ನೇ ಅಲೆ ಮುಗಿದು 5ನೇ ಅಲೆ ನಡೆಯುತ್ತಿದೆ. ಹಿಂದೆ, 1918-20ರ ಸ್ಪ್ಯಾನಿಷ್ ಫ್ಲೂ ಎಂಬ ಮೊದಲ ಅಲೆಯಲ್ಲಿ ಒಂದೂವರೆ- ಎರಡು ಕೋಟಿ ಜನರು ಬಲಿಯಾಗಿದ್ದರು. ಎರಡನೆಯ ಅಲೆ 1943ರ ಬಂಗಾಳದ ಕ್ಷಾಮ. ಆಗ 20ರಿಂದ 30 ಲಕ್ಷ ಜನರ ಸಾವಾಗಿತ್ತು. ಮೂರನೆಯದು ದೇಶ ವಿಭಜನೆಯ ಸಂದರ್ಭದ ರಕ್ತಪಾತ. ಆಗ ಅಂದಾಜು ಹತ್ತು ಲಕ್ಷ ಜನರು ಸಾವಪ್ಪಿದರು. ಈ ಮೂರೂ ಅಲೆಗಳಿಗೆ ಬ್ರಿಟಿಷರನ್ನೇ ದೂಷಿಸಬಹುದಾಗಿತ್ತು. ಮೊದಲನೇ ಮಹಾಯುದ್ಧದಲ್ಲಿ ಬ್ರಿಟಿಷರ ಪರವಾಗಿ ಹೋರಾಡಲು ಹೋದವರು ಮರಳಿ ಹಡಗಿನಲ್ಲಿ ಮುಂಬೈಗೆ ಬರುವಾಗ ಸ್ಪ್ಯಾನಿಷ್ ಜ್ವರವನ್ನೂ ತಂದರು. ಎರಡನೇ ಮಹಾಯುದ್ಧದಲ್ಲಿ ಬ್ರಿಟಿಷರ ಸೈನ್ಯಕ್ಕೆ ಆಹಾರ ಸಂಗ್ರಹಿಸುವ ಭರದಲ್ಲಿ ಬಂಗಾಳದಲ್ಲಿ ಮಹಾಕ್ಷಾಮ ತಲೆದೋರಿತು. ಮೂಳೆ ಚಕ್ಕಳದ ಜನರು ಸಾಲು ಸಾಲಾಗಿ ಆಹಾರ ಗೋದಾಮುಗಳ ಎದುರು ಕುಸಿದು ಸಾಯುತ್ತಿದ್ದರು (ಆ ಕುರಿತ ವರದಿಯನ್ನು ಓದಿದ ಬ್ರಿಟಿಷ್ ಪ್ರಧಾನಿ ಚರ್ಚಿಲ್, 'ಗಾಂಧಿ ಯಾಕಿನ್ನೂ ಸತ್ತಿಲ್ಲ?' ಎಂದು ಕಡತದ ಮೇಲೆ ಕೊಂಕುಷರಾ ಬರೆದದ್ದೂ ಚರಿತ್ರೆಯಲ್ಲಿ ದಾಖಲಾಗಿದೆ). ಇನ್ನು, ಮೂರನೆಯ ಅಲೆಯಾಗಿ ಬಂದ ದೇಶದ ವಿಭಜನೆಯ ಸಂದರ್ಭದ ಮಹಾಮರಣವಂತೂ ಬ್ರಿಟಿಷರ 'ಒಡೆದು ಆಳುವ' ನೀತಿಯ ಫಲವೇ ತಾನೆ?

ಸ್ವತಂತ್ರ ಭಾರತದ ಈಗಿನ ಕೊರೊನಾ ಸಾಂಕ್ರಾಮಿಕದ ಎರಡು ಅಲೆಗಳಲ್ಲಿ ಇದುವರೆಗೆ 2.55 ಲಕ್ಷ ಜನರು ಗತಿಸಿದ್ದಾರೆ ಎಂದು ಸರ್ಕಾರಿ ದಾಖಲೆಗಳು ಹೇಳುತ್ತಿವೆ. ಈ ದಾಖಲೆಗಳೇ ಸರಿ ಇಲ್ಲವೆಂದೂ ಸಾವಿನ ಸಂಖ್ಯೆ ಕನಿಷ್ಠ ಮೂರು ಪಟ್ಟು (ಗರಿಷ್ಠ ಎಂಟು ಪಟ್ಟು) ಹೆಚ್ಚಿಗೆ ಇದೆಯೆಂದೂ ಸಂಖ್ಯಾತಜ್ಞರು, ಕಂಪ್ಯೂಟರ್ ಮಾಡೆಲಿಂಗ್ ಪರಿಣತರು ಮತ್ತು ಅಂಟುಜಾಡ್ಯ ಅಧ್ಯಯನಕಾರರು ಅಂದಾಜು ಮಾಡಿದ್ದಾರೆ. ಜಾಗತಿಕ ಆರೋಗ್ಯ ಮಾಪನ ಸಂಸ್ಥೆಯ ಮುನ್ನೋಟವನ್ನು ಆಧರಿಸಿ ಆಗಸ್ಟ್ ಹೊತ್ತಿಗೆ ಸಾವಿನ ಸಂಖ್ಯೆ ಹತ್ತು ಲಕ್ಷಕ್ಕೆ ಏರಲಿದೆ ಎಂದು ಪ್ರತಿಷ್ಠಿತ ಬ್ರಿಟಿಷ್ ಮೆಡಿಕಲ್ ಪತ್ರಿಕೆ 'ಲ್ಯಾನ್ಸೆಟ್' ಮೊನ್ನೆ ತಾನೇ ಸಂಪಾದಕೀಯವನ್ನು ಬರೆದಿದೆ. 'ಅದು ನಿಜವೇ ಆದ ಪಕ್ಷದಲ್ಲಿ, ಈ ಆತ್ಮಘಾತುಕ ಮಹಾದುರಂತಕ್ಕೆ ಮೋದಿ ನೇತೃತ್ವದ ಸರ್ಕಾರವೇ ಬಾಧ್ಯಸ್ಥ' ಎಂದು ಖಡಕ್ಕಾಗಿ ಹೇಳಿದೆ.

ನಮ್ಮ ದೇಶದ ಅಸಲೀ ಸಾವಿನ ಸಂಖ್ಯೆ ಎಷ್ಟಿದ್ದೀತೆಂದು ನಿರ್ಧರಿಸಲು ಅಂಕಿಸಂಖ್ಯಾ ತಜ್ಞರು ಅಕ್ಷರಶಃ ಆಕಾಶ- ಪಾತಾಳ ಒಂದು ಮಾಡುತ್ತಿದ್ದಾರೆ. ಉರಿಯುವ ಚಿತೆಗಳ ಫೋಟೊಗಳನ್ನು ಬಾನೆತ್ತರದಿಂದ ಸಂಗ್ರಹಿಸುವುದೇನು, ಹೂಳಿದ ಶವಗಳ ಲೆಕ್ಕ ತೆಗೆಯುವುದೇನು; ಪತ್ರಿಕೆಗಳಲ್ಲಿ ಪ್ರಕಟವಾಗುವ 'ಚಿರಸ್ಮರಣೆ'ಯ ಸಂದೇಶಗಳನ್ನು ಲೆಕ್ಕ ಹಾಕುವುದೇನು (ಉದಾ: ಆರು ಎಡಿಶನ್‌ಗಳಲ್ಲಿ ಪ್ರಕಟವಾಗುವ ಗುಜರಾತಿ 'ಸಂದೇಶ್' ದಿನಪತ್ರಿಕೆಯ ಪ್ರತೀ ಎಡಿಶನ್‌ನಲ್ಲಿ ಎರಡೆರಡು ಪುಟಗಳ ತುಂಬ ಸರಾಸರಿ 75 ವಿದಾಯ ಸಂದೇಶಗಳು ಪ್ರತಿದಿನ ಪ್ರಕಟವಾಗುತ್ತಿವೆ); ಸಾವಿನ ಲೆಕ್ಕವನ್ನು ಇದ್ದುದರಲ್ಲಿ ತುಸು ಅಚ್ಚುಕಟ್ಟಾಗಿ ಇಡುತ್ತ ಬಂದಿದ್ದ ಮುಂಬೈ ಮಹಾನಗರದ ಹಿಂದಿನ ವರ್ಷಗಳ ದಾಖಲೆಗಳನ್ನು ತೆಗೆದು ಈಗಿನ ಹೆಚ್ಚುವರಿ ಸಾವಿನ ಸಂಖ್ಯೆಗಳನ್ನು ಹೋಲಿಸುವುದೇನು...

ಆದರೂ ಕೋವಿಡ್ ಸಾವಿನ ಲೆಕ್ಕ ಅಂದಾಜಿಗೂ ನಿಲುಕುತ್ತಿಲ್ಲ, ಏಕೆಂದರೆ, ವೈಜ್ಞಾನಿಕ ವಿಧಾನದಲ್ಲಿ ಮರಣ ದಾಖಲೆಗಳನ್ನು ಸಂಗ್ರಹಿಸುವ ಶಿಸ್ತು ಈ 5ಜಿ ಯುಗದಲ್ಲೂ ನಮಗೆ ಮೈಗೂಡಿಲ್ಲ. ಸುಧಾರಿತ ದೇಶಗಳಲ್ಲಿ ಪ್ರತೀ ಸಾವಿಗೂ ವೈದ್ಯಕೀಯ ವಿವರಣೆ, ದಾಖಲೆ ಇಡಲಾಗುತ್ತದೆ. ನಮ್ಮಲ್ಲಿ ಆಸ್ಪತ್ರೆಯಲ್ಲಿ ಸತ್ತರೆ ಅಥವಾ ಅಪಮೃತ್ಯುವಿನಿಂದಾಗಿ ಪೊಲೀಸ್ ದಾಖಲೆಗೆ ಸೇರಿದ್ದರೆ ಮಾತ್ರ ಡೆತ್ ಸರ್ಟಿಫಿಕೇಟ್ ಇರುತ್ತದೆ. ಉತ್ತರ ಪ್ರದೇಶ ಮತ್ತು ಬಿಹಾರಗಳಲ್ಲಿ ಶೇಕಡ 10ರಷ್ಟು ಸಾವಿಗೂ ಸರ್ಟಿಫಿಕೇಟ್ ಅಥವಾ ದಾಖಲೆ ಇರುವುದಿಲ್ಲ. ಸ್ಪ್ಯಾನಿಷ್ ಫ್ಲೂ ಸಂದರ್ಭದಲ್ಲಿ ಬ್ರಿಟಿಷರ ಆಳ್ವಿಕೆ ಇದ್ದ ಪ್ರದೇಶಗಳಲ್ಲಷ್ಟೆ ಸಾವಿನ ಅಷ್ಟಿಷ್ಟು ದಾಖಲೆ ಇತ್ತು. ಪ್ರತೀ ಹತ್ತು ವರ್ಷಗಳಿಗೊಮ್ಮೆ ಜನಗಣತಿ ನಡೆದಿದ್ದರಿಂದ, ಜನಸಂಖ್ಯೆ ತೀವ್ರ ಕುಸಿದರೂ ದಶಕದ ಕೊನೆಯಲ್ಲಿ ದಾಖಲೆಗೆ ಸಿಗುತ್ತಿತ್ತು. ಈಗ ನಮಗೆ ಅದೂ ಸಿಗದಂತಾಗಿದೆ; ಏಕೆಂದರೆ, ಈ ದಶಕದ ಜನಗಣತಿ ನಮ್ಮಲ್ಲಿ ಇದೀಗಷ್ಟೆ ಆರಂಭವಾಗಬೇಕಿದೆ. ಹಿಂದಿನ ವರ್ಷ ಗತಿಸಿದವರು ಇದರಲ್ಲಿ ಸೇರ್ಪಡೆ ಆಗುವಂತಿಲ್ಲ.

ಈಗಂತೂ ಹಳ್ಳಿಗಳಿಗೂ ಕೊರೊನಾ ವ್ಯಾಪಿಸುತ್ತಿದೆ. ಆಂಬುಲೆನ್ಸ್ ಸಿಗದೆ, ಆಮ್ಲಜನಕ ಸಿಗದೆ, ಆಸ್ಪತ್ರೆ ಸೇರಲಾಗದೆ, ಶವಾಗಾರದ ಲೆಕ್ಕಕ್ಕೂ ಸೇರದೆ ದಫನಗೊಂಡವರ ಬಗ್ಗೆ ಲೆಕ್ಕವಿಲ್ಲದಷ್ಟು ವರದಿಗಳು ಬರುತ್ತಿವೆ. ಆದರೆ ಸರ್ಕಾರಿ ದಾಖಲೆಗೆ ಸೇರುತ್ತಿಲ್ಲ.

ಗುಜರಾತಿನಲ್ಲಂತೂ ಆಸ್ಪತ್ರೆಯಲ್ಲಿ ಕೋವಿಡ್ ಕಾಯಿಲೆಯಿಂದಲೇ ಮೃತರಾದರೂ- ಅವರು ಈ ಮೊದಲೇ ಹೃದ್ರೋಗ, ಮಧುಮೇಹ, ಕ್ಯಾನ್ಸರ್ ಅಥವಾ ಮೂತ್ರಪಿಂಡ ರೋಗಿಯಾಗಿದ್ದರೆ ಅಂಥವರನ್ನು ಕೋವಿಡ್ ಸಾವಿನ ಲೆಕ್ಕಕ್ಕೆ ಸೇರಿಸಬಾರದೆಂದು ಅಧಿಕೃತ ಆದೇಶವನ್ನೇ ಹೊರಡಿಸಲಾಗಿತ್ತು. ಈ ಬಗ್ಗೆ ಭಾರತೀಯ ವೈದ್ಯ ಸಂಶೋಧನ ಮಂಡಳಿ ಆಕ್ಷೇಪಿಸಬೇಕಾಯಿತು.

2020ರ ಕೊರೊನಾ ಮೊದಲ ಅಲೆಯಲ್ಲಿ ನಾನಾ ಕಾರಣಗಳಿಂದಾಗಿ ಸತ್ಯಚಿತ್ರಣ ಮಬ್ಬಾಗಿದ್ದರಿಂದ 'ಸಾಂಕ್ರಾಮಿಕ ಮುಗಿಯಿತು' ಎಂದು ಕೇಂದ್ರ ಆರೋಗ್ಯ ಸಚಿವರು ಘೋಷಣೆ ಮಾಡಿದರು. ಅಸ್ಪಷ್ಟ ಮಾಹಿತಿಯನ್ನು ಸರ್ಕಾರವೇ ನಂಬಿ, ಲಸಿಕೆ ಮತ್ತು ಆಮ್ಲಜನಕವನ್ನು ವಿದೇಶಗಳಿಗೆ ರವಾನಿಸಿ, ಆರೋಗ್ಯ ವ್ಯವಸ್ಥೆಯನ್ನು ಕಡೆಗಣಿಸಿದ್ದರಿಂದಲೇ ಎರಡನೆ ಅಲೆ ಇಷ್ಟೊಂದು ಭೀಕರವಾಗಿದೆ ಎಂಬುದನ್ನು ಎಲ್ಲ ವಿಶ್ಲೇಷಕರೂ ಹೇಳುತ್ತಾರೆ. ಅಂದಹಾಗೆ, ಸುಳ್ಳಿನ ಸರಮಾಲೆಯನ್ನು ಸೃಷ್ಟಿಸುತ್ತ, ತನ್ನ ಸುಳ್ಳನ್ನು ತಾನೇ ನಂಬುವಂಥ ಸ್ಥಿತಿಗೆ ವೈದ್ಯಕೀಯದಲ್ಲಿ 'ಮಿಥೋಮೇನಿಯಾ' ಎನ್ನುತ್ತಾರೆ. ಮನೋವೈದ್ಯಕೀಯ ಗ್ರಂಥಗಳಲ್ಲಿ ಈ ಕಾಯಿಲೆಗೆ ಉದಾಹರಣೆಯಾಗಿ ಸ್ಟಾಲಿನ್, ಹಿಟ್ಲರ್ ಮತ್ತು ಮಾವೊ ಕಾಲದ ನರಮೇಧಗಳನ್ನು ಹೆಸರಿಸಲಾಗಿದೆ.

ಸಾವಿನ ಲೆಕ್ಕ ಸರಿ ಇದ್ದರೆ ಎಷ್ಟೊಂದು ಅನುಕೂಲಗಳಿವೆ: ಸಂಖ್ಯಾಶಾಸ್ತ್ರ ಮತ್ತು ಗಣಿತೀಯ ಸೂತ್ರಗಳನ್ನು ಬಳಸಿ ಶಕ್ತಿಶಾಲಿ ಕಂಪ್ಯೂಟರ್ ನೆರವಿನಿಂದ 'ಮಾಡೆಲಿಂಗ್' ಮಾಡಬಹುದು. ಸಾಂಕ್ರಾಮಿಕದ ಕರಾಳತೆ ಯಾವ ಋತುಗಳಲ್ಲಿ, ಯಾವ ಪ್ರದೇಶದಲ್ಲಿ, ಯಾವ ವಯೋಮಾನದಲ್ಲಿ ಎಷ್ಟಿರುತ್ತದೆ, ಏನೇನು ಕ್ರಮ ಕೈಗೊಳ್ಳಬೇಕು ಅಥವಾ ಯಾವ ತಪ್ಪನ್ನು ಮಾಡಬಾರದು ಎಂಬುದರ ಸ್ಪಷ್ಟ ಚಿತ್ರಣ ಸಿಗುತ್ತದೆ. ಹೊಸ ಸಾಂಕ್ರಾಮಿಕವನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯ ಬರುತ್ತದೆ. ಇಲ್ಲಾಂದರೆ ವಿಜ್ಞಾನದ ಕಣ್ಣಿಗೂ ಮಂಕು ಪರದೆ ಎಳೆದಂತಾಗುತ್ತದೆ.

ನಂಬಿದರೆ ನಂಬಿ, ಗಾಯತ್ರಿ ಮಂತ್ರದಿಂದ ಕೋವಿಡ್ 19ನ್ನು ಸೋಲಿಸಲು ಸಾಧ್ಯವೇ ಎಂಬ ಪ್ರಯೋಗವೊಂದು ಹೃಷಿಕೇಶದ ವೈದ್ಯವಿಜ್ಞಾನ ಸಂಸ್ಥೆಯಲ್ಲಿ ನಡೆದಿದೆ. ವಿಜ್ಞಾನ ತಂತ್ರಜ್ಞಾನ ಇಲಾಖೆಯ ಧನಸಹಾಯದಿಂದ ಹತ್ತು ರೋಗಿಗಳು ಇದೀಗ ಮಂತ್ರಾಭ್ಯಾಸ ಮುಗಿಸಿದ್ದಾರೆ.

ಅದಾಗಿ, ಗಾಯತ್ರಿ ಮಂತ್ರದ ಕೊನೆಯ ಸಾಲಿನ ಅರ್ಥವೇನು ಗೊತ್ತೆ? 'ನಮ್ಮ ಬುದ್ಧಿ ಸರಿಯಾದ ದಿಕ್ಕಿನಲ್ಲಿ ಚಲಿಸುವಂತೆ ಪ್ರಚೋದಿಸು'.



ಚುರುಮುರಿ



ಕೊರೊನಾ ರೇಖೆ

• ಸುಧೀಂದ್ರ

ಬೇರೆ ದೇಶಗಳಿಂದ ಕೊಡುಗೆಯಾಗಿ ಬಂದ ಆಕ್ಸಿಜನ್ ಸಿಲಿಂಡರ್‌ಗಳನ್ನು ನೋಡುತ್ತಿದ್ದ ನಮ್ಮ ವಿದೇಶಾಂಗ ಸಚಿವರ ಹಾಟ್‌ಲೈನ್‌ಗೆ ಚೀನಾದಿಂದ ಫೋನ್ ಬಂತು. ಈ ಸಮಯದಲ್ಲಿ ಚೀನಾದ ಕಡೆಯಿಂದ ಫೋನ್ ಬಂದಿರುವುದು ನಮ್ಮ ಸಚಿವರಿಗೆ ಸ್ವಲ್ಪ ಅಚ್ಚರಿ ತಂದಿತು.

ಉಚಿತವಾಗಿ ಕೊರೊನಾ ವೈರಸ್ ಕಳುಹಿಸಿದ ಪಾಪಕ್ಕೆ ಪ್ರಾಯಶ್ಚಿತ್ತವಾಗಿ ಚೀನಾವು ಆಕ್ಸಿಜನ್ ಉಡುಗೊರೆ ಕಳುಹಿಸಲು ನಿರ್ಧರಿಸಿರಬಹುದು ಎಂದುಕೊಂಡು ರಿಸೀವರ್ ಎತ್ತಿದರು.

ಅತ್ತ ಕಡೆಯಿಂದ ಮಾತಾಡಿದ ಚೀನೀ ವಿದೇಶಾಂಗ ಸಚಿವರು 'ನಮಸ್ತೆ ಭಾಯ್, ಎರಡೂ ದೇಶಗಳ ಗಡಿಯಲ್ಲಿ ಲೈನ್‌ಗಳನ್ನು ಮಾರ್ಕ್ ಮಾಡ್ಬೇಕು. ನಿಮ್ಕಡೆಯಿಂದ ಒಂದಷ್ಟು ಸರ್ವೇಯರ್‌ಗಳನ್ನು ದೋಕ್ಲಾಮ್‌ಗೆ ಕಳುಹಿಸಿ. ನಮ್ಮವರನ್ನೂ ನಾಳೆ ಅಲ್ಲಿಗೆ ಕಳಿಸ್ತಿದೀನಿ' ಎನ್ನುತ್ತಾ ಲೈನ್ ಕಟ್ ಮಾಡಿದರು.

ಬಾರ್ಡರ್ ಸೆಕ್ಯೂರಿಟಿ ಫೋರ್ಸಿನವರನ್ನು ಅಲರ್ಟ್ ಮಾಡಿ, ಆರ್ಮಿಯವರಿಗೂ ಸಂದೇಶ ಕಳುಹಿಸಿ, ಸರ್ವೇಯರ್‌ಗಳ ದಂಡನ್ನು ಚೀನಾ ಬಾರ್ಡರ್‌ಗೆ ನಿಯೋಜಿಸುವ ವ್ಯವಸ್ಥೆಯನ್ನು ಸಚಿವರು ಮಾಡಿದರು. ಮರುದಿನ ನಮ್ಮವರು ಗಡಿಯತ್ತ ತೆರಳುವಷ್ಟರಲ್ಲಿ ಹಗ್ಗ, ಸರಪಳಿ, ಬಾಂದಿನ ಕಲ್ಲು, ಪೇಯಿಂಟ್ ಡಬ್ಬಿ, ಮ್ಯಾಪುಗಳನ್ನು ಹಿಡಿದು ಚೀನೀ ಸರ್ವೇಯರ್‌ಗಳು ಕಾಯುತ್ತಿದ್ದರು.

ಅಲ್ಲಿನ ಮುಖ್ಯಸ್ಥರು ಬಿಳಿ ಬಾವುಟದೊಂದಿಗೆ ಇತ್ತ ಕಡೆ ಬಂದು ನಮಸ್ಕರಿಸಿದರು. 'ನಿಮ್ಕಡೆ ಕೊರೊನಾ ವೈರಸ್‌ಗಳ ಕಾಟ ತುಂಬಾ ಜಾಸ್ತಿಯಿದೆ ಅಂತ ಗೊತ್ತಾಯ್ತು. ಅವು ಗಡಿ ದಾಟ ನಮ್ಕಡೆ ಬಂದರೆ ಗುರುತಿಸಲು ಈ ವ್ಯವಸ್ಥೆ' ಅಂದರು.

'ವೈರಸ್ ನೋಡಿದ ಕೂಡ್ಲೇ ನಮ್ಕಡೇದು ಅಂತ ಹೇಗೆ ಗುರುತಿಸ್ತೀರಿ?' ಎಂದು ನಮ್ಮ ಸರ್ವೇಯರ್ ಪ್ರಶ್ನಿಸಿದರು. 'ಮೊದಲು ಕರ್ಫ್ಯೂ ಹಾಕ್ತೀವಿ. ವೈರಸ್‌ಗಳು ಹೆದರಿಕೊಂಡು ಬಚ್ಚಿಟ್ಕೊಳ್ತವೆ. ಪೊಲೀಸರ ಲಾಠಿ ಕಂಡರೆ ಬಾಲ ಮುದುರಿಕೊಳ್ತವೆ' ಅಂದ್ರು ಚೀನೀ ಮುಖ್ಯಸ್ಥರು.

'ಗೊತ್ತಾಯ್ತು ಬಿಡಿ, ನಿಮ್ಮ ಜನರಷ್ಟೇ ನಿಮ್ಮಲ್ಲಿ ಹುಟ್ಟೋ ವೈರಸ್‌ಗಳೂ ಶಿಸ್ತಿನ ಸಿಪಾಯಿಗಳೇ' ಎನ್ನುತ್ತಾ ಬಾಂದಿನ ಕಲ್ಲುಗಳನ್ನು ನಮ್ಮವರು ಕೈಗೆತ್ತಿಕೊಂಡರು.

ಸಂಗತ

ದೂರವಿರಿ... ಪ್ರಾಣಿ ಪ್ರಾಣ ಉಳಿಸಿ

ಪಶುಪಕ್ಷಿಗಳಿಗೆ ಕೊರೊನಾ ಸೋಂಕು ತಗುಲದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ನೈತಿಕ ಹೊಣೆ

• ಡಾ. ಮುರಳೀಧರ ಕಿರಣಕೆರೆ

ಕೋವಿಡ್ ಕುರಿತು ಕಳೆದ ವಾರ ಮಗದೊಂದು ಕಳವಳಕಾರಿ ಸುದ್ದಿ ಹೊರಬಿದ್ದಿದೆ. ಹೈದರಾಬಾದಿನ ನೆಹರೂ ಮೃಗೋದ್ಯಾನದ ಎಂಟು ಏಷ್ಯನ್ ಸಿಂಹಗಳು ಕೋವಿಡ್- 19ರಿಂದ ಬಳಲುತ್ತಿರುವುದು ಸಾಂಕ್ರಾಮಿಕದ ವ್ಯಾಪ್ತಿ ವಿಸ್ತಾರವಾಗುತ್ತಿರುವ ಸುಳಿವು ನೀಡಿದೆ.

ಸುಮಾರು 380 ಎಕರೆ ವಿಸ್ತೀರ್ಣದಲ್ಲಿ ಹರಡಿಕೊಂಡು 1,500ಕ್ಕೂ ಅಧಿಕ ಪ್ರಾಣಿಗಳಿಗೆ ಆಶ್ರಯ ನೀಡಿರುವ ಈ ಜನಾಕರ್ಷಕ ಉದ್ಯಾನದ ಸಿಂಹಗಳಲ್ಲಿ ಕೊರೊನಾ ಸಾಂಕ್ರಾಮಿಕದ ಕೆಲವು ಲಕ್ಷಣಗಳು ಕಾಣಿಸಿಕೊಂಡಿವೆ. ಶೀತ, ಕೆಮ್ಮು, ಮಂದ ಹಸಿವಿನಿಂದ ಬಳಲುತ್ತಿದ್ದ ಈ ಮೃಗಗಳ ಗಂಟಲು, ಮೂಗಿನ ಮಾದರಿಗಳ ಆರ್‌ಟಿ-ಪಿಸಿಆರ್ ಪರೀಕ್ಷೆಯಲ್ಲಿ ನಾಲ್ಕು ಸಿಂಹಗಳ ಜೊತೆಗೆ ನಾಲ್ಕು ಸಿಂಹಿಣಿಯರಿಗೆ ಕೋವಿಡ್ ಪಾಸಿಟಿವ್! ಇದು ನಮ್ಮ ದೇಶದ ಪ್ರಾಣಿಗಳಲ್ಲಿ ಕೋವಿಡ್ ಕಾಣಿಸಿಕೊಂಡ ಮೊದಲ ಅಧಿಕೃತ ಪ್ರಕರಣವಾಗಿ ದಾಖಲಾಗಿ, ವ್ಯಾಧಿಯ ಆಳ, ಅಗಲಗಳನ್ನು ಮತ್ತಷ್ಟು ಅಧ್ಯಯನಕ್ಕೆ ಒಳಪಡಿಸುವ ತುರ್ತನ್ನು ಸಾರಿದೆ.

ಮೃಗಾಲಯದ ಸುಮಾರು 25 ಕೆಲಸಗಾರರು ಸೋಂಕಿತರಾಗಿದ್ದು, ಅವರಿಂದ ಇವುಗಳಿಗೆ ಸೋಂಕು ದಾಟಿರಬಹುದು ಎಂಬ ಶಂಕೆಯ ಜೊತೆಯಲ್ಲೇ ಸೋಂಕಿತ ಪ್ರವಾಸಿಗರಿಂದ ಅಂಟಿರಬಹುದು ಎಂಬ ಅನುಮಾನವೂ ತೇಲಾಡುತ್ತಿದೆ. ಈ ಉದ್ಯಾನ ಇರುವುದು ಜನನಿಬಿಡ ಸ್ಥಳದ ಮಧ್ಯೆ. ಗಾಳಿಯಿಂದಲೂ ವೈರಾಣುಗಳು ಹರಡಿರುವ ಸಾಧ್ಯತೆಯ ಬಗ್ಗೆಯೂ ಗಮನ ಹರಿದಿದೆ. ಮೃಗಾಲಯದ ಬೇರೆ ಪ್ರಾಣಿಗಳಲ್ಲೂ ಸೋಂಕು ಇರಬಹುದೇ ಎಂಬುದು ಸದ್ಯದ ಚರ್ಚೆಯ ವಿಷಯ. ಈ ನಡುವೆ, ಉತ್ತರಪ್ರದೇಶದ ಇಟಾವ ಸಫಾರಿ ಉದ್ಯಾನದ ಸಿಂಹಿಣಿಯೊಂದಕ್ಕೆ ಕೋವಿಡ್ ಪಾಸಿಟಿವ್ ಎಂಬ ಸುದ್ದಿಯು ಆತಂಕವನ್ನು ಇನ್ನಷ್ಟು ಏರಿಸಿದೆ!

ವನ್ಯಜೀವಿಗಳಲ್ಲಿ ವಿಸ್ತೃತ ತಪಾಸಣೆಯೆಂಬುದು ತುಂಬಾ ಕಠಿಣವಷ್ಟೇ ಅಲ್ಲ ಅಪಾಯಕಾರಿ ಕಾರ್ಯ ಕೂಡ. ಅರಿವಳಿಕೆ ನೀಡುವ ಮೂಲಕ ಇಲ್ಲವೇ ಯಾಂತ್ರೀಕೃತ ಪಂಜರವನ್ನು ಪ್ರಾಣಿಯ ಚಲನೆಗೆ ಕಿಂಚಿತ್ತೂ ಅವಕಾಶವಾಗದ ರೀತಿಯಲ್ಲಿ ಕಿರಿದಾಗಿಸಿ ನಿರ್ದಿಷ್ಟ ಮಾದರಿಗಳನ್ನು ಸಂಗ್ರಹಿಸಬೇಕು. ಹಾಗಾಗಿ ವನ್ಯಜೀವಿಗಳ ಮಲದ ಮಾದರಿಗಳನ್ನು ಬಳಸಿಕೊಂಡು ರೋಗಾಣುಗಳನ್ನು ಪತ್ತೆ ಮಾಡುವ ಪ್ರಯತ್ನ ನಡೆಯುತ್ತಿದೆ. ಪಾಸಿಟಿವ್ ಬಂದಿರುವ ಸಿಂಹಗಳ ಆರೋಗ್ಯ ಸುಧಾರಿಸಿದೆ ಎಂಬುದಷ್ಟೇ ಸದ್ಯಕ್ಕೆ ಸಮಾಧಾನ ತರುವ ಸುದ್ದಿ.

ಹೈದರಾಬಾದಿನ ಈ ವಿದ್ಯಮಾನವು ಪ್ರಾಣಿಗಳಲ್ಲಿ ಕೋವಿಡ್ ಕಂಡುಬಂದಿರುವ ಮೊದಲ ಪ್ರಕರಣವೇನಲ್ಲ. ಪ್ರಥಮ ಅಲೆಯಲ್ಲೇ ವಿದೇಶಿ ಪಶುಗಳಲ್ಲಿ ವೈರಾಣುಗಳು ಕಂಡುಬಂದಿದ್ದವು. ಬೆಕ್ಕು, ನಾಯಿ, ಮಿಂಕ್, ಹುಲಿ, ಸಿಂಹ, ಚಿರತೆಗಳಲ್ಲಿ ರೋಗಾಣುಗಳು ಪತ್ತೆಯಾಗಿ ತಲ್ಲಣ ತಂದಿತ್ತು.

ಕೊರೊನಾ ಎಂಬುದು ತುಂಬಾ ಹಿಂದೆಯೇ ಗುರುತಿಸಲಾದ ವೈರಾಣುಗಳ ಒಂದು ದೊಡ್ಡ ಸಮೂಹ. ಇದರಲ್ಲಿ ಆಲ್ಫಾ, ಬೀಟಾ, ಗ್ಯಾಮಾ ಮತ್ತು ಡೆಲ್ಟಾ ಎಂಬ ಉಪ ಪಂಗಡಗಳಿವೆ. ಈಗ ವಿಶ್ವದೆಲ್ಲೆಡೆ ಹಾಹಾಕಾರಕ್ಕೆ ಕಾರಣವಾಗಿರುವ ಕೋವಿಡ್ ಸೇರಿದಂತೆ ಕೆಲ ವರ್ಷಗಳ ಹಿಂದೆ ಜಗತ್ತಿನ ವಿವಿಧೆಡೆ ತೀವ್ರ ಆತಂಕ ತಂದಿತ್ತ ಮೆರ್ಸ್, ಸಾರ್ಸ್ ವೈರಾಣುಗಳು ಬೀಟಾ ಗುಂಪಿನವು. ಸಾಕುಪ್ರಾಣಿಗಳಲ್ಲಿ ಆಲ್ಫಾ ರೋಗಾಣುಗಳ ವಸತಿ ಸಾಮಾನ್ಯವಾಗಿದ್ದು, ಅಪರೂಪಕ್ಕೊಮ್ಮೆ ಸೌಮ್ಯ ಸ್ವರೂಪದ ಕಾಯಿಲೆ ತರುತ್ತವೆ. ಬೀಟಾ ವೈರಾಣುಗಳು ಇವುಗಳಲ್ಲಿ ತೀವ್ರ ಬಾಧೆ ತರುವ ಸಾಧ್ಯತೆಗಳು ತುಂಬಾ ಕಡಿಮೆ. ಆದರೂ ಸೋಂಕಿತ ನರರ ನಿರಂತರ ಸಂಪರ್ಕವಿದ್ದಾಗ ರೋಗಾಣುಗಳು ರೂಪಾಂತರಗೊಂಡು ಪ್ರಾಣಿಗಳಲ್ಲೂ ತೀವ್ರ ಸೋಂಕು ತರುವ ಗುಣಗಳನ್ನು ಮೈಗೂಡಿಸಿಕೊಳ್ಳಬಹುದು ಎಂಬುದು ಸದ್ಯದ ಆತಂಕಕ್ಕೆ ಕಾರಣ.

ಪ್ರಾಣಿಗಳಲ್ಲಿ ಸಾರ್ಸ್ ಕೋವ್-2 ವೈರಾಣುಗಳ ಸೋಂಕಿನ ಕುರಿತು ವ್ಯಾಪಕ ಅಧ್ಯಯನಗಳು ಇನ್ನೂ ಆರಂಭವಾಗಿಲ್ಲ. ಸದ್ಯದ ಚಿಂತೆಯಿರುವುದು ನರ ಮಾನವರನ್ನು ಕೋವಿಡ್ ಎರಡು, ಮೂರನೇ ಅಲೆಯಿಂದ ರಕ್ಷಿಸುವುದು ಹೇಗೆಂಬುದು. ವಿಜ್ಞಾನಿಗಳು, ಸಂಶೋಧಕರ ಗಮನವೆಲ್ಲಾ ಅತ್ತಲೇ ನೆಟ್ಟಿದೆ. ತುಸು ಮುಂದಿರುವ ರಷ್ಯಾ, ಮುದ್ದುಪ್ರಾಣಿಗಳಿಗೆ ಲಸಿಕೆ ತಯಾರಿಸುವ ಪ್ರಕ್ರಿಯೆ ಪ್ರಾರಂಭಿಸಿದೆ.



ಕಾಡು ಬಾವಲಿಗಳು, ಪ್ಯಾಂಗೋಲಿನ್‌ಗಳಲ್ಲಿ (ಇರುವೆಬಾಕ) ಸಾಮಾನ್ಯ ವಾಸಿಗಳಾದ ಕೊರೊನಾ ಸೂಕ್ಷ್ಮಾಣುಗಳೇ ಮಾನವನಲ್ಲಿ ತೀವ್ರ ಸೋಂಕು ಉಂಟುಮಾಡುವ ಹಂತಕ್ಕೆ ರೂಪಾಂತರಗೊಂಡಿವೆ ಎಂದು ಅಧ್ಯಯನಗಳು ಹೇಳುತ್ತಿವೆ. ಇದೇ ರೀತಿ ಕೋವಿಡ್ ವೈರಾಣುಗಳೂ ನಿರಂತರ ಪರಿವರ್ತನೆ (ಮ್ಯುಟೇಶನ್) ಕಾರಣ, ಸೋಂಕಿತರ ನಿಕಟ ಸಂಪರ್ಕದಲ್ಲಿರುವ ಸಾಕು ಪ್ರಾಣಿಗಳಿಗೂ ಸೋಂಕು ತರುವ ಸಾಧ್ಯತೆಗಳನ್ನು ಸದ್ಯದ ಅನುಭವದ ಮೇಲೆ ಅಲ್ಲಗಳೆಯುವಂತಿಲ್ಲ.

ಕೋವಿಡ್-19 ಅಥವಾ ಇನ್ನಿತರ ಯಾವುದೇ ಕಾಯಿಲೆಯಿಂದ ಬಳಲುತ್ತಿರುವವರು ಪೂರ್ಣವಾಗಿ ಗುಣವಾಗುವವರೆಗೆ ಪ್ರಾಣಿಗಳ ಸಂಪರ್ಕದಿಂದ ದೂರವಿರಬೇಕು. ಹಾಗೆಯೇ ಕೊರೊನಾ ಶಂಕಿತರು, ನಿಗಾದಲ್ಲಿ ಇರುವವರು ಸಾಕುಪ್ರಾಣಿಗಳಿಂದ ಅಂತರ ಕಾಯ್ದುಕೊಳ್ಳುವುದು ಉತ್ತಮ. ತೀರಾ ಅನಿವಾರ್ಯ ಇದ್ದಲ್ಲಿ ಮಾಸ್ಕ್ ಧರಿಸಿ, ಚೆನ್ನಾಗಿ ಕೈತೊಳೆದುಕೊಂಡು ಪ್ರಾಣಿಗಳನ್ನು ಮುಟ್ಟಬೇಕು. ಪಶು-ಪಕ್ಷಿಗಳಿಗೆ ಸೋಂಕು ತಗುಲದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ನೈತಿಕ ಜವಾಬ್ದಾರಿ ಕೂಡ. ಇಲ್ಲದಿದ್ದರೆ ಅಪಾಯಕಾರಿ ವೈರಾಣುಗಳ ಚಕ್ರವ್ಯೂಹದಿಂದ ಹೊರ ಬರುವುದು ಅಸಾಧ್ಯದ ಮಾತೇ ಸರಿ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ ಬಾಳೆಬೈಲು, ತೀರ್ಥಹಳ್ಳಿ

ವಾಚಕರ ವಾಣಿ

ಗೊಂದಲ ನಿವಾರಿಸಿ

ಕೋವಿಡ್ ಲಸಿಕೆ ಬಗ್ಗೆ ಸರ್ಕಾರದ ಹೇಳಿಕೆಗಳು, ವೆಬ್‌ಸೈಟ್‌ನಲ್ಲಿನ ಮಾಹಿತಿಗಳು ಗೊಂದಲಮಯವಾಗಿವೆ. 18 ವರ್ಷಕ್ಕಿಂತ ಮೇಲ್ಪಟ್ಟವರಿಗೂ ಲಸಿಕೆ ಲಭ್ಯ ಎಂದು ಒಬ್ಬ ಸಚಿವರು ಅಭಿಯಾನ ಶುರು ಮಾಡಿದರು. ನಂತರ, ಲಾಕ್‌ಡೌನ್ ಕಾರಣದಿಂದಾಗಿ ಇದನ್ನು ಮುಂದೂಡಲಾಗಿದೆ ಎಂದು ಮತ್ತೊಬ್ಬ ಸಚಿವರು ಹೇಳಿದರು. Co.win ವೆಬ್‌ಸೈಟ್‌ನಲ್ಲೂ ಶೆಡ್ಯೂಲ್‌ಗೆ 45 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಮಾತ್ರ ಅವಕಾಶವಿದೆ. ಆದರೆ ಸರ್ಕಾರಿ ಆಸ್ಪತ್ರೆ, ಇನ್ನಿತರ ಲಸಿಕೆ ಕೇಂದ್ರಗಳಲ್ಲಿ 18 ವರ್ಷ ಮೇಲ್ಪಟ್ಟವರಿಗೂ ಲಸಿಕೆ ನೀಡಲಾಗುತ್ತಿದೆ. ಅವರೆಲ್ಲರೂ Co.win ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಂಡವರೇ ಅಥವಾ ಬರುವವರಿಗೆಲ್ಲಾ ಲಸಿಕೆ ನೀಡಲಾಗುತ್ತಿದೆಯೇ ಎಂಬುದು ಸ್ಪಷ್ಟವಾಗಿಲ್ಲ.

ಇನ್ನು 60 ವರ್ಷ ಮೇಲ್ಪಟ್ಟವರಿಗೆ ಎರಡನೇ ಡೋಸ್ ಲಸಿಕೆಯನ್ನು ನಿಗದಿತ ದಿನಾಂಕದಲ್ಲಿ ಕೊಡಲಿಲ್ಲ. ಲಸಿಕೆ ಬಗ್ಗೆ ಅವರಿಗೆ ಮಾಹಿತಿಯನ್ನೂ ಕೊಟ್ಟಿಲ್ಲ. ಈಗ ಲಸಿಕೆ ಬಗ್ಗೆ ಅವರಿವರ ಬಳಿ ವಿಚಾರಿಸುವುದೇ ಅವರೆಲ್ಲರ ದಿನಚರಿಯಾಗಿದೆ. ಸಚಿವರುಗಳ ಹೇಳಿಕೆಗಳು, ಲಸಿಕೆ ಕೇಂದ್ರಗಳ ಕಾರ್ಯಸೂಚಿ, ವೆಬ್‌ಸೈಟ್‌ನ ಮಾಹಿತಿ ಎಲ್ಲದರಲ್ಲೂ ಸಾಮ್ಯತೆ ಇರುವಂತೆ ನೋಡಿಕೊಳ್ಳಿ.

ಮಂಜುನಾಥ್ ಜಿ., ಹಗರಿಬೊಮ್ಮನಹಳ್ಳಿ

ಮಾನವೀಯತೆ ಬತ್ತಿಹೋದ ಕಾಲದಲ್ಲಿ...

ಮುಕ್ಕಾಲು ಗಂಟೆ ಹೊತ್ತು ಒಂದೇ ಸಮನೆ 108ಕ್ಕೆ ಕರೆ ಮಾಡಿದರೂ ಆಂಬುಲೆನ್ಸ್ ಸಿಗದಿದ್ದರಿಂದ ಬೇಸತ್ತ ಶಿವಕುಮಾರ್ ಎಂಬುವರು ತಮ್ಮ ಸ್ನೇಹಿತನ ಆಟೊದಲ್ಲೇ ಅಮ್ಮನ ಶವ ಸಾಗಿಸಿದ್ದಾರೆ (ಪ್ರ.ವಾ., ಮೇ 11). ಇಂತಹ ಸಂದಿಗ್ಧ ಪರಿಸ್ಥಿತಿಯು ಸರ್ಕಾರದ ಯೋಜನೆಗಳಿಗೆ ಕನ್ನಡಿ ಹಿಡಿದಂತಿದೆ. ಆಟೊ ಹಿಂಬದಿ ಸೀಟಿನಲ್ಲಿ ಕುಳಿತಿದ್ದ ಶಿವಕುಮಾರ್, ತಾಯಿಯ ಶವವನ್ನು ಎಡಗೈಯಿಂದ ಬಿಗಿಯಾಗಿ ಅಪ್ಪಿ ಹಿಡಿದಿದ್ದ ದೃಶ್ಯ ಮನಕಲಕುವಂತಿದೆ.

ಮಾನವೀಯತೆಯನ್ನು ಜಗಕ್ಕೆ ಸಾರಿದ ದೇಶದಲ್ಲಿ ಇಂದು ಮಾನವೀಯತೆಗೆ ಕೈಚಾಚುವ ಪರಿಸ್ಥಿತಿ ಬಂದಿದೆ. ಮನುಷ್ಯತ್ವ ಸತ್ತು ಹೋಗಿರುವುದು ಜನರಲ್ಲಿ ಅಲ್ಲ ಜನಪ್ರತಿನಿಧಿಗಳಲ್ಲಿ. ಕೋವಿಡ್ ಮೊದಲನೇ ಅಲೆಯಿಂದ ಪಾಠ ಕಲಿಯದ ಸರ್ಕಾರ, ತೀವ್ರ ಸಂಕಷ್ಟದ ಸಮಯದಲ್ಲಿ ಎಚ್ಚೆತ್ತುಕೊಳ್ಳಲು ಹೋಗಿದೆ. ಸಾಲಗಳ ಕೂಪಕ್ಕೆ ಬಿದ್ದ ಮಧ್ಯಮ ವರ್ಗ, ತೀರಾ ಸಂಕಷ್ಟದಲ್ಲಿರುವ ಕೆಳವರ್ಗ ಮತ್ತು ನಕಾರಾತ್ಮಕ ಚಿಂತನೆಗೆ ಬಿದ್ದಿರುವ ಯುವಜನರಿಗಾಗಿ ಯಾವ ಬಗೆಯ ಯೋಜನೆಗಳನ್ನು ರೂಪಿಸಿದೆ ಎಂಬುದನ್ನು ಸರ್ಕಾರ ತಿಳಿಸಬೇಕು.

ಸತೀಶ್ ಬಿ.ಆರ್., ಬೆಂಗಳೂರು

ಆಧಾರ– ಆಧಾರ್!

ಬದುಕಿಗೆ ಆಧಾರ
ಇಲ್ಲದವರಿಗೆ
'ಇಂದಿರಾ' (ಕ್ಯಾಂಟೀನ್) ಆಧಾರ
ಆದರೆ, ಅಲ್ಲಿಗೆ
ಹೋದರೆ ಕೇಳ್ತಾರೆ
ಆಧಾರ್! (ಆಧಾರ್ ಕಾರ್ಡ್)

ಶ್ರೀನಿವಾಸ, ಬೆಂಗಳೂರು

ಕೊರೊನಾ ಸೋಂಕಿತರನ್ನು ಅವಮಾನಿಸದಿರಿ

ಕೊರೊನಾ ಸೋಂಕು ಯಾವ ಹೊತ್ತಿನಲ್ಲಿ ಯಾರ ಮನೆ ಬಾಗಿಲ ಬಳಿ ಬರುತ್ತದೋ ಗೊತ್ತಿಲ್ಲ. ಆದರೆ ಅದು ಬೀದಿಗಳನ್ನು, ಮನೆಗಳನ್ನು, ಕೋಣೆಗಳನ್ನು ಬದಲಿಸುವಷ್ಟರ ಮಟ್ಟಿಗೆ ಸಂಬಂಧಿಕರು, ನೆರೆಹೊರೆಯವರು, ಗೆಳೆಯರು, ಪ್ರೀತಿಪಾತ್ರರ ನಡುವೆ ಅಂತರ ಸೃಷ್ಟಿಸುತ್ತಿದೆ. ಕೊರೊನಾ ಸೋಂಕು ತಗುಲಿದೆ ಎಂಬ ಕಾರಣಕ್ಕಾಗಿ ಅವರ ಮನಸ್ಸು ಗಾಸಿಗೊಳಿಸುವಂತಹ ಕೆಲಸವನ್ನು ಯಾರೂ ಮಾಡಬೇಡಿ.

ಕೊರೊನಾ ಸೋಂಕಿತರು ಮೊದಲೇ ಭಯ, ಆತಂಕಕ್ಕೆ ಒಳಗಾಗಿರುತ್ತಾರೆ. ಅಂತಹವರನ್ನು ಮಾನಸಿಕವಾಗಿ ಇನ್ನಷ್ಟು ಕುಗ್ಗಿಸುವುದು ಸರಿಯಲ್ಲ. ಅಗತ್ಯವಿರುವ ಮನೋಧೈರ್ಯವನ್ನು ಅವರಿಗೆ ನೀಡಿ. ಅದಕ್ಕೆ ಪೂರಕವಾದ ವಾತಾವರಣ ಸೃಷ್ಟಿಸಿ, ಗೌರವ ಮತ್ತು ಪ್ರೀತಿಯಿಂದ ನೋಡಿಕೊಂಡರೆ ಅವರು ಶೀಘ್ರ ಗುಣಮುಖರಾಗಲು ಅನುವಾಗುತ್ತದೆ.

ವಿದ್ಯಾಶ್ರೀ ಬಿ., ಬಳ್ಳಾರಿ

'ಬೊಬ್ಬೆ' ಪದ ಬಳಕೆ ಅಗತ್ಯವಿರಲಿಲ್ಲ

'ಎರಡನೇ ಡೋಸ್‌ಗೆ ಲಸಿಕೆ ಬರಲು ಆರಂಭವಾಗಿದೆ. ಅದಕ್ಕಾಗಿ ಗಾಬರಿ ಬಿದ್ದು, ರಾತ್ರಿ ವೇಳೆ ಸರದಿಯಲ್ಲಿ ನಿಂತು ಬೊಬ್ಬೆ ಹೊಡೆಯುವ ಅಗತ್ಯವಿಲ್ಲ' ಎಂದು ಮುಖ್ಯಮಂತ್ರಿ ಹೇಳಿರುವುದು ಹಿರಿಯ ನಾಗರಿಕರಿಗೆ ಆಘಾತವನ್ನುಂಟು ಮಾಡಿದೆ. ಹಿರಿಯ ನಾಗರಿಕರು ಸರ್ಕಾರದ ಆದೇಶವನ್ನು ಪಾಲಿಸಲು ಮತ್ತು ರೋಗ ಹರಡುವುದನ್ನು ತಡೆಗಟ್ಟಲು ಜವಾಬ್ದಾರಿಯುತರಾಗಿ ಸರದಿಯಲ್ಲಿ ನಿಲ್ಲುತ್ತಿದ್ದಾರೆ. ಅಂತಹವರಿಗೆ 'ಬೊಬ್ಬೆ' ಎಂಬ ಪದವನ್ನು ಉಪಯೋಗಿಸದೆ, ನಮ್ಮ ಸುಂದರವಾದ ಕನ್ನಡ ಭಾಷೆಯಲ್ಲಿ 'ಲಸಿಕೆಯು ಸರ್ವರಿಗೂ ಲಭ್ಯವಾಗುತ್ತದೆ' ಎಂದು ಹೇಳಿಕೆ ಕೊಟ್ಟಿದ್ದರೆ ಸಾಕಿತ್ತು.

ರಾ.ಬಾ.ವರದರಾಜನ್, ಬೆಂಗಳೂರು

ಸುಳ್ಳು ಭರವಸೆ ನಿಲ್ಲಿಸಿ; ನೋವಿಗೆ ಸ್ಪಂದಿಸಿ

ಮುಖ್ಯಮಂತ್ರಿ ಯಡಿಯೂರಪ್ಪನವರೇ, ಸುಳ್ಳು ಹೇಳುವುದನ್ನು, ಸುಳ್ಳು ಭರವಸೆಗಳನ್ನು ನೀಡುವುದನ್ನು ನೀವು ಹಾಗೂ ನಿಮ್ಮ ಸಚಿವರು ದಯಮಾಡಿ ನಿಲ್ಲಿಸಿ. ಕೇಂದ್ರ ಸರ್ಕಾರದ ಅಸಹಕಾರದ ಮಲತಾಯಿ ಧೋರಣೆಯ ವಿರುದ್ಧ ನಿಮ್ಮ ಸಂಸದರನ್ನು ಮಾತನಾಡಲು ಆಗ್ರಹಿಸಿ. ರಾಜ್ಯದ ಅರ್ಹ ಹಕ್ಕನ್ನು ತರಲು ವಿಫಲರಾಗಿರುವ ಅವರಿಗೆ ಸಂಸದರಾಗಿ ಮುಂದುವರಿಯಲು ಯಾವ ನೈತಿಕ ಅಧಿಕಾರವಿದೆ? ಹೈಕೋರ್ಟ್ ನ್ಯಾಯಪೀಠದ ಸೂಚನೆಯನ್ನೂ ಮುರಿದಂತೆ ಸುಳ್ಳು ಹೇಳುತ್ತಿರುವ ನೀವು ಜನರ ಎದುರು ಪೊಳ್ಳಾಗುತ್ತಿದ್ದೀರಿ. ಕೇಂದ್ರಕ್ಕೆ ಆಗ್ರಹಿಸಿ ಮಾತನಾಡಿ. ರಾಜ್ಯದ ಮುಖ್ಯಮಂತ್ರಿಯಾಗಿ ರಾಜ್ಯದ ನೋವಿಗೆ ಸ್ಪಂದಿಸುವುದು ನಿಮ್ಮ ಕರ್ತವ್ಯ.

ಎಸ್.ಜಿ. ಸಿದ್ಧರಾಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಮಕ್ಕಳಿಗೆ ಹೆಚ್ಚಿನ ಅಪಾಯ ತಂದೊಡ್ಡುವ ಸಾಧ್ಯತೆ • ವೈದ್ಯಕೀಯ ತಜ್ಞರ ಎಚ್ಚರಿಕೆ

ಮೂರು ತಿಂಗಳ ಬಳಿಕ ಮೂರನೇ ಅಲೆ

• ಗುರು ಪಿ.ಎಸ್., ವರುಣ ಹೆಗಡೆ

‘ರಾಜ್ಯದಲ್ಲಿ ಜೂನ್ ಮೊದಲ ವಾರದ ವೇಳೆಗೆ ಕೋವಿಡ್ ಎರಡನೇ ಅಲೆಯು ನಿಯಂತ್ರಣಕ್ಕೆ ಬರಲಿದೆ. ಆದರೆ, ಮೂರು ತಿಂಗಳ ಬಳಿಕ ಮೂರನೇ ಅಲೆ ಕಾಣಿಸಿಕೊಳ್ಳುವುದು ನಿಶ್ಚಿತ. ಆ ವೇಳೆ ಮಕ್ಕಳಿಗೆ ಸೋಂಕು ಹೆಚ್ಚಿನ ಅಪಾಯವನ್ನು ತಂದೊಡ್ಡಬಹುದು’ ಎಂದು ವೈದ್ಯಕೀಯ ತಜ್ಞರು ಎಚ್ಚರಿಸಿದ್ದಾರೆ.

ರಾಜ್ಯದಲ್ಲಿ ಕಳೆದ ವರ್ಷ ಮಾ.8ರಂದು ಮೊದಲ ಪ್ರಕರಣ ವರದಿಯಾಗಿತ್ತು. ಜೂನ್ ತಿಂಗಳಲ್ಲಿ ಏರುಗತಿ ಪಡೆದ ಸೋಂಕು, ಅಕ್ಟೋಬರ್ ತಿಂಗಳಲ್ಲಿ ಇಳಿಕೆ ಕಂಡಿತ್ತು. ಈ ವರ್ಷ ಫೆಬ್ರವರಿ ತಿಂಗಳ ಕೆಲದಿನಗಳು 24 ಗಂಟೆಗಳ ಅವಧಿಯಲ್ಲಿ ವರದಿಯಾಗುತ್ತಿದ್ದ ಪ್ರಕರಣಗಳ ಸಂಖ್ಯೆ 500ರ ಗಡಿಯ ಆಸುಪಾಸಿನಲ್ಲಿತ್ತು. ಆದರೆ, ಮಾರ್ಚ್ ತಿಂಗಳಲ್ಲಿ ಮತ್ತೆ ಏರುಗತಿ ಪಡೆದುಕೊಳ್ಳುವ ಮೂಲಕ ರಾಜ್ಯದಲ್ಲಿ ಎರಡನೇ ಅಲೆ ಕಾಣಿಸಿಕೊಂಡಿತು. ಮೊದಲ ಅಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ 60 ವರ್ಷ ಮೇಲ್ಪಟ್ಟವರು ಕೋವಿಡ್ ಪೀಡಿತರಾಗಿ, ಸಮಸ್ಯೆ ಎದುರಿಸಿದ್ದರು. ಆದರೆ, ಎರಡನೇ ಅಲೆಯಲ್ಲಿ ಮಧ್ಯ ವಯಸ್ಕರು ಅಧಿಕ ಸಂಖ್ಯೆಯಲ್ಲಿ ಕೊರೊನಾ ಸೋಂಕಿತರಾಗುತ್ತಿದ್ದಾರೆ.

ಈಗ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ವಿತರಣೆ ಅಭಿಯಾನ ನಡೆಯುತ್ತಿರುವ ಕಾರಣ ಮೂರನೇ ಅಲೆ ಈ ವರ್ಗದವರಿಗೆ ಅಪಾಯವನ್ನುಂಟು ಮಾಡದು ಎಂದು ತಜ್ಞರು ಸ್ಪಷ್ಟಪಡಿಸಿದ್ದಾರೆ. ಆದರೆ, ಮಕ್ಕಳಿಗೆ ಈವರೆಗೂ ದೇಶದಲ್ಲಿ ಲಸಿಕೆಗಳು ಸಂಶೋಧಿಸಲ್ಪಟ್ಟಿಲ್ಲ. ಹೀಗಾಗಿ, ಮೂರನೇ ಅಲೆ ಕಾಣಿಸಿಕೊಳ್ಳುವ ವೇಳೆಗೆ ಅವರಿಗೆ ಲಸಿಕೆ ವಿತರಣೆ ಪ್ರಾರಂಭವಾಗದಿದ್ದಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗಿ, ಸಮಸ್ಯೆ ಎದುರಿಸಬೇಕಾಗಬಹುದು ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

‘ಮೇ 15ರ ಬಳಿಕ ಕೊರೊನಾ ಸೋಂಕು ಉತ್ತುಂಗಕ್ಕೆ ಹೋಗಲಿದೆ. ಬಳಿಕ ಪ್ರಕರಣಗಳ ಸಂಖ್ಯೆ ಇಳಿಕೆ ಕಾಣುತ್ತಾ ಬರುತ್ತದೆ. ಜೂನ್ ಮೊದಲ ವಾರದಲ್ಲಿ ನಿಯಂತ್ರಣಕ್ಕೆ ಬರುವ ನಿರೀಕ್ಷೆಯಿದೆ. ಮೂರನೇ ಅಲೆ ಬರುತ್ತದೆಯೋ ಇಲ್ಲವೋ ಎಂಬ ಪ್ರಶ್ನೆ ಅಪ್ರಸ್ತುತ. ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಮೂರನೇ ಅಲೆ ಕಾಣಿಸಿಕೊಳ್ಳುತ್ತದೆ. ಈಗಾಗಲೇ ಕೆಲ ದೇಶಗಳು ನಾಲ್ಕನೇ ಅಲೆಯನ್ನು ಎದುರಿಸುತ್ತಿವೆ’ ಎಂದು ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರು ತಿಳಿಸಿದ್ದಾರೆ.

ವರ್ತನೆ ಮೇಲೆ ಅವಲಂಬನೆ: ‘ರಾಜ್ಯದಲ್ಲಿ ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ಮೂರನೇ ಅಲೆ ಕಾಣಿಸಿಕೊಳ್ಳಲಿದೆ. ಎರಡನೇ ಅಲೆ ಪೂರ್ಣ ಪ್ರಮಾಣದಲ್ಲಿ ನಿಯಂತ್ರಣಕ್ಕೆ ಬಂದ 90 ದಿನಗಳ ಬಳಿಕ ಮೂರನೇ ಅಲೆ ಪ್ರಾರಂಭವಾಗಲಿದೆ. ಹೀಗಾಗಿ, ಚಳಿಗಾಲದಲ್ಲಿ ಈ ವೈರಾಣು ಮತ್ತೆ ರೂಪಾಂತರಗೊಂಡು ಕಾಣಿಸಿಕೊಳ್ಳುತ್ತದೆ. ಅದರ ತೀವ್ರತೆ ಮತ್ತು ಹರಡುವಿಕೆಯ ಬಗ್ಗೆ ಈಗಲೇ ಹೇಳಲು ಸಾಧ್ಯವಿಲ್ಲ. ಜನರ ವರ್ತನೆ ಮತ್ತು ರೋಗ ಎದುರಿಸಲು ಮಾಡಿಕೊಳ್ಳುವ ಸಿದ್ಧತೆಯನ್ನು ಅವಲಂಬಿಸಿರುತ್ತದೆ’ ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯ ಹಾಗೂ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ. ಎನ್. ಮಂಜುನಾಥ್ ಹೇಳಿದರು.

‘ಈಗ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ವಿತರಣೆ ಪ್ರಾರಂಭವಾಗಿದೆ. ಆದರೆ, ಮಕ್ಕಳಿಗೆ ಲಸಿಕೆಗಳು ಸಂಶೋಧಿಸಲ್ಪಟ್ಟಿಲ್ಲ. ಹೀಗಾಗಿ, ಮೂರನೇ ಅಲೆಯು ಮಕ್ಕಳಿಗೆ ಹೆಚ್ಚು ಸಮಸ್ಯೆಯನ್ನು ತಂದೊಡ್ಡುವ ಸಾಧ್ಯತೆ ಇರುತ್ತದೆ. ಮೊದಲ ಅಲೆಗೆ ಹೋಲಿಸಿದಲ್ಲಿ ಈಗ ಸೋಂಕು ವೇಗವಾಗಿ ಹರಡುತ್ತಿದೆ. ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳದಿದ್ದಲ್ಲಿ ಮೂರನೇ ಅಲೆ ಕೂಡ ಹೆಚ್ಚಿನ ಅಪಾಯವನ್ನುಂಟು ಮಾಡಲಿದೆ’ ಎಂದು ವಿಕ್ಟೋರಿಯಾ ಆಸ್ಪತ್ರೆಯ ಶ್ವಾಸಕೋಶ ಔಷಧ ವಿಭಾಗದ ಮುಖ್ಯಸ್ಥ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ. ಶಶಿಭೂಷಣ್ ಬಿ.ಎಲ್. ಎಚ್ಚರಿಸಿದರು.

‘ಮಕ್ಕಳಲ್ಲಿ ಸೋಂಕಿನ ತೀವ್ರತೆ ಕಡಿಮೆ’



‘ಈಗಾಗಲೇ ಕೋವಿಡ್ ಪೀಡಿತರಾದ ಬಹುತೇಕ ಮಕ್ಕಳಿಗೆ ಸೌಮ್ಯ ಮತ್ತು ಮಧ್ಯಮ ಸ್ವರೂಪದ ಲಕ್ಷಣಗಳು ಕಾಣಿಸಿಕೊಂಡಿವೆ. ಅವರು ಬೇಗ ಚೇತರಿಸಿಕೊಳ್ಳುತ್ತಿದ್ದಾರೆ. ಮೂರನೇ ಅಲೆಯಲ್ಲಿ ವೈರಾಣು ಯಾವ ರೀತಿ ರೂಪಾಂತರಗೊಂಡು, ಪರಿಣಾಮ ಬೀರುತ್ತದೆ ಎನ್ನುವುದರ ಬಗ್ಗೆ ಈಗಲೇ ನಿಖರವಾಗಿ ಹೇಳಲು ಸಾಧ್ಯವಿಲ್ಲ. ಹಾಗಾಗಿ, ಆತಂಕಕ್ಕೆ ಒಳಗಾಗಬೇಕಿಲ್ಲ’ ಎಂದು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕ ಡಾ. ಸಂಜಯ್ ಕೆ.ಎಸ್. ತಿಳಿಸಿದರು.

‘ಮಕ್ಕಳಿಗೆ ಸೋಂಕಿನ ಸೌಮ್ಯ ಮತ್ತು ಮಧ್ಯಮ ಲಕ್ಷಣಗಳು ಕಾಣಿಸಿಕೊಂಡಲ್ಲಿ ಮನೆ ಆರೈಕೆಗೆ ಒಳಗಾಗಬಹುದು. ಎರಡರಿಂದ ಮೂರು ದಿನಗಳಲ್ಲಿಯೇ ಲಕ್ಷಣಗಳು ಕಡಿಮೆಯಾಗಲಿವೆ. ತೀವ್ರ ಪ್ರಮಾಣದ ಶ್ವಾಸಕೋಶದ ಸಮಸ್ಯೆಗಳು ಕಾಣಿಸಿಕೊಳ್ಳುವುದು ಕಡಿಮೆ. ಒಟ್ಟು ಜನಸಂಖ್ಯೆಯಲ್ಲಿ ಶೇ 30ರಷ್ಟು ಮಕ್ಕಳಿದ್ದಾರೆ. ಮೂರನೇ ಅಲೆಯಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾದರೂ ಚಿಕಿತ್ಸೆಗೆ ಅಗತ್ಯವಿರುವ ಸೌಲಭ್ಯಗಳು ಹಾಗೂ ಹಾಸಿಗೆಗಳು ಇವೆ’ ಎಂದರು.


3ನೇ ಅಲೆಗೆ ಸಿದ್ಧತೆ ಏನು: ಹೈಕೋರ್ಟ್

ಸಂಭವನೀಯ ಕೋವಿಡ್ ಮೂರನೇ ಅಲೆ ಎದುರಿಸಲು ಮಾಡಿಕೊಂಡಿರುವ ಸಿದ್ಧತೆ ಏನು ಎಂದು ಪ್ರಶ್ನಿಸಿರುವ ಕರ್ನಾಟಕ ಹೈಕೋರ್ಟ್, ಪೂರ್ವ ತಯಾರಿ ಕುರಿತು ಎರಡು ವಾರಗಳಲ್ಲಿ ಮುನ್ನೋಟದ ವರದಿ ಸಲ್ಲಿಸಬೇಕು ಎಂದು ತಿಳಿಸಿತು.

‘ಹಾಸಿಗೆ, ಆಮ್ಲಜನಕ, ಔಷಧ, ವೈದ್ಯಕೀಯ ಸಿಬ್ಬಂದಿ ಅಗತ್ಯದ ಬಗ್ಗೆ ಸಿದ್ಧತೆ ಮಾಡಿಕೊಳ್ಳಲು ಇದು ಸಕಾಲ. ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು’ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಹೇಳಿತು.



ದೇಶದಲ್ಲಿ ಕೋವಿಡ್‌ನ ಮೊದಲ ಮತ್ತು ಎರಡನೇ ಅಲೆ



ಮಾಹಿತಿ: ಜಯಸಿಂಹ ಆರ್. ಆಧಾರ: ಕೋವಿಡ್19 ಇಂಡಿಯಾ. ಒಆರ್‌ಜಿ | ಪ್ರಜಾವಾಣಿ ಗ್ರಾಫಿಕ್ಸ್



ಮಕ್ಕಳಿಗೆ ಲಸಿಕೆ ದೊರೆಯದಿದ್ದಲ್ಲಿ ಅವರು ದುರ್ಬಲ ವರ್ಗಕ್ಕೆ ಸೇರುತ್ತಾರೆ. ಪರಿಣಾಮ ಮೂರನೇ ಅಲೆಯಲ್ಲಿ ವೈರಾಣು ಅವರ ಮೇಲೆ ದಾಳಿ ನಡೆಸುವ ಸಾಧ್ಯತೆಯಿದೆ

ಡಾ.ಸಿ.ಎನ್. ಮಂಜುನಾಥ್
ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ



ಯಾವುದೇ ಸಾಂಕ್ರಾಮಿಕ ಕಾಯಿಲೆ ಉತ್ತುಂಗಕ್ಕೆ ಹೋಗಿ, ಕಡಿಮೆಯಾಗುತ್ತದೆ. ಅಕ್ಟೋಬರ್ ಬಳಿಕ ಮೂರನೇ ಅಲೆ ರಾಜ್ಯದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ

ಡಾ. ಶಶಿಭೂಷಣ್ ಬಿ.ಎಲ್., ವಿಕ್ಟೋರಿಯಾ ಆಸ್ಪತ್ರೆಯ ಶ್ವಾಸಕೋಶ ಔಷಧ ವಿಭಾಗದ ಮುಖ್ಯಸ್ಥ



ಜಪಾನ್ ಸೇರಿದಂತೆ ಕೆಲ ದೇಶಗಳಲ್ಲಿ ನಾಲ್ಕನೇ ಅಲೆ ಕಾಣಿಸಿಕೊಂಡಿದೆ. ಹಾಗಾಗಿ, ಇಲ್ಲಿಯೂ ಮೂರನೇ ಅಲೆ ಬರುವುದು ಖಚಿತ. ಚಳಿಗಾಲದಲ್ಲಿ ಕಾಣಿಸಿಕೊಳ್ಳಲಿದೆ

ಡಾ. ಗಿರಿಧರ್ ಬಾಬು
ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಮೂರನೇ ಅಲೆ ನಿರ್ವಹಣೆಗೆ ತಜ್ಞರ ಸಲಹೆಗಳು

- ಆಸ್ಪತ್ರೆಗಳಲ್ಲಿ ಐಸಿಯು ಹಾಸಿಗೆಗಳು ಹೆಚ್ಚಾಗಲಿ
- ಸ್ಥಳೀಯ ಮಟ್ಟದಲ್ಲಿ ಆಮ್ಲಜನಕ ಉತ್ಪಾದನೆಗೆ ವ್ಯವಸ್ಥೆ ಮಾಡಿ
- ಆಸ್ಪತ್ರೆಗಳು ಆಮ್ಲಜನಕ ಜನರೇಟರ್ ಅಳವಡಿಸಿಕೊಳ್ಳಬೇಕು
- ಮಕ್ಕಳ ಐಸಿಯುಗಳನ್ನು ಬಲಪಡಿಸಬೇಕು
- ವೈದ್ಯಕೀಯ ಸಿಬ್ಬಂದಿ ನೇಮಕ–ತರಬೇತಿ
- ಈಗಿರುವ ವೆಂಟಿಲೇಟರ್–ಆಮ್ಲಜನಕ ಸಿಲಿಂಡರ್‌ಗಳ ನಿರ್ವಹಣೆ
- ಲಾಕ್‌ಡೌನ್ ಜೊತೆಗೇ ಲಸಿಕಾ ಅಭಿಯಾನ
- ಲಸಿಕೆಗೆ ‘ಹಕ್ಕುಸ್ವಾಮ್ಯ ವಿನಾಯಿತಿ’ ನೀಡಬೇಕು
- ಲಾಕ್‌ಡೌನ್ ನಂತರವೂ ಅಂತರ ಕಾಪಾಡಲು ವ್ಯವಸ್ಥೆ
- ಮೈದಾನ, ಕಲ್ಯಾಣಮಂಟಪಗಳಲ್ಲಿ ಒಪಿಡಿ ನಿರ್ಮಾಣ

ಮೊದಲು ಎರಡನೇ ಅಲೆ ನಿಭಾಯಿಸಿ



ಎರಡನೇ ಅಲೆಯನ್ನೇ ಸರ್ಕಾರ ಸರಿಯಾಗಿ ನಿಭಾಯಿಸುತ್ತಿಲ್ಲ. ಇನ್ನು ಮೂರನೇ ಅಲೆಯ ಬಗ್ಗೆ ಚಿಂತಿಸುವುದು ಹಾಸ್ಯಾಸ್ಪದ.ಎರಡನೇ ಅಲೆ ತಡೆಗೆ ಮುಂದಿನ 48 ಗಂಟೆಗಳಲ್ಲಿ ಏನು ಮಾಡುತ್ತೇವೆ ಎಂಬುದನ್ನಾದರೂ ಸರ್ಕಾರ ನಿರ್ದಿಷ್ಟವಾಗಿ ಹೇಳಬೇಕು. ಈವರೆಗೆ ವೈಜ್ಞಾನಿಕ ಚಿಕಿತ್ಸಾ ಮಾರ್ಗಸೂಚಿಯನ್ನೂ (ಟ್ರೀಟ್‌ಮೆಂಟ್ ಪ್ರೊಟೋಕಾಲ್) ಸರ್ಕಾರ ಹೊರಡಿಸಿಲ್ಲ.

ಈಗಿನ ಅವ್ಯವಸ್ಥೆಯನ್ನು ಮುಚ್ಚಿ ಹಾಕಿ, ಮೂರನೇ ಅಲೆಯ ಬಗ್ಗೆ ಮಾತನಾಡುವ ಮೂಲಕ ತಮ್ಮದು ದೂರದೃಷ್ಟಿಯ ಸರ್ಕಾರ ಎಂದು ತೋರಿಸಿಕೊಳ್ಳುವ ಯತ್ನ ಇದು.ರೆಮ್‌ಡಿಸಿವಿರ್ ಬಳಕೆ ಮಾಡಬಾರದು ಎಂದು ಮುಖ್ಯಮಂತ್ರಿ ಯಡಿಯೂರಪ್ಪನವರು ಪತ್ರಿಕೆಗಳಲ್ಲಿ ಅರ್ಧಪುಟ ಜಾಹೀರಾತು ಕೊಡುತ್ತಾರೆ. ಅದೇ ಸರ್ಕಾರದ ಪ್ರತಿನಿಧಿಗಳು, ರೆಮ್‌ಡಿಸಿವಿರ್ ಯಾಕೆ ಪೂರೈಕೆ ಮಾಡುತ್ತಿಲ್ಲ ಎಂದು ಕಂಪನಿಗಳಿಗೆ ಪತ್ರ ಬರೆಯಲಾಗಿದೆ ಎಂದು ಹೇಳುತ್ತಾರೆ. ಸರ್ಕಾರ ಸಂಪೂರ್ಣ ಗೊಂದಲದಲ್ಲಿದೆ.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ಮಂಗಳೂರು

ಲಸಿಕೆಯತ್ತ ಗಮನ ಹರಿಸಿ




ನಗರ ಪ್ರದೇಶಗಳಲ್ಲಿ ತುಂಬಾ ಜನರಿಗೆ ಈಗಾಗಲೇ ಕೋವಿಡ್ ಬಂದು ಹೋಗಿದೆ. ಮೂರನೇ ಅಲೆಯು ಗ್ರಾಮೀಣ ಹಾಗೂ ಗುಡ್ಡಗಾಡು ಪ್ರದೇಶಕ್ಕೆ ಹರಡುವ ಸಾಧ್ಯತೆ ಇದೆ. ಈ ಪ್ರದೇಶಗಳಿಗೆ ಸೋಂಕು ಹರಡದಂತೆ ಮುನ್ನೆಚ್ಚರಿಕೆ ವಹಿಸಬೇಕು. ಮುಂದೆ ಲಾಕ್‌ಡೌನ್ ಮಾಡಿದರೂ, ಅದು ಲಸಿಕೆ ಸಹಿತ ಲಾಕ್‌ಡೌನ್ ಆಗಿರಬೇಕು. ಹೆಚ್ಚು ಹೆಚ್ಚು ಜನರು ಲಸಿಕೆ ಹಾಕಿಸಿಕೊಂಡರೆ ಮೂರನೇ ಅಲೆಯನ್ನು ತಡೆಗಟ್ಟಬಹುದು.

ಕೋವಿಡ್ ಲಸಿಕೆಗೆ ಹಕ್ಕುಸ್ವಾಮ್ಯ ವಿನಾಯಿತಿ ನೀಡಬೇಕು. ಅಂದರೆ, ಲಸಿಕೆ ಉತ್ಪಾದನಾ ತಂತ್ರಜ್ಞಾನ ಹೊಂದಿರುವ ಕಂಪನಿಯಿಂದ ಹಕ್ಕುಸ್ವಾಮ್ಯವನ್ನು ಪಡೆದು, ಅದನ್ನು ಸಾರ್ವತ್ರೀಕರಣಗೊಳಿಸಬೇಕು. ಎಲ್ಲ ಕಂಪನಿಗಳು ಲಸಿಕೆ ಉತ್ಪಾದಿಸುವಂತಾದರೆ ಎಲ್ಲರಿಗೂ ಸುಲಭವಾಗಿ ಸಿಗುತ್ತದೆ. ಎಲ್ಲರೂ ಲಸಿಕೆ ಹಾಕಿಸಿಕೊಳ್ಳಲು ಸಾಧ್ಯವಾಗುತ್ತದೆ. ಮೂರನೇ ಅಲೆ ಬಗ್ಗೆ ಸಮುದಾಯ ಆರೋಗ್ಯ ವಿಭಾಗದ ವೈದ್ಯರುಗಳು, ಸಂಖ್ಯಾಶಾಸ್ತ್ರಜ್ಞರು ದತ್ತಾಂಶ ಸಹಿತ ಅಧ್ಯಯನ ನಡೆಸಬೇಕು. ಅವರು ನಿಖರವಾದ ವರದಿ ನೀಡಬೇಕು.

ಡಾ.ವೈ.ಸಿ. ಯೋಗಾನಂದ ರೆಡ್ಡಿ, ಬಳ್ಳಾರಿ

ತಡೆಗೆ ಆದ್ಯತೆ ಇರಲಿ



ಕೋವಿಡ್–19ರ ಮೂರನೇ ಅಲೆ ತಡೆಗೆ ನಾವು ಹಣ ಖರ್ಚು ಮಾಡದಿದ್ದರೆ, ಚಿಕಿತ್ಸೆಗೆ ಅದರ ನಾಲ್ಕು ಪಟ್ಟು ವ್ಯಯಿಸಬೇಕಾಗುತ್ತದೆ. ವೈದ್ಯಕೀಯ ಸಿಬ್ಬಂದಿಯನ್ನು ತಕ್ಷಣ ಸನ್ನದ್ಧಗೊಳಿಸಬೇಕು. ವೈದ್ಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ, ಸಹಾಯಕ ಸಿಬ್ಬಂದಿ ಇಲ್ಲ.

ಬಿಎಸ್‌ಸಿಯಲ್ಲಿ ನರ್ಸಿಂಗ್ ಮಾಡಿರುವ ಅನೇಕರು ಇದ್ದಾರೆ. ಅವರಿಗೆ ದುಪ್ಪಟ್ಟು ವೇತನ ನೀಡಿ ನೇಮಕ ಮಾಡಿಕೊಳ್ಳಬೇಕು. ಮುಂದೆ ಅನುಕೂಲವಾಗುವ ರೀತಿಯಲ್ಲಿ ನಿರ್ದಿಷ್ಟ ಪ್ರಮಾಣ ಪತ್ರವನ್ನು ಅವರಿಗೆ ನೀಡಬೇಕು ಮತ್ತು ಈ ಸಿಬ್ಬಂದಿಗೆ ಸೂಕ್ತ ತರಬೇತಿಯನ್ನೂ ನೀಡಬೇಕು.

ವೆಂಟಿಲೇಟರ್ ನಿರ್ವಹಿಸುವುದಕ್ಕೆ ಎಷ್ಟೋ ಜನರಿಗೆ ಬರುವುದಿಲ್ಲ. ಆಪರೇಷನ್ ಥಿಯೇಟರ್ ಕಾರ್ಯನಿರ್ವಹಣೆಯೂ ತಿಳಿದಿರುವುದಿಲ್ಲ. ಇಂಥವರಿಗೆ ತರಬೇತಿ ಅವಶ್ಯವಿದೆ. ‘ಸ್ಟೇ ಹೋಂ, ಸ್ಟೇ ಸೇಫ್’ ಎನ್ನುವುದಕ್ಕಿಂತ ‘ಸ್ಟೇ ಆ್ಯಕ್ಟೀವ್, ಬಿ ಸೇಫ್’ ಎಂಬುದು ಮುಖ್ಯವಾಗಬೇಕು. ಅಂದರೆ, ಎಲ್ಲರೂ ಮನೆಯಲ್ಲಿಯೆ ಇದ್ದರೂ ಜೀವನ ನಡೆಯುವುದಿಲ್ಲ. ದುಡಿಯಲು ಹೊರಗೆ ಹೋಗಬೇಕಾಗುತ್ತದೆ. ದಿನಸಿ, ಆಹಾರ ಹಂಚಿದರೂ ಅಲ್ಲಿ ಅಂತರ ಕಾಪಾಡಿಕೊಳ್ಳಲು ಆಗುವುದಿಲ್ಲ. ಬಿಪಿಎಲ್ ಕುಟುಂಬದವರ ಬ್ಯಾಂಕ್ ಖಾತೆಗೆ ಸರ್ಕಾರವೇ ಇಂತಿಷ್ಟು ಹಣ ಹಾಕಬೇಕು.

ಡಾ.ವೀರಗಂಗಾಧರ ಬಿ. ನಿಟಾಲಿ, ಹುಬ್ಬಳ್ಳಿ

ಐಸಿಯು ಹಾಸಿಗೆ ಇರಲಿ



ಮೂರನೇ ಅಲೆಗೆ ಆಸ್ಪತ್ರೆಗಳನ್ನು ಸಜ್ಜುಗೊಳಿಸಬೇಕು. ಸಾಮಾನ್ಯ ಹಾಸಿಗೆ ಬದಲು ಐಸಿಯು ಹಾಸಿಗೆಗಳ ಹೆಚ್ಚಳಕ್ಕೆ ಗಮನ ನೀಡಬೇಕು. ಕರ್ಫ್ಯೂ ಸಡಿಲಿಕೆ ನಂತರವೂ ಸಾರ್ವಜನಿಕ ಸ್ಥಳಗಳಲ್ಲಿ ಅಂತರ ನಿಯಮ ಪಾಲನೆ ಕಡ್ಡಾಯವಾಗಿರಬೇಕು.

ಜ್ವರ, ಕೆಮ್ಮಿನಂತಹ ಸೌಮ್ಯ ಲಕ್ಷಣಗಳನ್ನು ಹೊಂದಿರುವ ಸೋಂಕಿತರ ಚಿಕಿತ್ಸೆಗೆ ಆಟದ ಮೈದಾನ, ಕಲ್ಯಾಣಮಂಟಪಗಳಲ್ಲಿ ವ್ಯವಸ್ಥೆ ಮಾಡಬೇಕು. ಗಂಭೀರ ಸ್ವರೂಪದ ಲಕ್ಷಣ ಹೊಂದಿರುವವರ ಚಿಕಿತ್ಸೆಗೆ ಆದ್ಯತೆ ನೀಡಬೇಕು. ಈಗಾಗಲೇ ಬಹುತೇಕರಲ್ಲಿ ಕೋವಿಡ್ ವಿರುದ್ಧ ರೋಗನಿರೋಧಕ ಶಕ್ತಿ ಹೆಚ್ಚುತ್ತಿದೆ. ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿಲ್ಲ. ಮಧ್ಯವಯಸ್ಕರು ಮತ್ತು ಹಿರಿಯರ ನಾಗರಿಕರ ಮೇಲೆಯೇ ಮೂರನೇ ಅಲೆಯೂ ಪರಿಣಾಮ ಬೀರಬಹುದು.

ಡಾ. ಅನ್ಸರ್ ಅಹ್ಮದ್, ವೈದ್ಯಕೀಯ ಅಧೀಕ್ಷಕ, ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಬೆಂಗಳೂರು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

‘ಭಾರತ್ ಬಯೊಟೆಕ್‌ನ ಕೋವಿಡ್ ಲಸಿಕೆ ಕೋವ್ಯಾಕ್ಸಿನ್ ಅನ್ನು 12 ವರ್ಷಕ್ಕಿಂತ ದೊಡ್ಡ ಮಕ್ಕಳಿಗೆ ನೀಡಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆ. ಮಕ್ಕಳಲ್ಲಿ ಈ ಲಸಿಕೆ ಉತ್ತಮವಾಗಿ ಕೆಲಸ ಮಾಡುತ್ತದೆ. ಈ ಲಸಿಕೆ ಪಡೆದುಕೊಳ್ಳುವುದರಿಂದ ಮಕ್ಕಳಲ್ಲಿ ಯಾವುದೇ ತೊಂದರೆ ಆಗುವುದಿಲ್ಲ. ಮಕ್ಕಳಿಗೂ ನೀಡಬಹುದಾದ ಕೋವಿಡ್ ಲಸಿಕೆಯನ್ನು ಅಭಿವೃದ್ಧಿಪಡಿಸಿದ ಏಕೈಕ ರಾಷ್ಟ್ರ ಭಾರತ’ ಎಂಬ ವಿವರ ಇರುವ ಟ್ವೀಟ್ ಮತ್ತು ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ.



ಇದು ಸುಳ್ಳು ಸುದ್ದಿ. ಇದನ್ನು ಯಾರೂ ನಂಬಬೇಡಿ ಎಂದು ಪಿಐಬಿ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ಹೇಳಿದೆ. ಭಾರತದಲ್ಲಿ ಯಾವ ಲಸಿಕೆಯನ್ನೂ 12-18 ವರ್ಷದ ಮಕ್ಕಳಿಗೆ ಹಾಕಲು ಅನುಮತಿ ನೀಡಿಲ್ಲ. ಭಾರತ್ ಬಯೊಟೆಕ್‌ನ ಕೋವ್ಯಾಕ್ಸಿನ್ ಲಸಿಕೆಯನ್ನು 12 ವರ್ಷ ಮೇಲ್ಪಟ್ಟ ಮಕ್ಕಳಿಗೆ ನೀಡಲು ಅನುಮತಿ ನೀಡಿಲ್ಲ. ಹೀಗಾಗಿ 12 ವರ್ಷ ಮೇಲ್ಪಟ್ಟ ಮಕ್ಕಳಿಗೆ ಕೋವಿಡ್ ಲಸಿಕೆ ಕೊಡಿಸಲು ನೋಂದಣಿಗೆ ಪ್ರಯತ್ನಿಸಬಾರದು ಎಂದು ಪಿಐಬಿ ಹೇಳಿದೆ.

ಗುಂಡಣ್ಣ



ದಿನ ಭವಿಷ್ಯ

ಗುರುವಾರ ಮೇ 13, 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ದ್ವಿತೀಯ ಗಂ. 52-25 (ರಾ. 3-00) ಗುರುವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 53-51 (ರಾ. 3-34) ಅತಿಗಂಡ ನಾಮ ಯೋಗ ಗಂ 42-49 ಬಾಲವ ಕರಣ ಗಂ. 19-58 ವಿಷ ಗಂ. 31-39 ಅಮೃತ ಗಂ. 44-54 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 5-59 ಸೂರ್ಯಾಸ್ತ: 6-33 ಅದೃಷ್ಟ ಸಂಖ್ಯೆ 3, 5

ಮೇಷ: ಕುಲಕಸುಬುದಾರರಿಗೆ ಉತ್ತಮ ವ್ಯವಹಾರದಿಂದಾಗಿ ಲಾಭ. ಪಾರಂಪರಿಕವಾಗಿ ನಡೆದು ಬಂದ ವ್ಯವಹಾರವನ್ನು ಕೈ ಬಿಡುವುದು ಬೇಡ. ಚಲನಚಿತ್ರರಂಗದವರಿಗೆ ಉತ್ತಮ ಅವಕಾಶ.

ವೃಷಭ: ಕೈಗಾರಿಕೋದ್ಯಮಿಗಳಿಗೆ ಪ್ರಗತಿ ಸಾಧ್ಯತೆ. ಹೊಸ ಉದ್ಯಮದಲ್ಲಿ ಯಶಸ್ಸು. ಮನೆಯಲ್ಲಿ ಬಹಳ ದಿನಗಳ ನಂತರ ನಗುವನ್ನು ಕಾಣಲಿದ್ದೀರಿ. ಬಂಧುಗಳ ಆಗಮನದ ಜೊತೆಗೆ ವ್ಯವಹಾರ ಸಂಬಂಧಗಳ ಬಗ್ಗೆ ಚರ್ಚೆ.

ಮಿಥುನ: ಶೀಘ್ರದಲ್ಲಿ ಉದ್ಯೋಗದಲ್ಲಿ ಉನ್ನತಿ ಸಾಧಿಸುವಿರಿ. ನಿಮ್ಮ ಪ್ರಾಮಾಣಿಕತೆಯ ಫಲವು ನಿಮ್ಮನ್ನು ಅರಸಿ ಬರಲಿದೆ. ಆರ್ಥಿಕ ಅಭಿವೃದ್ಧಿ. ವೃಥಾ ಆರೋಪಗಳ ಬಗ್ಗೆ ಗಮನ ಬೇಡ.

ಕರ್ಕಾಟಕ: ಉದ್ಯೋಗ ಕ್ಷೇತ್ರದಲ್ಲಿ ಅತಿಯಾದ ಒತ್ತಡ ಕಾಣಿಸಿದರೂ ಸ್ನೇಹಿತರ ಸಹಕಾರದಿಂದ ನಿರಾಳ. ಮಕ್ಕಳ ಯೋಗಕ್ಷೇಮದ ಬಗ್ಗೆ ನಿಗಾ ಇರಲಿ. ವಿದ್ಯಾರ್ಥಿಗಳಿಗೆ ಎದುರಾಗುವ ಸಂಕಷ್ಟಗಳು ಗೆಲುವಿನ ಸೋಪಾನವಾಗಲಿದೆ.

ಸಿಂಹ: ಬಹುದಿನಗಳ ದುಡಿಮೆಯ ನಡುವೆ ವಿಶ್ರಾಂತಿಯ ಅಗತ್ಯತೆ. ಒತ್ತಡದಿಂದ ಹೊರಬರುವ ಸಾಧ್ಯತೆ. ನೌಕಾಯಾನಿಗಳಿಗೆ ಒಳ್ಳೆಯ ಸಮಯ. ದೇವತಾ ದರ್ಶನ ಭಾಗ್ಯ.

ಕನ್ಯಾ: ಕಠಿಣ ಪರಿಶ್ರಮದ ಫಲದಿಂದ ಉತ್ತಮ ಸಫಲತೆಯನ್ನು ಪಡೆಯಲಿದ್ದೀರಿ. ಯೋಜನೆಯನ್ನು ರೂಪಿಸುವ ಮುನ್ನ ಪುನಃ ಅವಲೋಕನ ಅಗತ್ಯ. ಸಾಮಾಜಿಕ ಕ್ಷೇತ್ರದಲ್ಲಿ ಹಿನ್ನಡೆ ಸಾಧ್ಯತೆ.

ತುಲಾ: ನಿಮ್ಮ ಕೆಲಸವನ್ನು ಬೇರೆಯವರೊಂದಿಗೆ ಮಾಡುವುದು ಉತ್ತಮ. ಆರ್ಥಿಕ ಪ್ರಗತಿಯತ್ತ ದಾಪುಗಾಲು. ಬೇರೆಯವರ ಮಾತುಗಳ ವಿಚಾರದಲ್ಲಿ ತಲೆ ಕಡಿಸಿಕೊಳ್ಳದಿರಿ. ಉನ್ನತ ವಿಚಾರಗಳತ್ತ ಒಲವು ತೋರಲಿದ್ದೀರಿ.

ವೃಶ್ಚಿಕ: ಆದಾಯದ ಹೊಸ ದಾರಿ ಗೋಚರಿಸಲಿದೆ. ಹಾಗಂತ ಅತಿಯಾದ ಖರ್ಚನ್ನು ನಿಯಂತ್ರಣದಲ್ಲಿಡುವುದು ಒಳ್ಳೆಯದು. ಯಂತ್ರಾಗಾರದಲ್ಲಿ ಅಗ್ನಿ ಭಯ ಸಾಧ್ಯತೆ. ದೇವತಾ ಆರಾಧನೆಯಿಂದ ನೆಮ್ಮದಿ.

ಧನು: ಸಾಂಸಾರಿಕ ನೆಮ್ಮದಿಯೊಂದಿಗೆ ಆರ್ಥಿಕ ಸಮಸ್ಯೆ ಪರಿಹಾರವಾಗಲಿದೆ. ಮಾನಸಿಕ ನೋವನ್ನು ಇತರರಲ್ಲಿ ಹಂಚಿಕೊಳ್ಳಿ. ಸಾಮಾಜಿಕ ಕಾರ್ಯಗಳಲ್ಲಿ ಭಾಗಿಯಾಗುವಿರಿ. ಅನ್ಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ನೆರವಾಗುವ ಯೋಗ.

ಮಕರ: ಪರಿಶ್ರಮಕ್ಕೆ ಯೋಗ್ಯವಾದ ಪ್ರತಿಫಲ ದೊರೆತು ಉತ್ತಮ ಅವಕಾಶ ನಿಮ್ಮದಾಗಲಿದೆ. ರಾಜಕೀಯ ಮುಖಂಡರುಗಳಿಗೆ ಮುಖಭಂಗ ಸಾಧ್ಯತೆ. ಪತ್ರಿಕೋದ್ಯಮದವರಿಗೆ ವಿಫಲತೆ ಕಂಡುಬರುತ್ತಿದೆ.

ಕುಂಭ: ಯಾವುದೋ ಧನಾಗಮನದ ನಿರೀಕ್ಷೆಯಲ್ಲಿದ್ದ ಮೂಲದಿಂದ ಹಣಕಾಸಿನ ಅನುಕೂಲ ದೊರೆಯುವ ಸಾಧ್ಯತೆ. ಆತಂಕದ ಕ್ಷಣಗಳು ದೂರವಾಗುವ ಸಾಧ್ಯತೆ ಗೋಚರವಾಗುತ್ತಿದೆ. ಬಂಧುಗಳ ಸಹಾಯ ನಿಮಗಿದೆ.

ಮೀನ: ಹಣಕಾಸಿನ ಅನುಕೂಲದ ನಿರೀಕ್ಷೆಯಲ್ಲಿರುವ ನಿಮಗೆ ಶೀಘ್ರಗತಿಯಲ್ಲಿ ಕೈಗೂಡಲಿದೆ. ಬಂಧುಗಳಿಂದ ಸಹಕಾರ. ಮಕ್ಕಳ ಪ್ರಗತಿಯಿಂದ ನೆಮ್ಮದಿ. ಹೆಂಡತಿಗೆ ಅನಾರೋಗ್ಯದ ಸಾಧ್ಯತೆ. ದೂರಪ್ರಯಾಣ ತರವಲ್ಲ.

ನಿಮ್ಮ ಜನ್ಮದಿನ 13-ಮೇ: ಈ ದಿನಅತ್ಯಂತ ಶುಭಕರ. ಎಂಜಿನಿಯರಿಂಗ್ ವೃತ್ತಿಯವರಿಗೆ ವಿಶೇಷ ಸಹಕಾರ ದೊರೆಯಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ದೊರಕಲಿವೆ. ಸರ್ಕಾರಿ ನೌಕರರಿಗೆ ಹಿರಿಯ ಅಧಿಕಾರಿಗಳ ಕಿರುಕುಳ ಸಂಭವ. ಮಹಿಳೆಯರಿಗೆ ಆತ್ಮೀಯರೆನಿಸಿದವರಿಂದಲೇ ಕಿರಿಕಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ



ವೈರಿಯ ಬುದ್ಧಿವಂತಿಕೆಗೆ ಮೆಚ್ಚುಗೆ

ಬ್ರಹ್ಮದತ್ತ ರಾಜನಿಗೆ ದಿಕ್ಕೇ ತೋಚದಂತಾಯಿತು. ತನ್ನ ದೇಶಕ್ಕೆ ಬಂದು, ತನ್ನ ರಾಜಧಾನಿಯಲ್ಲೇ, ತನ್ನ ಅತಿಥಿಯಾಗಿದ್ದುಕೊಂಡೇ, ಈ ಅಸಾಧ್ಯ ಕೆಲಸ ಮಾಡಿದ ಮಹೋಷಧಕುಮಾರನ ಮೇಲೆ ಅವನಿಗೆ ಅಸಾಧ್ಯ ಕೋಪ ಬಂತು. ಆದರೆ ಏನೂ ಮಾಡುವ ಹಾಗಿಲ್ಲ, ಯಾಕೆಂದರೆ ಇವರ ತಾಯಿ, ಹೆಂಡತಿ, ಮಗ, ಮಗಳು ವೈರಿರಾಜನಾದ ವಿದೇಹನ ಅರಮನೆಯಲ್ಲಿದ್ದಾರೆ. ಬ್ರಹ್ಮದತ್ತನಿಗೆ ಖಾತ್ರಿಯಾಯಿತು. ತನ್ನ ಪರಿವಾರದವರು ಮರಳಿ ಸುರಕ್ಷಿತವಾಗಿ ಬರಬೇಕೆಂದಿದ್ದರೆ, ಅದು ಕೇವಲ ಮಹೋಷಧಕುಮಾರನಿಂದ ಮಾತ್ರ ಸಾಧ್ಯ. ಅವನ ಮುಖದ ಮೇಲಿನ ಚಿಂತೆಯನ್ನು ಕಂಡು ಕುಮಾರ ಹೇಳಿದ, ‘ಮಹಾರಾಜ, ಚಿಂತಿಸಬೇಡಿ. ನಿಮ್ಮ ಪರಿವಾರದ ಯಾರಿಗೂ ಯಾವ ತೊಂದರೆಯೂ ಆಗುವುದಿಲ್ಲ. ನಾನು ಮಿಥಿಲೆಯನ್ನು ಮುಟ್ಟಿದ ತಕ್ಷಣ ಅವರನ್ನು ಗೌರವದಿಂದ ಕಳುಹಿಸಿಕೊಡುತ್ತೇನೆ’.

ರಾಜ ಆಶ್ಚರ್ಯದಿಂದ ಕೇಳಿದ, ‘ಪಂಡಿತ, ನನಗೊಂದು ಪ್ರಶ್ನೆ. ನೀನು ನಮ್ಮ ನಗರದಲ್ಲಿಯೇ ಇದ್ದೆ. ನನ್ನ ಇಷ್ಟೊಂದು ಸೈನ್ಯ, ಅಷ್ಟು ಗೂಢಚಾರರು ಇಡೀ ನಗರವನ್ನು ಕಾಯುತ್ತಿದ್ದರೂ ನೀನು ಹೇಗೆ ನನ್ನ ಅರಮನೆಯ ಜನರನ್ನು ಯಾರಿಗೂ ತಿಳಿಯದಂತೆ ಅಪಹರಿಸಿದೆ?’. ಮಹೋಷಧಕುಮಾರ ಹೇಳಿದ, ‘ಮಹಾರಾಜ, ಕೆಲವರು ನನ್ನ ಹತ್ತಿರ ಮಂತ್ರ ಶಕ್ತಿ ಇದೆ ಎನ್ನುತ್ತಾರೆ, ಕೆಲವರು ದಿವ್ಯಮಾಯೆ ಇದೆ ಎಂದು ಭಾವಿಸುತ್ತಾರೆ. ನಿಜ ಹೇಳಲೇ? ಇವು ಯಾವುವೂ ನನ್ನ ಕಡೆಗೆ ಇಲ್ಲ, ಅವು ಯಾರ ಹತ್ತಿರವೂ ಇರಲಾರವು. ಇರುವುದೊಂದೇ ಬುದ್ಧಿವಂತಿಕೆ. ಬುದ್ಧಿವಂತಿಕೆ ಅರ್ಥವಾಗದಿದ್ದರೆ ಅದನ್ನು ಮಾಯೆ ಅಥವಾ ಮಂತ್ರಶಕ್ತಿ ಎಂದು ತಿಳಿಯುತ್ತಾರೆ. ನಾನು ನಿಮ್ಮ ಪರಿವಾರದವರನ್ನೆಲ್ಲ ಕರೆದುಕೊಂಡು ಹೋದದ್ದು ಒಂದು ಸುರಂಗ ಮಾರ್ಗವಾಗಿ’. ರಾಜನಿಗೆ ಆಶ್ಚರ್ಯ! ‘ಅಂಥ ಸುರಂಗ ನಮ್ಮ ನಗರದಲ್ಲಿ ಎಲ್ಲಿದೆ? ಅದಿದ್ದರೂ ಅರಮನೆಯಿಂದ ಜನ ಸುರಂಗಕ್ಕೆ, ನಮ್ಮ ಅರಮನೆಯ ಕಾವಲುಗಾರನಿಗೆ ತಿಳಿಯದಂತೆ ಹೇಗೆ ಹೋದರು?’ ಪ್ರಶ್ನಿಸಿದ ರಾಜ.

ಮಹೋಷಧಕುಮಾರ ರಾಜನನ್ನು ಕರೆದುಕೊಂಡು ಅರಮನೆಗೆ ಬಂದ. ಅರಮನೆಯ ಮಧ್ಯಭಾಗದಲ್ಲಿ, ಯಾವ ಕಾವಲುಗಾರರೂ ಬರದಂಥ ಸ್ಥಳದಲ್ಲಿ, ಗೋಡೆಯ ಮೇಲೊಂದು ದೊಡ್ಡ ಸುಂದರವಾದ ವರ್ಣಚಿತ್ರವಿತ್ತು. ಅದರ ಹಿಂದೆ ಮೆಟ್ಟಿಲುಗಳು! ಕುಮಾರ ರಾಜನಿಗೆ ಹೇಳಿದ, ‘ಮಹಾರಾಜ, ಈ ಮೆಟ್ಟಿಲುಗಳನ್ನು ಇಳಿದು ಕೆಳಗೆ ಬಂದರೆ ನಿನಗೊಂದು ಸುರಂಗ ಕಾಣುತ್ತದೆ. ಈ ಸುರಂಗವನ್ನು ನೋಡು. ಎರಡು ಆನೆಯಷ್ಟು ಎತ್ತರದ, ಹತ್ತು ಆನೆಗಳು ಒಂದೇ ಸಲ ಸಾಗಿ ಹೋಗುವಷ್ಟು ವಿಸ್ತಾರವಾದ, ಬೆಳಕಿನಿಂದ ಬೆಳಗುವ ಸುರಂಗದ ವೈಭವವನ್ನು ನೋಡು. ಗೋಡೆಯ ಮೇಲಿನ ವರ್ಣಚಿತ್ರಗಳು, ಫಳಫಳ ಹೊಳೆಯುವ ನೆಲಗಟ್ಟು ಇವುಗಳನ್ನು ನೋಡಿದರೆ ಇದು ಸುರಂಗವೆಂದು ತೋರುವುದೇ ಇಲ್ಲ. ಅದೊಂದು ರಾಜಮಾರ್ಗವೆಂದೇ ಭಾಸವಾಗುತ್ತದೆ. ಈ ಸುರಂಗ ನಮ್ಮ ಅರಮನೆಯಿಂದ ನಿಮ್ಮ ಅರಮನೆಯವರೆಗೂ ಇದ್ದುದರಿಂದ ಅದು ಸುರಂಗವೆಂದು ಅರಮನೆಯವರಿಗೆ ತಿಳಿಯಲೇ ಇಲ್ಲ’. ದೇವನಗರದಂತೆ ಹೊಳೆಯುತ್ತಿದ್ದ ಅದನ್ನು ಕಂಡು, ಮಹೋಷಧಕುಮಾರನ ಕಾರ್ಯದಕ್ಷತೆಗೆ ಬ್ರಹ್ಮದತ್ತ ರಾಜ ಮನಸೋತ. ತಾನು ಸೋತಿದ್ದರೂ, ವೈರಿಯ ಬುದ್ಧಿಶಕ್ತಿಯನ್ನು ಹೊಗಳಿದ. ಅವನ ತಲೆಯಲ್ಲಿ ಹೊಸ ವಿಚಾರವೊಂದು ಹೊಳೆಯಿತು.

ಪದಬಂಧ 4595

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಪದವಿಟ್ಟರೆ ಮೋಕ್ಷವೇ ಸಿಗುವುದು (5)
4.ದೃಷ್ಟಿಗೆ ದೂರವಾಗಿರುವುದು (3)
5.ದಯೆಯಿಲ್ಲದ ಮಾತು (3)
6.ಸಲ್ಲಾಪದ ಮಾತುಕತೆ (3)
10.ಯೋಗವಿಟ್ಟುಕೊಂಡು ಮಾಡಿದ ಹಂಚಿಕೆ (4)
11.ಜೀವಿಸಿದರೂ ಶವದಂತೆ ಇರುವವನು (4)
12.ಒಳ್ಳೆಯ ದಿನವಿದು (3)
14.ಹೆಂಡತಿಯ ಸೋದರಿಯ ಗಂಡ (3)
16.ಅದ್ಭುತವಾಗಿ ಕಾಣುತ್ತಿರುವ ನೀರ ಮೇಲಿನ ಗುಳ್ಳೆ (3)
17.ಬೆಂಗಳೂರಿನಲ್ಲಿರುವ ಭವ್ಯ ಸರ್ಕಾರಿ ಕಟ್ಟಡ (5)

ಮೇಲಿಂದ ಕೆಳಕ್ಕೆ

1.ಹದಿನೈದು ದಿನಗಳ ಅವಧಿ (2)
2.ದ್ವೇಷ ಈ ರೀತಿ ಬಂದಿದೆ (3)
3.ನಾದಿನಿಯ ಇಂಪಾದ ಸ್ವರ (2)
6.ಮಧುರವಾದ ಸ್ವಪ್ನ (5)
7.ಜೊತೆಯಲ್ಲಿ ಬಾಳುವುದು (5)
8.ಯಜ್ಞದಲ್ಲಿ ಅಗ್ನಿಗೆ ಅರ್ಪಿಸುವ ವಸ್ತುಗಳು (3)
9.ಬದಲಾವಣೆಯಲ್ಲಿಯೇ ತೊಂದರೆ ಬಂದಿದೆ (3)
13.ದಿನದೊಳಗೆ ಆಗಮಿಸಿದ ಮಂತ್ರಿ (3)
15.ಕವಿತೆ ರಚನೆಗಾರ (2)
16.ನವಗ್ರಹಗಳಲ್ಲಿ ಇದೊಂದು (2)



4594ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಜನಗಣತಿ 4.ದುಕೂಲ 5.ಲಷ್ಕರು 6.ಹವನ 8.ಪ್ರಶಸ್ತ 9.ವೀಕ್ಷಕ 11.ಕಳಶ 12.ರಮಣ 13.ಲವಣ 15.ಸುಲಭ 17.ದಾಸ್ತಾನು 18.ವಸತಿಗೃಹ
ಮೇಲಿಂದ ಕೆಳಕ್ಕೆ: 1.ಜಲ 2.ಗಡವ 3.ತಿಲ 6.ಹಸ್ತಕೌಶಲ 7.ನವೀಕರಣ 8.ಪ್ರತೀಕ 10.ಕಲ್ಯಾಣ 14.ವರ್ಧಂತಿ 16.ಭವ 17.ದಾಹ

ಸುಡೊಕು 4981

			4		3	9	6	
	9	8						5
			5		8	7	2	1
		9						7
	3	7	1	8	6	4	5	
8						2	1	
6		5		2				4
3						5		2
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4980 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಚಿನ್ನ, ಬೆಳ್ಳಿ ದರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ, ಬೆಳ್ಳಿ ದರ ಬುಧವಾರವೂ ಇಳಿಕೆ ಆಗಿದೆ. 10 ಗ್ರಾಂ ಚಿನ್ನದ ದರ ₹ 229ರಷ್ಟು ಇಳಿಕೆ ಆಗಿ ₹ 47,074ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 717ರಷ್ಟು ಕಡಿಮೆಯಾಗಿ ₹ 70,807ಕ್ಕೆ ತಲುಪಿದೆ.

ಆನ್‌ಲೈನ್‌ನಲ್ಲಿ ಅಲ್ಪ ಪ್ರಮಾಣದ ವ್ಯಾಪಾರದ ನಿರೀಕ್ಷೆ

ಅಕ್ಷಯ ತೃತೀಯಾ: ಮತ್ತೆ ಲಾಕ್‌ಡೌನ್ ಬಿಸಿ

• ವಿಜಯ್ ಜೋಷಿ

ಬೆಂಗಳೂರು: ಲಾಕ್‌ಡೌನ್ ಕಾರಣದಿಂದಾಗಿ ಹಿಂದಿನ ವರ್ಷ 'ಅಕ್ಷಯ ತೃತೀಯಾ' ಸಂದರ್ಭದಲ್ಲಿ ನಿರೀಕ್ಷಿತ ವಹಿವಾಟು ಕಾಣದಿದ್ದ ರಾಜ್ಯದ ಚಿನ್ನಾಭರಣ ವರ್ತಕರಿಗೆ ಈ ಬಾರಿಯೂ ಲಾಕ್‌ಡೌನ್‌ನ ಬಿಸಿ ತಟ್ಟಿದೆ. ಆದರೆ, ಕೆಲವು ವರ್ತಕರು ಅಲ್ಪ ಪ್ರಮಾಣದಲ್ಲಿಯಾದರೂ ವ್ಯಾಪಾರ ನಡೆಸುವ ಇರಾದೆಯೊಂದಿಗೆ ಆನ್‌ಲೈನ್ ಮೊರೆ ಹೋಗಿದ್ದಾರೆ.

'ಕೆಲವು ವರ್ತಕರು ಆನ್‌ಲೈನ್ ಮೂಲಕ ಚಿನ್ನಾಭರಣ, ಚಿನ್ನದ ಗಟ್ಟಿ ಅಥವಾ ಚಿನ್ನದ ನಾಣ್ಯದ ವ್ಯಾಪಾರ ನಡೆಸಲಿದ್ದಾರೆ. ಎಲ್ಲರಿಂದಲೂ ಆನ್‌ಲೈನ್ ಮೂಲಕ ವ್ಯಾಪಾರ ನಡೆಸಲು ಆಗುವುದಿಲ್ಲ' ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ಅಧ್ಯಕ್ಷ ವಿದ್ಯಾಸಾಗರ್ 'ಪ್ರಜಾವಾಣಿ'ಗೆ ತಿಳಿಸಿದರು. ಆನ್‌ಲೈನ್ ಮೂಲಕ ನಡೆಸುವ ಚಿನ್ನಾಭರಣ ವ್ಯಾಪಾರದಲ್ಲಿ, ಆಭರಣಗಳನ್ನು ಗ್ರಾಹಕರಿಗೆ ತಲುಪಿಸುವುದು ತುಸು ಸವಾಲೆನಿಸಬಹುದು ಎಂದು ಅವರು ಹೇಳಿದರು.

'ಕಳೆದ ಬಾರಿಯ ಲಾಕ್‌ಡೌನ್ ಸಮಯದಲ್ಲಿ ಗ್ರಾಹಕರಿಂದ ಬೇಡಿಕೆ ಸ್ವೀಕರಿಸಿದ್ದೆವು. ಲಾಕ್‌ಡೌನ್ ತೆರವಾದ ನಂತರ ಅವರಿಗೆ ಆಭರಣ ತಲುಪಿಸಿದ್ದೆವು' ಎಂದು ಅವರು ತಿಳಿಸಿದರು.

'ಮೂರು–ನಾಲ್ಕು ವರ್ಷಗಳಿಂದ ವಹಿವಾಟು ಮಂದಗತಿಯಲ್ಲಿ ನಡೆದಿತ್ತು. ಕಳೆದ ಬಾರಿ ಲಾಕ್‌ಡೌನ್ ಎದುರಾಯಿತು. ಈ ಬಾರಿಯೂ ಅದೇ ಆಗಿದೆ' ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ನಿಕಟಪೂರ್ವ ಅಧ್ಯಕ್ಷ ವೆಂಕಟೇಶ ಬಾಬು ಹೇಳಿದರು. 'ಆನ್‌ಲೈನ್ ಮೂಲಕ ಕೆಲವರು ಮಾತ್ರ ಚಿನ್ನ ಖರೀದಿ ಮಾಡುತ್ತಾರೆ. ಆಭರಣ ಖರೀದಿಸುವವರಿಗಿಂತಲೂ, ಆನ್‌ಲೈನ್‌ನಲ್ಲಿ ಚಿನ್ನದ ಗಟ್ಟಿ ಅಥವಾ ಚಿನ್ನದ ನಾಣ್ಯ ಖರೀದಿಸುವವರು ಹೆಚ್ಚು' ಎಂದರು.



'ಅಕ್ಷಯ ತೃತೀಯಾ ಬರುತ್ತದೆ ಎಂದು ನಾವು ತಿಂಗಳಿಂದ ತಯಾರಿ ಮಾಡಿಕೊಳ್ಳುತ್ತೇವೆ. ಜನ ಕೂಡ ಈ ಸಂದರ್ಭದಲ್ಲಿ ಚಿನ್ನ ಖರೀದಿಸಬೇಕು ಎಂಬ ಬಯಕೆ ಹೊಂದಿರುತ್ತಾರೆ. ಈ ಬಾರಿ ಲಾಕ್‌ಡೌನ್, ನಿರ್ಬಂಧಗಳು ಎದುರಾಗಬಹುದು ಎಂಬ ಸಂದೇಶವನ್ನು ನಾವು ವರ್ತಕರಿಗೆ ನೀಡಿದ್ದೆವು. ಹಾಗಾಗಿ ಹಲವರು ಆನ್‌ಲೈನ್ ಮೂಲಕ ವಹಿವಾಟು ನಡೆಸಲು ಸಿದ್ಧತೆ ಮಾಡಿಕೊಂಡಿದ್ದಾರೆ. ಶುಕ್ರವಾರ ಆಭರಣ ಬುಕ್ ಮಾಡಿ, ಲಾಕ್‌ಡೌನ್ ತೆರವಾದ ನಂತರ ಬಂದು ಖರೀದಿಸುವವರೂ ಇದ್ದಾರೆ' ಎಂದು ಕರ್ನಾಟಕ ಚಿನ್ನಾಭರಣ ವರ್ತಕರ ಸಂಘದ ಅಧ್ಯಕ್ಷ ಟಿ.ಎ. ಶರವಣ ಹೇಳಿದರು.

ತಮ್ಮಲ್ಲಿಗೆ ಭೇಟಿ ಮಾಡಿ ಆಭರಣ ಖರೀದಿಸಿದ್ದ ಗ್ರಾಹಕರ ವಿವರ ಇರುವ ಚಿನ್ನಾಭರಣ ಮಳಿಗೆಗಳವರು, ಗ್ರಾಹಕರಿಗೆ ನೇರವಾಗಿ ಕರೆ ಮಾಡಿ ವಿವಿಧ ಕೊಡುಗೆಗಳ ಬಗ್ಗೆ ಅವರಿಗೆ ವಿವರ ನೀಡುತ್ತಿದ್ದಾರೆ. ಆ ಮೂಲಕವೂ ಗ್ರಾಹಕರನ್ನು ಸೆಳೆಯುವ ಪ್ರಯತ್ನ ನಡೆದಿದೆ ಎಂದು ವರ್ತಕರೊಬ್ಬರು ತಿಳಿಸಿದರು.

ಆತ್ಮಶುದ್ಧಿಯ ಪ್ರತೀಕ 'ಈದ್ ಉಲ್ ಫಿತ್ರ್'

ರಂಜಾನ್ 30ಗಳು ಕೊನೆಗೊಂಡಿದ್ದು, ಜಗತ್ತಿನಾದ್ಯಂತ ಮುಸ್ಲಿಮರು 'ಈದ್ ಉಲ್ ಫಿತ್ರ್' ಆಚರಿಸಲಿದ್ದಾರೆ. 30 ದಿನಗಳ ಉಪವಾಸದ ಬಳಿಕ ಬರುವ ಈ ಹಬ್ಬ ಆತ್ಮಶುದ್ಧಿಯ ಪ್ರತೀಕವಾಗಿದ್ದು, ಸಮಾನತೆಯ ಸಂದೇಶವನ್ನು ಸಾರುತ್ತದೆ.

• ಮಹಮ್ಮದ್ ನೂಮಾನ್



ಮುಸ್ಲಿಮರ ಪ್ರಮುಖ ಹಬ್ಬಗಳಲ್ಲಿ ಒಂದೆನಿಸಿರುವ 'ಈದ್ ಉಲ್ ಫಿತ್ರ್' ಮತ್ತೆ ಬಂದಿದೆ. ರಂಜಾನ್ ತಿಂಗಳ ಉಪವಾಸದ ಕೊನೆಯಲ್ಲಿ ಈ ಹಬ್ಬ ಆಚರಿಸಲಾಗುತ್ತದೆ. ರಂಜಾನ್ ಮಾಸದ ಚಂದ್ರದರ್ಶನದೊಂದಿಗೆ ಆರಂಭವಾಗುವ ಉಪವಾಸವು ಶವ್ವಾಲ್ ತಿಂಗಳ ಚಂದ್ರದರ್ಶನದೊಂದಿಗೆ ಕೊನೆಗೊಳ್ಳುತ್ತದೆ. ಶವ್ವಾಲ್ ತಿಂಗಳ ಮೊದಲ ದಿನ 'ಈದುಲ್ ಫಿತ್ರ್' ಹಬ್ಬದ ಸಂಭ್ರಮ.

ರಂಜಾನ್ ತಿಂಗಳನ್ನು ಉಪವಾಸ, ಪ್ರಾರ್ಥನೆ, ಅಧ್ಯಾತ್ಮದಲ್ಲೇ ಕಳೆದು ಕೊನೆಯಲ್ಲಿ ಹಬ್ಬದ ಸಂತಸದಲ್ಲಿ ಪಾಲ್ಗೊಳ್ಳುವರು. ಕೋವಿಡ್ ಎರಡನೇ ಅಲೆ ಇಡೀ ದೇಶಕ್ಕೆ ಆತಂಕ ಒಡ್ಡಿರುವ ಸಮಯದಲ್ಲೇ 'ಈದ್ ಉಲ್ ಫಿತ್ರ್' ಬಂದಿದ್ದು, ಕಳೆದ ವರ್ಷದಂತೆ ಈ ಬಾರಿಯೂ ಆಚರಣೆ ಸರಳವಾಗಿ ನಡೆಯಲಿದೆ.

ಈದ್ ಉಲ್ ಫಿತ್ರ್ ಸಮಾನತೆಯನ್ನು ಸಾರುತ್ತದೆ. ಮನುಷ್ಯನು ಕೇವಲ ತನ್ನ ವೈಯಕ್ತಿಕ ಏಳಿಗೆಯಲ್ಲಿ ಸಂತಸಪಡದೆ, ಸಮಾಜದ ಕಟ್ಟಕಡೆಯ ವ್ಯಕ್ತಿಯ ಹಿತವನ್ನೂ ಬಯಸಬೇಕು ಎಂಬ ಸಂದೇಶವನ್ನು ನೀಡುತ್ತದೆ.

ಮನೆಗಳಲ್ಲೇ ಈದ್ ನಮಾಜ್

ಕೋವಿಡ್‌ನಿಂದಾಗಿ ಈ ಬಾರಿ ಹಬ್ಬ ಸರಳವಾಗಿ ನಡೆಯಲಿದ್ದು, ಮನೆಗಳಿಗೆ ಸೀಮಿತವಾಗಿರಲಿದೆ. ಲಾಕ್‌ಡೌನ್ ಬಿಗಿ ನಿಯಮ ಇರುವುದರಿಂದ ಹೊರಗಡೆ ಓಡಾಟಕ್ಕೆ ನಿರ್ಬಂಧವಿದೆ. ಮಸೀದಿ ಅಥವಾ ಈದ್ಗಾಗಳಲ್ಲಿ ನಡೆಯುವ 'ಈದ್ ನಮಾಜ್' ಈ ಹಬ್ಬದ ಪ್ರಮುಖ ಆಕರ್ಷಣೆಯಾಗಿದೆಯಾದರೂ, ಸಾಮೂಹಿಕ ಪ್ರಾರ್ಥನೆಗೆ ನಿರ್ಬಂಧವಿರುವುದರಿಂದ ಈದ್ ನಮಾಜ್ ಮನೆಗಳಲ್ಲೇ ನಿರ್ವಹಿಸಲಾಗುತ್ತದೆ. ಎಲ್ಲರೂ ಮನೆಗಳಲ್ಲೇ ಈದ್ ನಮಾಜ್ ನಿರ್ವಹಿಸುವಂತೆ ರಾಜ್ಯದ ವಿವಿಧ ಖಾಝಿಗಳು ಮತ್ತು ಮುಸ್ಲಿಂ ಸಮುದಾಯದ ಮುಖಂಡರು ಮನವಿ ಮಾಡಿದ್ದಾರೆ.

'ಈದ್ ಉಲ್ ಫಿತ್ರ್' ಪರಸ್ಪರರ ನಡುವಿನ ಸಂಬಂಧ, ಬಾಂಧವ್ಯವನ್ನು ಬಲಪಡಿಸುವ ದಿನವಾಗಿದೆ. ಆದ್ದರಿಂದ ಪ್ರಾರ್ಥನೆಯ ಬಳಿಕ ಸಂಬಂಧಿಕರ, ಗೆಳೆಯರ ಮನೆಗೆ ಭೇಟಿ ನೀಡುವರು. ಯೋಗಕ್ಷೇಮ ವಿಚಾರಿಸುವರು. ಹಬ್ಬದ ದಿನ ಮನೆಗಳಲ್ಲಿ ವಿಶೇಷ ಖಾದ್ಯ ಸಿದ್ಧಪಡಿಸುವರು.

ಫಿತ್ರ್ ಝಕಾತ್ (ಕಡ್ಡಾಯ ದಾನ): ಹಬ್ಬದ ದಿನ ಆಹಾರ ಧಾನ್ಯವನ್ನು ಬಡವರಿಗೆ ದಾನವಾಗಿ ಕೊಡಬೇಕು ಎಂದು ಇಸ್ಲಾಂ ಆದೇಶಿಸಿದೆ. ಈದ್ ನಮಾಜ್‌ಗಾಗಿ ಮಸೀದಿಗೆ ಹೋಗುವ ಮುನ್ನ ಕಡ್ಡಾಯ ದಾನ ಮಾಡಲೇಬೇಕು. ಅದನ್ನು 'ಫಿತ್ರ್ ಝಕಾತ್' ಎನ್ನುವರು.

ಫಿತ್ರ್ ಝಕಾತ್‌ನ ಪ್ರಮಾಣ ಸುಮಾರು ಎರಡೂವರೆ ಕೆ.ಜಿ. ಆಗಿದೆ. ಆಯಾ ಪ್ರದೇಶದ ಜನರು ಸಾಮಾನ್ಯವಾಗಿ ತಿನ್ನುವ ಆಹಾರವನ್ನು (ಅಕ್ಕಿ, ಗೋಧಿ, ಜೋಳ, ಬೇಳೆ) ದಾನದ ರೂಪದಲ್ಲಿ ನೀಡಬೇಕು. ಝಕಾತ್ ಪಡೆಯುವವರ ಆಹಾರ ಪದ್ಧತಿಯನ್ನರಿತು, ಅವರ ಊರಿನ ಆಹಾರ ಪದ್ಧತಿಯಂತೆಯೇ ಝಕಾತ್ ನೀಡಬೇಕು.

ಈ ಝಕಾತ್ ಪ್ರತಿಯೊಬ್ಬನ ಮೇಲೂ ಕಡ್ಡಾಯ. ಮನೆಯ ಯಜಮಾನ ಆ ಮನೆಯಲ್ಲಿರುವ ಪ್ರತಿ ಸದಸ್ಯನ ಪರವಾಗಿ ತಲಾ ಎರಡೂವರೆ ಕೆ.ಜಿ. (ಉದಾ: ಒಂದು ಮನೆಯಲ್ಲಿ 4 ಸದಸ್ಯರಿದ್ದರೆ 10 ಕೆ.ಜಿ.) ಆಹಾರವಸ್ತುವನ್ನು ಬಡವನ ಮನೆಗೆ ತಲುಪಿಸಬೇಕು. ಆ ಬಳಿಕವೇ ಹಬ್ಬದ ಪ್ರಾರ್ಥನೆಗೆ ಮಸೀದಿಗೆ ತೆರಳಬೇಕು.

ತನ್ನ ಮತ್ತು ತನ್ನ ಕುಟುಂಬ ಸದಸ್ಯರ ಆಹಾರ, ಬಟ್ಟೆ ಮತ್ತು ಮೂಲ ಅಗತ್ಯಗಳಿಗಿಂತ ಹೆಚ್ಚು ಸಂಪತ್ತು ಇರುವ ಪ್ರತಿಯೊಬ್ಬ ಮುಸ್ಲಿಮನಿಗೆ 'ಫಿತ್ರ್ ಝಕಾತ್' ಕಡ್ಡಾಯ. ಬಡವರಿಗೂ ಹಬ್ಬದ ಸಂಭ್ರಮ ಆಚರಿಸಲು ಸಾಧ್ಯವಾಗಬೇಕು ಎಂಬುದು ಇದರ ಉದ್ದೇಶ. ಝಕಾತ್ ಅನ್ನು (ದಾನ) ಹಬ್ಬದೊಂದಿಗೆ ಜೋಡಿಸಿರುವ ಕ್ರಮದಿಂದಾಗ ಇದು ಬಡವರ ಪಾಲಿನ ಹಬ್ಬ ಎನಿಸಿಕೊಂಡಿದೆ.

ಭೋಪಾಲ್, ಇಂದೋರ್‌ನಲ್ಲಿ ₹ 100ರ ಗಡಿ ದಾಟಿದ ಪೆಟ್ರೋಲ್

ನವದೆಹಲಿ (ಪಿಟಿಐ): ದೇಶದಾದ್ಯಂತ ಬುಧವಾರವೂ ಪೆಟ್ರೋಲ್, ಡೀಸೆಲ್ ದರ ಹೆಚ್ಚಾಗಿದೆ. ಇದರಿಂದಾಗಿ ಭೋಪಾಲ್ ಮತ್ತು ಇಂದೋರ್ ನಗರಗಳಲ್ಲಿ ಪೆಟ್ರೋಲ್ ದರ ₹ 100ರ ಗಡಿ ದಾಟಿದೆ.

ಭೋಪಾಲ್‌ನಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 100.08 ಇದ್ದರೆ, ಇಂದೋರ್‌ನಲ್ಲಿ ₹100.16ರಷ್ಟಿದೆ. ಮೇ 4ರಿಂದ 12ರವರೆಗೆ ಒಟ್ಟು ಏಳು ಬಾರಿ ಇಂಧನ ದರ ಹೆಚ್ಚಿಸಲಾಗಿದೆ. ಪೆಟ್ರೋಲ್ ದರ ಲೀಟರಿಗೆ ₹ 1.66 ಮತ್ತು ಡೀಸೆಲ್ ದರ ₹1.88 ರಷ್ಟು ಹೆಚ್ಚಾಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 95.11 ಮತ್ತು ಡೀಸೆಲ್ ದರ ₹ 87.57ರಷ್ಟಕ್ಕೆ ತಲುಪಿದೆ.

ಕರಾವಳಿ ಬಿಟ್ಟು ಉಳಿದೆಡೆ ಶುಕ್ರವಾರ ಈದ್ ಉಲ್ ಫಿತ್ರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಹೊರತುಪಡಿಸಿ ರಾಜ್ಯದ ಉಳಿದ ಎಲ್ಲ ಜಿಲ್ಲೆಗಳಲ್ಲಿ ಶುಕ್ರವಾರ ಈದ್ ಉಲ್ ಫಿತ್ರ್ ಹಬ್ಬ ಆಚರಣೆ ನಡೆಯಲಿದೆ.

ಇಂದು ಶವ್ವಾಲ್ ತಿಂಗಳ ಚಂದ್ರದರ್ಶನ ಆಗಿಲ್ಲ. ಈ ಹಿನ್ನೆಲೆಯಲ್ಲಿ ಶುಕ್ರವಾರ ಈದ್ ಉಲ್ ಫಿತ್ರ್ ಆಚರಿಸಲಾಗುವುದು ಎಂದು ಬೆಂಗಳೂರಿನ ಚಂದ್ರದರ್ಶನ ಸಮಿತಿಯ ಮುಖ್ಯಸ್ಥ ಮೌಲಾನಾ ಮಕ್ಸೂದ್ ಇಮ್ರಾನ್ ತಿಳಿಸಿದ್ದಾರೆ. ದೇಶದ ಇತರ ಯಾವ ರಾಜ್ಯಗಳಿಂದಲೂ ಚಂದ್ರದರ್ಶನದ ಮಾಹಿತಿ ಲಭಿಸಿಲ್ಲ ಎಂದು ಅವರು ತಿಳಿಸಿದ್ದಾರೆ.

ಕರಾವಳಿಯಲ್ಲಿ ಗುರುವಾರ: ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆ ಮತ್ತು ಭಟ್ಕಳಗಳಲ್ಲಿ ಈದ್ ಉಲ್ ಫಿತ್ರ್ ಹಬ್ಬವನ್ನು ಗುರುವಾರ ಆಚರಿಸಲಾಗುತ್ತಿದೆ.

ಕರಾವಳಿಯಲ್ಲಿ ಒಂದು ದಿನ ಮೊದಲೇ ರಂಜಾನ್ ತಿಂಗಳ ಉಪವಾಸ ಆರಂಭವಾಗಿದ್ದು, ಬುಧವಾರಕ್ಕೆ 30 ದಿನಗಳ ಉಪವಾಸ ಕೊನೆಗೊಂಡಿದೆ. ಹಾಗಾಗಿ ಗುರುವಾರ ಹಬ್ಬ ಆಚರಿಸಲಾಗುತ್ತಿದೆ.

ನರೇಗಾ ಕಾಮಗಾರಿಗೆ ಅವಕಾಶ

ಬೆಂಗಳೂರು: ನರೇಗಾ ಕಾಮಗಾರಿಗಳನ್ನು ಮುಂದುವರಿಸಲು ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರ ಮರು ಆದೇಶ ಹೊರಡಿಸಿದೆ. ಕಾಮಗಾರಿ ಸ್ಥಳದಲ್ಲಿ 40ಕ್ಕೂ ಹೆಚ್ಚು ಕಾರ್ಮಿಕರನ್ನು ನಿಯೋಜಿಸಬಾರದು. ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್ ತಿಳಿಸಿದ್ದಾರೆ. ಕೋವಿಡ್ ಹರಡುವಿಕೆ ತಪ್ಪಿಸಲು ಇದೇ 24 ರವರೆಗೆ ಕಾಮಗಾರಿ ನಿಲ್ಲಿಸುವಂತೆ ಪಂಚಾಯತ್ ರಾಜ್ ಇಲಾಖೆ ಸೂಚಿಸಿತ್ತು.

ಮಾರ್ಚ್‌ನಲ್ಲಿ ಸಕಾರಾತ್ಮಕ ಹಾದಿಗೆ ಕೈಗಾರಿಕಾ ಚಟುವಟಿಕೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು ಎರಡು ತಿಂಗಳುಗಳ ಬಳಿಕ ಮತ್ತೆ ಸಕಾರಾತ್ಮಕ ಹಾದಿಗೆ ಮರಳಿದೆ. ಗಣಿಗಾರಿಕೆ ಮತ್ತು ವಿದ್ಯುತ್ ವಲಯಗಳ ಉತ್ತಮ ಬೆಳವಣಿಗೆಯಿಂದಾಗಿ ಮಾರ್ಚ್‌ನಲ್ಲಿ ಚೇತರಿಕೆ ಕಂಡುಕೊಂಡಿದೆ.

ಕೈಗಾರಿಕಾ ಉತ್ಪದನಾ ಚಟುವಟಿಕೆಯು ಮಾರ್ಚ್‌ನಲ್ಲಿ ಶೇಕಡ 22.4ರಷ್ಟು ಬೆಳವಣಿಗೆ ಕಂಡಿದೆ. 2020ರ ಮಾರ್ಚ್‌ನಲ್ಲಿ ಶೇ 18.7ರಷ್ಟು ಕುಸಿತ ಕಂಡಿತ್ತು. ಈ ವರ್ಷದ ಜನವರಿ ಮತ್ತು ಮಾರ್ಚ್‌ನಲ್ಲಿ ಕ್ರಮವಾಗಿ ಶೇ 0.9ರಷ್ಟು ಮತ್ತು ಶೇ 3.4ರಷ್ಟು ಇಳಿಕೆ ಕಂಡಿತ್ತು.

ಕೈಗಾರಿಕಾ ಉತ್ಪಾದನೆ ಸೂಚ್ಯಂಕದಲ್ಲಿ (ಐಐಪಿ) ಶೇ 77.63ರಷ್ಟು ಪಾಲು ಹೊಂದಿರುವ ತಯಾರಿಕಾ ವಲಯದ ಬೆಳವಣಿಗೆಯು ಮಾರ್ಚ್‌ನಲ್ಲಿ ಶೇ 25.8ರಷ್ಟಾಗಿದೆ. ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಈ ಮಾಹಿತಿ ಬಿಡುಗಡೆ ಮಾಡಿದೆ.

2020–21ರಲ್ಲಿ ಐಐಪಿಯು ಶೇ 8.6ರಷ್ಟು ಇಳಿಕೆ ಕಂಡಿದೆ. 2019–20ರಲ್ಲಿ ಶೇ 0.8ರಷ್ಟು ಇಳಿಕೆ ಕಂಡಿತ್ತು.



ಚಿಲ್ಲರೆ ಹಣದುಬ್ಬರ ಇಳಿಕೆ

ಮಾರ್ಚ್‌ನಲ್ಲಿ ಶೇ 5.52ರಷ್ಟಿದ್ದ ಚಿಲ್ಲರೆ ಹಣದುಬ್ಬರವು ಏಪ್ರಿಲ್‌ನಲ್ಲಿ ಶೇ 4.29ಕ್ಕೆ ಇಳಿಕೆ ಕಂಡಿದೆ. ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಆಹಾರ ಉತ್ಪನ್ನಗಳ ಹಣದುಬ್ಬರವು ಮಾರ್ಚ್‌ನಲ್ಲಿ ಶೇ 4.87ರಷ್ಟು ಇದ್ದಿದ್ದು ಏಪ್ರಿಲ್‌ನಲ್ಲಿ ಶೇ 2.02ಕ್ಕೆ ಇಳಿಕೆ ಕಂಡಿದೆ.

ಕರ್ತವ್ಯದ ಬಳಿಕ ಸಮಾಲೋಚನೆ: ಕೇಂದ್ರದ ವೈದ್ಯರಿಗೆ ಅನುಮತಿ ಬೇಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ವೈದ್ಯರು ತಮ್ಮ ಅಧಿಕೃತ ಕರ್ತವ್ಯದ ಅವಧಿಯ ಬಳಿಕ ರೋಗಿಗಳಿಗೆ ಔಷಧ ನೀಡುವುದು ಅಥವಾ ದೂರವಾಣಿ ಸಮಾಲೋಚನೆ ಒದಗಿಸುವುದಕ್ಕೆ ಪೂರ್ವಾನುಮತಿ ಪಡೆಯುವ ಅಗತ್ಯ ಇಲ್ಲ. ಕೋವಿಡ್–19ರ ಕಾರಣದಿಂದ ವೈದ್ಯರ ಕೊರತೆ ಇದೆ ಮತ್ತು ರೋಗಿಗಳಿಗೆ ವೈದ್ಯರು ಸಿಗುತ್ತಿಲ್ಲ. ಈ ಕಾರಣಕ್ಕೆ ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಈ ಆದೇಶ ಹೊರಡಿಸಿದೆ.

ಸಾಂಕ್ರಾಮಿಕದ ಈ ಅವಧಿಯಲ್ಲಿ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಕೆಲಸ ಮಾಡುವ ವೈದ್ಯರು ಅವರ ಕೆಲಸದ ಅವಧಿಯ ಬಳಿಕವೂ ಸಮಾಲೋಚನೆಗೆ ಅವಕಾಶ ಕೊಡಬೇಕು ಎಂಬ ಬೇಡಿಕೆ ವ್ಯಕ್ತವಾಗಿತ್ತು.

ಆದರೆ, ಈ ಸೇವೆಗಳಿಗೆ ವೈದ್ಯರು ಶುಲ್ಕ ಪಡೆಯುವಂತಿಲ್ಲ. ಪೂರ್ಣವಾಗಿ ಇದು ಸೇವೆಯ ರೂಪದಲ್ಲಿಯೇ ಇರಬೇಕು ಎಂದು ಆದೇಶವು ಸ್ಪಷ್ಟಪಡಿಸಿದೆ.

ಹೀಗೆ ಒದಗಿಸಿದ ಸೇವೆಯ ಬಗ್ಗೆ ತಮ್ಮ ಇಲಾಖೆಗೆ ವೈದ್ಯರು ಮಾಹಿತಿ ನೀಡುವುದು ಉತ್ತಮ. ಇದು ದಾಖಲಾತಿ ನಿರ್ವಹಣೆಯ ಉದ್ದೇಶಕ್ಕಾಗಿ ಮಾತ್ರ ಎಂದು ಆದೇಶದಲ್ಲಿ ಹೇಳಲಾಗಿದೆ.

ತಪ್ಪು ನಿರ್ಧಾರಗಳೇ ಪಿಡುಗು ವ್ಯಾಪಕವಾಗಲು ಕಾರಣ: ವರದಿ

'ಕೋವಿಡ್ ದುರಂತ ತಡೆಯಬಹುದಿತ್ತು'

ಜಿನಿವಾ (ಎಎಫ್‌ಪಿ): 'ಸೂಕ್ತ ಸಮಯದಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳದೇ ಇರುವುದು ಮತ್ತು ರಾಷ್ಟ್ರ-ರಾಷ್ಟ್ರಗಳ ಮಧ್ಯೆ ಸಮನ್ವಯದ ಕೊರತೆಯಿಂದ ಕೋವಿಡ್ ಮಹಾ ದುರಂತವಾಗಿ ಬೆಳೆದಿದೆ. ಅಗತ್ಯ ಕ್ರಮ ತೆಗೆದುಕೊಂಡಿದ್ದರೆ ಮತ್ತು ಸಮನ್ವಯ ಸಾಧಿಸಿದ್ದರೆ ಕೋವಿಡ್ ಮಹಾದುರಂತವಾಗುವುದನ್ನು ತಡೆಯಬಹುದಿತ್ತು' ಎಂದು ಜಾಗತಿಕ ಅಧ್ಯಯನ ವರದಿಯೊಂದು ಹೇಳಿದೆ.

ಇಂಡಿಪೆಂಡೆಂಟ್ ಪ್ಯಾನೆಲ್ ಫಾರ್ ಪ್ಯಾಂಡೆಮಿಕ್ ಪ್ರಿಪೇರ್ಡ್‌ನೆಸ್ ಅಂಡ್ ರೆಸ್ಪಾನ್ಸ್ (ಐಪಿಪಿಪಿಆರ್) ತಂಡವು ಸಿದ್ಧಪಡಿಸಿರುವ 'ಕೋವಿಡ್-19: ಇದೇ ಕೊನೆಯ ಪಿಡುಗಾಗಲಿ' ಎಂಬ ವರದಿಯಲ್ಲಿ ಈ ಮಾಹಿತಿ ಇದೆ. ಈ ವರದಿಯನ್ನು ಸಿದ್ಧಪಡಿಸುವಂತೆ ವಿಶ್ವ ಆರೋಗ್ಯ ಸಂಸ್ಥೆಯು ಐಪಿಪಿಪಿಆರ್ ಅನ್ನು ಕೇಳಿಕೊಂಡಿತ್ತು. ಈಗ ಈ ವರದಿ ಬಹಿರಂಗವಾಗಿದೆ.

'ಕೆಲವು ಆತುರದ ನಿರ್ಧಾರಗಳು, ತ್ವರಿತ ಕ್ರಮಗಳು ಮತ್ತು ವಿಳಂಬ, ನಿರ್ಲಕ್ಷ್ಯ ಮತ್ತು ವೈಜ್ಞಾನಿಕ ಮಾಹಿತಿಯ ನಿರಾಕರಣೆ ಎಲ್ಲವೂ ಸೇರಿ 'ವಿಷದ ಮಿಶ್ರಣ' ಸಿದ್ಧವಾಯಿತು. ಕೋವಿಡ್-19 ಒಂದು ಮಹಾದುರಂತವಾಗಿ ಬದಲಾಯಿತು. ಕೋವಿಡ್ ಕಾಣಿಸಿಕೊಂಡ ಪ್ರತಿಹಂತದಲ್ಲೂ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ. ಕೋವಿಡ್ ಒಂದು ಮಹಾದುರಂತವಾಗಿ ಬದಲಾಗುವಲ್ಲಿ ಯಾರೋ ಒಬ್ಬರದ್ದು ಮಾತ್ರ ತಪ್ಪು ಇದೆ ಎಂದು ಬೊಟ್ಟುಮಾಡಲಾಗದು. ಎಲ್ಲೆಡೆಯೂ ತಪ್ಪಾಗಿದೆ. ಈ ತಪ್ಪುಗಳ ಕಾರಣದಿಂದ ವಿಶ್ವದಾದ್ಯಂತ 33 ಲಕ್ಷಕ್ಕೂ ಹೆಚ್ಚು ಜನರು ಸತ್ತಿದ್ದಾರೆ. ಜಾಗತಿಕ ಆರ್ಥಿಕ ವ್ಯವಸ್ಥೆ ಕುಸಿದುಬಿದ್ದಿದೆ' ಎಂದು ವರದಿಯಲ್ಲಿ ಹೇಳಲಾಗಿದೆ.

ವಿಜ್ಞಾನವನ್ನೇ ನಿರಾಕರಿಸುವ ರಾಜಕೀಯ ನಾಯಕರ ಹೇಳಿಕೆಗಳಿಂದಾಗಿ, ಸಾರ್ವಜನಿಕರು ತಮ್ಮ ದೇಶದ ಆರೋಗ್ಯ ವ್ಯವಸ್ಥೆ ಮತ್ತು ವಿಜ್ಞಾನಿಗಳನ್ನು ನಂಬದೇ ಹೋದರು
ಐಪಿಪಿಪಿಆರ್ ವರದಿ

'ಕೋವಿಡ್ ಒಂದು ಜಾಗತಿಕ ಮಹಾ ಪಿಡುಗಾಗಬಹುದು ಎಂಬ ಎಚ್ಚರಿಕೆ ಆರಂಭದಲ್ಲೇ ಲಭ್ಯವಾಗಿತ್ತು. ವಿಜ್ಞಾನಿಗಳು ಮತ್ತು ತಜ್ಞರೂ ಕಾಲಕಾಲಕ್ಕೆ ಈ ಎಚ್ಚರಿಕೆಯನ್ನು ನೀಡುತ್ತಲೇ ಬಂದಿದ್ದಾರೆ. ಆದರೆ ಅವೆಲ್ಲವನ್ನೂ ಕಡೆಗಣಿಸಲಾಯಿತು. 2019ರ ಡಿಸೆಂಬರ್‌ನಲ್ಲಿಯೇ ವುಹಾನ್‌ನಲ್ಲಿ ಸೋಂಕು ಕಾಣಿಸಿಕೊಂಡರೂ, ಅಗತ್ಯ ಕ್ರಮವನ್ನು ತೆಗೆದುಕೊಳ್ಳುವಲ್ಲಿ ವಿಳಂಬ ಮಾಡಲಾಯಿತು. ಸೋಂಕು ಜಾಗತಿಕವಾಗಿ ಹರಡಿದ್ದು, ಫೆಬ್ರುವರಿಯಲ್ಲಿ. ಸೋಂಕು ಜಾಗತಿಕವಾಗಿ ಹರಡುವುದನ್ನು ತಡೆಯಲು ಫೆಬ್ರುವರಿಯಲ್ಲಿ ಅವಕಾಶವಿತ್ತು. ಇಲ್ಲಿ ದೊರೆತಿದ್ದ ಎಚ್ಚರಿಕೆಯನ್ನು ರಾಷ್ಟ್ರಗಳು ಕಡೆಗಣಿಸಿದವು. ಈ ಅವಕಾಶವನ್ನು ಕಳೆದುಕೊಂಡವು' ಎಂದು ವರದಿಯಲ್ಲಿ ವಿವರಿಸಲಾಗಿದೆ.

ಪಿಡುಗು ತೀವ್ರವಾಗಲು ಕಾರಣಗಳು

- ಸೋಂಕು ತಡೆಗಟ್ಟಲು ಚೀನಾ ವಿಳಂಬ ಮಾಡಿತು. ಸೋಂಕು ವ್ಯಾಪಕವಾಗಿ ಹರಡುವವರೆಗೂ ಕಾಯಿತು
- ಕೋವಿಡ್ ಒಂದು ಜಾಗತಿಕ ಪಿಡುಗು ಎಂದು ಘೋಷಿಸುವಲ್ಲಿ ವಿಶ್ವ ಆರೋಗ್ಯ ಸಂಸ್ಥೆ ವಿಳಂಬ ಮಾಡಿತು. ಅಗತ್ಯ ಕ್ರಮಗಳನ್ನು ಘೋಷಿಸುವಲ್ಲಿಯೂ ವಿಳಂಬ ಮಾಡಿತು. ಸೋಂಕು ವಿಶ್ವದಾದ್ಯಂತ ಹರಡಿದ ನಂತರ ಕ್ರಮಕ್ಕೆ ಮುಂದಾಯಿತು
- ವಿಶ್ವ ಆರೋಗ್ಯ ಸಂಸ್ಥೆಯು ತಡವಾಗಿಯಾದರೂ ನೀಡಿದ ಎಚ್ಚರಿಕೆಯನ್ನು ಬಹುತೇಕ ರಾಷ್ಟ್ರಗಳು ಕಡೆಗಣಿಸಿದವು. ಎಲ್ಲಾ ರಾಷ್ಟ್ರಗಳೂ ತಮ್ಮಲ್ಲಿ ಸೋಂಕು ತೀವ್ರವಾದಾಗ ಮಾತ್ರ ಅದನ್ನು ತಡೆಯಲು ಮುಂದಾದವು.
- ಕೋವಿಡ್ ನಿಯಂತ್ರಣಕ್ಕೆ ತೆಗೆದುಕೊಂಡಿದ್ದ ಕ್ರಮಗಳನ್ನು, ಹಲವು ರಾಷ್ಟ್ರಗಳು ತ್ವರಿತವಾಗಿ ಹಿಂಪಡೆದವು. ಕೋವಿಡ್ ನಿರ್ನಾಮವಾಗಿದೆಯೆಂಬಂತೆ ವರ್ತಿಸಿದವು. ಈ ಆತುರದ ನಿರ್ಧಾರವು ಈಗಿನ ಮಹಾದುರಂತಕ್ಕೆ ಕಾರಣವಾಗಿವೆ

ಶಿಫಾರಸುಗಳು

- ವಿಶ್ವದ ಶ್ರೀಮಂತ ರಾಷ್ಟ್ರಗಳು ಕೋವಿಡ್ ಲಸಿಕೆ ಕಾರ್ಯಕ್ರಮ ನಡೆಸಲು, ವಿಶ್ವದ 92 ಬಡ ರಾಷ್ಟ್ರಗಳಿಗೆ ಆರ್ಥಿಕ ನೆರವು ಒದಗಿಸಬೇಕು
- ಇದೇ ಸೆಪ್ಟೆಂಬರ್ ಅಂತ್ಯದ ವೇಳೆಗೆ 92 ಬಡ ರಾಷ್ಟ್ರಗಳಿಗೆ 100 ಕೋಟಿ ಡೋಸ್ ಲಸಿಕೆ ಪೂರೈಸಬೇಕು. 2022ರ ಮಧ್ಯಂತರದ ವೇಳೆಗೆ ಈ ರಾಷ್ಟ್ರಗಳಿಗೆ 200 ಕೋಟಿಗಿಂತಲೂ ಹೆಚ್ಚು ಡೋಸ್ ಲಸಿಕೆಯನ್ನು ಪೂರೈಸಬೇಕು
- ಕೋವಿಡ್ ಪತ್ತೆ, ಚಿಕಿತ್ಸೆ ಮತ್ತು ಲಸಿಕೆ ಕಾರ್ಯಕ್ರಮಗಳಗೆ ತಗಲುವ ವೆಚ್ಚದಲ್ಲಿ ಶೇ 60ರಷ್ಟನ್ನು ಜಿ7 ರಾಷ್ಟ್ರಗಳು ಭರಿಸಬೇಕು. ಉಳಿದ ಶೇ 40ರಷ್ಟು ವೆಚ್ಚವನ್ನು ಜಿ20 ರಾಷ್ಟ್ರಗಳು ಪೂರೈಸಬೇಕು
- ಇದಕ್ಕೆ ಸಂಬಂಧಿಸಿದ ಎಲ್ಲಾ ಕ್ರಮಗಳನ್ನು ವಿಶ್ವ ಆರೋಗ್ಯ ಸಂಸ್ಥೆ ತಕ್ಷಣವೇ ತೆಗೆದುಕೊಳ್ಳಬೇಕು.

₹13,487 ಕೋಟಿ ಹೂಡಿಕೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಅಬ್ಬರ ಮಧ್ಯೆಯೂ ರಾಜ್ಯಕ್ಕೆ ₹13,487.11 ಕೋಟಿ ಬಂಡವಾಳ ಹೂಡಿಕೆ ಹರಿದು ಬಂದಿದೆ. ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿಯು ಬುಧವಾರ ಸಂಜೆ ಸಭೆ ಸೇರಿ 9 ಹೊಸ ಯೋಜನೆಗಳು ಮತ್ತು 1 ಹೆಚ್ಚುವರಿ ಬಂಡವಾಳ ಯೋಜನೆಗೆ ಒಪ್ಪಿಗೆ ನೀಡಿದೆ. ಇದರಿಂದ ರಾಜ್ಯದಲ್ಲಿ ಒಟ್ಟು 6,256 ಉದ್ಯೋಗಗಳು ಸೃಷ್ಟಿಯಾಗಲಿದೆ.

ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಿತು.

ಹೂಡಿಕೆ ವಿವರ:

- ಜೆಎಸ್‌ಡಬ್ಲ್ಯು ಟೆಕ್ನೊ ಪ್ರಾಜೆಕ್ಟ್, ಬಳ್ಳಾರಿ ಜಿಲ್ಲೆ ತೋರಣಗಲ್ಲಿನಲ್ಲಿ ದ್ರವ ರೂಪದ ಆಮ್ಲಜನಕ, ದ್ರವೀಕೃತ ನೈಟ್ರೋಜನ್ ಇತ್ಯಾದಿಗಳ ಉತ್ಪಾದನಾ ಘಟಕ ಸ್ಥಾಪಿಸಲಿದೆ. ₹892.3 ಕೋಟಿ ಬಂಡವಾಳ ಹೂಡಲಿದ್ದು, 32 ಮಂದಿಗೆ ಉದ್ಯೋಗ ಸಿಗಲಿದೆ.
- ಶ್ರೀ ಸಿಮೆಂಟ್ಸ್ ದೊಡ್ಡಬಳ್ಳಾಪುರದ ವಡ್ಡರಹಳ್ಳಿಯಲ್ಲಿ ಕ್ಲಿಂಕರ್ ಗ್ರೈಂಡಿಂಗ್, ಸಿಮೆಂಟ್ ಬ್ಯಾಗಿಂಗ್ ಘಟಕ ಸ್ಥಾಪಿಸಲಿದ್ದು, ₹600 ಕೋಟಿ ಬಂಡವಾಳ ಹೂಡಲಿದ್ದು, 300 ಉದ್ಯೋಗ ಸೃಷ್ಟಿಯಾಗಲಿದೆ.
- ಚಿತ್ರದುರ್ಗ ಜಿಲ್ಲೆಯ ಡಿ.ಎಸ್.ಹಳ್ಳಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಪೆಟ್ರೋಲಿಯಂ ಉತ್ಪನ್ನಗಳ ಸಂಗ್ರಹ ಮತ್ತು ವಿಲೇವಾರಿ ಘಟಕ ಸ್ಥಾಪಿಸಲಿದ್ದು, ₹554.40 ಕೋಟಿ ಹೂಡಿಕೆ ಮಾಡಲಿದೆ. 52 ಜನರಿಗೆ ಉದ್ಯೋಗ ಸೃಷ್ಟಿಯಾಗಲಿದೆ.
- ಗ್ರಾಸಿಮ್ ಇಂಡಸ್ಟ್ರೀಸ್ ಚಾಮರಾಜನಗರ ಜಿಲ್ಲೆಯಲ್ಲಿ ಸಾಲ್ವೆಂಟ್ ಆಧಾರಿತ ಪೈಂಟ್ ತಯಾರಿಕಾ ಘಟಕ ಸ್ಥಾಪಿಸಲಿದ್ದು, ₹731.79 ಕೋಟಿ ಹೂಡಿಕೆ ಮಾಡಲಿದೆ. 270 ಮಂದಿಗೆ ಉದ್ಯೋಗ ಸಿಗಲಿದೆ.
- ವೈ.ಜಿ.ಕಟ್ಟಿಂಗ್ ಚಿಕ್ಕಬಳ್ಳಾಪುರದಲ್ಲಿ ₹1,000 ಕೋಟಿ ವೆಚ್ಚದಲ್ಲಿ ಘಟಕ ಸ್ಥಾಪಿಸಲಿದೆ. 710 ಮಂದಿಗೆ ಉದ್ಯೋಗ ಸಿಗಲಿದೆ.
- ಎನ್‌ಎಕ್ಸ್‌ಟಿ ಟೆಕ್ ಪಾರ್ಕ್ ಬಿಡದಿಯಲ್ಲಿ ಡೇಟಾ ಸೆಂಟರ್ ಆರಂಭಿಸಲಿದ್ದು, ₹2,000 ಕೋಟಿ ಬಂಡವಾಳ ಹೂಡಲಿದೆ. 60 ಮಂದಿಗೆ ಉದ್ಯೋಗ.
- ರಸರಿ ಟೆಕ್‌ಪಾರ್ಕ್ ಯಲಹಂಕ ಹೋಬಳಿಯಲ್ಲಿ ₹4,042.95 ಕೋಟಿ ಬಂಡವಾಳ ಹೂಡಲಿದೆ. 3,000 ಜನರಿಗೆ ಉದ್ಯೋಗ ಸೃಷ್ಟಿಯಾಗಲಿದೆ.
- ಗೋಲ್ಡ್ ಪ್ಲಸ್ ಗ್ಲಾಸ್ ಮಂಗಳೂರಿನ ಎಂಎಸ್‌ಇಝಡ್‌ನಲ್ಲಿ ₹2,527 ಕೋಟಿ ಬಂಡವಾಳ ಹೂಡಲಿದ್ದು, 956 ಮಂದಿಗೆ ಉದ್ಯೋಗ ಸಿಗಲಿದೆ.

ಸ್ಪರ್ಧಾ ವಾಣಿ





ಆಕರ ಗ್ರಂಥ, ಟಿಪ್ಪಣಿಗೆ ಇರಲಿ ಆದ್ಯತೆ..

ಸಂದರ್ಶನ: ಚನ್ನಬಸಪ್ಪ ರೊಟ್ಟಿ



ತಿರುಪತಿ ಪಾಟೀಲ

ರಾಯಚೂರು ಜಿಲ್ಲೆ, ಲಿಂಗಸುಗೂರು ತಾಲ್ಲೂಕಿನ ಯಲಗಟ್ಟಾ ಗ್ರಾಮದ **ತಿರುಪತಿ ಪಾಟೀಲ** ಕೆಎಎಸ್ ಅಧಿಕಾರಿ. ಸದ್ಯ ಧಾರವಾಡದಲ್ಲಿ ಪ್ರೊಬೇಷನರಿ ತಹಶೀಲ್ದಾರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಚಿಕ್ಕ ವಯಸ್ಸಿನಲ್ಲೇ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸಾಧನೆ ಮಾಡಿದ ಇವರು ತಮ್ಮ ಅನುಭವದ ಜೊತೆ ಸ್ಪರ್ಧಾರ್ಥಿಗಳಿಗೆ ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ.

- **ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಆಸಕ್ತಿ ಮೂಡಿದ್ದು ಯಾವಾಗ? ಹೇಗೆ?**

ಡಿ.ಇಡಿ ಮುಗಿಸಿದ ನಂತರ ಕೆಲಸ ಮಾಡುವ ಅನಿವಾರ್ಯತೆಯಿಂದ ಬೆಂಗಳೂರಿನಲ್ಲಿ 6 ತಿಂಗಳು ಗಾರೆ ಕೆಲಸ ಮಾಡಿದೆ. ನಂತರ ಉನ್ನತ ಗುರಿ ಸಾಧನೆಯ ಛಲದೊಂದಿಗೆ ಪದವಿಗೆ ಪ್ರವೇಶ ಪಡೆದಾಗಲೇ ನನ್ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಕುರಿತು ಓದಿನ ಆಸಕ್ತಿ ಮೂಡಿತ್ತು. ಅದರಲ್ಲೂ ಪದವಿ 2 ನೇ ವರ್ಷದಲ್ಲಿ ಕಾಲೇಜಿಗೆ ಅತಿಥಿಯಾಗಿ ಬಂದಿದ್ದ ಪ್ರೊಬೇಷನರಿ ಐಎಎಸ್ ಅಧಿಕಾರಿ ಉಜ್ವಲಕುಮಾರ್ ಘೋಷ್, ಕೆಎಎಸ್ ಅಧಿಕಾರಿಗಳಾದ ಟಿ.ಯೋಗೇಶ್, ವಿ.ಬಿ.ಹಂಚಿನಾಳ, ಚಂದ್ರಶೇಖರ್ ಕುಂಬಾರ್ (ಕೆ.ಇ.ಎಸ್) ಅವರಿಂದ ದೊರೆತ ಸ್ಫೂರ್ತಿ ನನ್ನಲ್ಲಿ ಈ ಓದಿನ ಕಿಚ್ಚನ್ನು ಹೊತ್ತಿಸಿತು.

- **ಪದವಿಯಲ್ಲಿದ್ದಾಗ ಸ್ಪರ್ಧಾತ್ಮಕ ಪರೀಕ್ಷಾ ತಯಾರಿ ಯಾವ ರೀತಿಯಾಗಿತ್ತು?**

ಬಿಎ 2ನೇ ತರಗತಿಯಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗೆ ಓದು ಆರಂಭಿಸಿದೆ. ಪ್ರಚಲಿತ ವಿದ್ಯಮಾನಗಳ ನೋಟ್ಸ್ ಮಾಡುವುದು, ಹಳೆಯ ಪ್ರಶ್ನೆಪತ್ರಿಕೆಗಳನ್ನು ಅವಲೋಕಿಸುವುದು, ಸುದೀರ್ಘ ಓದು, ಸ್ಪರ್ಧಾ ನಿಯತಕಾಲಿಕೆಗಳ ಓದು, ಸ್ನೇಹಿತರ ಜೊತೆ ಚರ್ಚೆ ಇದು ಆಗ ನನ್ನ ಅಧ್ಯಯನದ ಕ್ರಮವಾಗಿತ್ತು.

- **ಪದವಿ ನಂತರ ?**

ಪದವಿ ನಂತರ ವಿದ್ಯಾಕಾಶಿ ಧಾರವಾಡಕ್ಕೆ ಬಂದು ಸರ್ಕಾರ ಉಚಿತ ಐಎಎಸ್ ಕೋಚಿಂಗ್‌ಗಾಗಿ ನಡೆಸುವ ಪರೀಕ್ಷೆಯಲ್ಲಿ ಆಯ್ಕೆಯಾಗಿ ಬೆಂಗಳೂರಿನ ಯೂನಿವರ್ಸಲ್ ತರಬೇತಿ ಕೇಂದ್ರದಲ್ಲಿ 9 ತಿಂಗಳವರೆಗೆ ತರಬೇತಿ ಪಡೆದೆ. ನಂತರ ಪೊಲೀಸ್ ಇಲಾಖೆಯಲ್ಲಿರುವ ಸಹೃದಯಿ ಶ್ರೀನಿವಾಸ್ ಅವರ ಆಶ್ರಯದಲ್ಲಿ 2 ವರ್ಷ ಬೆಂಗಳೂರಿನಲ್ಲೇ ಉಳಿದುಕೊಂಡು ಅಧ್ಯಯನ ಮಾಡಿದೆ.

- **ಮೊದಲು ಎದುರಿಸಿದ ಸ್ಪರ್ಧಾತ್ಮಕ ಪರೀಕ್ಷೆ ಯಾವುದು?**

2014 ರಲ್ಲಿ ಕೆಎಎಸ್ ಪರೀಕ್ಷೆ ಎದುರಿಸಿ, ಮೊದಲ ಪ್ರಯತ್ನದಲ್ಲಿ ಪ್ರಿಲಿಮ್ಸ್ ಪಾಸಾದೆ. ಆದರೆ, ಕಲಿಕೆಯಲ್ಲಿ ಪ್ರಬುದ್ಧತೆ, ಸಂಪನ್ಮೂಲ, ಮಾರ್ಗದರ್ಶನ, ಓದುವ ಸ್ನೇಹಿತರ ಕೊರತೆ, ಅತಿಯಾದ ಆತ್ಮವಿಶ್ವಾಸದಿಂದ ಮೇನ್ಸ್‌ನಲ್ಲಿ ಪಾಸಾಗಲಿಲ್ಲ. ನಂತರ ಎಸ್.ಡಿ.ಎ, ಎಫ್.ಡಿ.ಎ, ಗ್ರಾ.ಪಂ ಸೆಕ್ರೆಟರಿ ಗ್ರೇಡ್-1, ಪಿಡಿಒ, ಪಿ.ಎಸ್.ಐ... ಈ ಎಲ್ಲ ಪರೀಕ್ಷೆಗಳಲ್ಲೂ ಸಾಲುಸಾಲು ವೈಫಲ್ಯ ಎದುರಾಯಿತು. ಅತಿಯಾದ ಆತ್ಮವಿಶ್ವಾಸವೇ ನನಗೆ ಮುಳುವಾಗಿತ್ತು.

- **ವೈಫಲ್ಯದಿಂದ ಪುಟಿದೆದ್ದುದು ಹೇಗೆ?**

2016 ರಲ್ಲಿ ಬೆಂಗಳೂರಿನಿಂದ ಮರಳಿ ಧಾರವಾಡಕ್ಕೆ ಬಂದೆ. ಈ ಹಂತದಲ್ಲಿ ಕೆಲವು ಸ್ನೇಹಿತರು, ಊರಿನ ಜನರ ಕೊಂಕುಮಾತು ಎದುರಾದವು, ನನ್ನಲ್ಲಿ ಕೆಎಎಸ್ ಆಸೆಯೂ ಕಮರಿತ್ತು. ಮನೆಯಲ್ಲಿರುವ ಕಿತ್ತು ತಿನ್ನುವ ಬಡತನದಿಂದ ಯಾವುದಾದರೊಂದು ನೌಕರಿ ಸಿಕ್ಕರೆ ಸಾಕು ಎಂಬಂತಾಗಿತ್ತು. ಆಗ, ಸಹೋದರ ಶರಣು ಬಾಗೂರ, ಸ್ನೇಹಿತ ಚಂದ್ರಕಾಂತ ರೆಡ್ಡಿಯವರ ಸ್ಫೂರ್ತಿಯ ಮಾತುಗಳಿಂದ ಪ್ರೇರಣೆ ಪಡೆದು ಕರ್ನಾಟಕ ವಿಶ್ವವಿದ್ಯಾಲಯದ ಗ್ರೀನ್ ಗಾರ್ಡನ್‌ನಲ್ಲಿ ಓದಲು ಸೇರುತ್ತಿದ್ದ ಸುಮಾರು 500 ಸ್ಪರ್ಧಾರ್ಥಿಗಳಿಗೆ ಉಚಿತವಾಗಿ ಬೋಧನೆ ಮಾಡಿದ್ದು ಉಪಯುಕ್ತವಾಯಿತು. ಇದೇ ವೇಳೆ ಎಸ್‌ಡಿಎ ಪರೀಕ್ಷೆಯಲ್ಲಿ ನಾನು ಪಾಸಾದೆ. ಇದು ಆತ್ಮವಿಶ್ವಾಸವನ್ನು ನೂರ್ಮಡಿಸಿತು. ನಂತರ ಉನ್ನತ ಹುದ್ದೆಗೆ ಏರಬೇಕು ಎಂಬ ದೃಢ ನಿರ್ಧಾರ ಮೂಡಿತು.

- **ಒಮ್ಮೆಲೇ 6 ಸರ್ಕಾರಿ ಹುದ್ದೆಗಳು ಒಲಿದದ್ದು ಹೇಗೆ?**

ಎಸ್‌ಡಿಎ ಪರೀಕ್ಷೆಯಲ್ಲಿ ಪಾಸಾದ ನಂತರ ಮೊರಾರ್ಜಿ ಶಾಲೆಯಲ್ಲಿ ಎಫ್.ಡಿ.ಎ, ಮಾರ್ಕೆಟಿಂಗ್ ಅಸಿಸ್ಟೆಂಟ್, ಆಶ್ರಮ ಶಾಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕ, ಎಕ್ಸೈಸ್ ಗಾರ್ಡ್, ಇಎಸ್‌ಐ ಹುದ್ದೆಗಳು ಒಲಿದು ಬಂದವು. ಹಾವೇರಿ ಜಿಲ್ಲೆ ಹಿರೇಕೇರೂರು ತಾಲ್ಲೂಕಿನಲ್ಲಿ ಇಎಸ್‌ಐ ಹುದ್ದೆಗೆ ಹಾಜರಾದೆ. ಈ ಮಧ್ಯದಲ್ಲಿ ಬರೆದಿದ್ದ ಕೆಎಎಸ್ ಪ್ರಿಲಿಮ್ಸ್‌ನಲ್ಲಿ ಮತ್ತೊಮ್ಮೆ ಪಾಸಾದೆ. ಆಗ ಈ ಮೊದಲಿನಂತೆ ಮುಖ್ಯ ಪರೀಕ್ಷೆಯಲ್ಲಿ ಸೋಲಬಾರದು ಎಂಬ ನಿರ್ಧಾರ ಮಾಡಿದ್ದೆ.

- **ಕೆಎಎಸ್ ಮುಖ್ಯ ಪರೀಕ್ಷೆಗೆ ತಯಾರಾದದ್ದು ಹೇಗೆ?**

ಧಾರವಾಡದಲ್ಲಿ ಜತೆಗೂಡಿದ ಸಮಾನಮನಸ್ಕ ಸ್ನೇಹಿತರಾದ ಕೃಷ್ಣಾ ಶಾಂತಗೇರಿ, ಸೋಮಶೇಖರ ಬಿರಾದಾರ ಮತ್ತು ನಾನು ಗುಂಪು ಅಧ್ಯಯನ ಆರಂಭಿಸಿದೆವು. ಈ ವೇಳೆ ಯೋಜನಾಬದ್ಧ ಓದು, ಬರವಣಿಗೆ, ಸಂಪನ್ಮೂಲ ಸಂಗ್ರಹ, ಗುಂಪು ಚರ್ಚೆ ಇವುಗಳ ಮೂಲಕ ನಾವು ಮೂವರು ಕೂಡ ಮೇನ್ಸ್ ಪಾಸಾಗಿ ಸಂದರ್ಶನಕ್ಕೂ ಆಯ್ಕೆಯಾದೆವು. ಸಂದರ್ಶನದ ನಂತರ ನನಗೆ ಹುದ್ದೆಯ ನಿರೀಕ್ಷೆ ಇರಲಿಲ್ಲ. ಆದರೆ, ನಾನು ಉತ್ತಮ ಪ್ರಯತ್ನ ಮಾಡಿದ್ದೇನೆ ಎನ್ನುವ ವಿಶ್ವಾಸವಿತ್ತು. ಅಂತೂ 2019 ಡಿಸೆಂಬರ್‌ನಲ್ಲಿ ತಹಶೀಲ್ದಾರ್ ಆಗಿ ಆಯ್ಕೆ ಆದೆ. ಪ್ರಸ್ತುತ ಧಾರವಾಡ ಜಿಲ್ಲೆಯಲ್ಲಿ ಪ್ರೊಬೇಷನರಿ ತಹಶೀಲ್ದಾರ್ ಆಗಿ ಸೇವೆಯಲ್ಲಿದ್ದೇನೆ.

- **ಸ್ಪರ್ಧಾರ್ಥಿಗಳಿಗೆ ಕಿವಿಮಾತೇನು?**

ಸ್ಪರ್ಧಾರ್ಥಿಗಳಲ್ಲಿ ಮುಖ್ಯವಾಗಿ ತಾಳ್ಮೆ ಬೇಕು. ಟೀಕೆ, ಕೊಂಕು ಮಾತುಗಳ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ನಿರಂತರ ಅಧ್ಯಯನ, ಜ್ಞಾನದ ಹಂಚಿಕೆ, ಸಮಾನಮನಸ್ಕರ ಜೊತೆ ಚರ್ಚೆ, ಸಕಾರಾತ್ಮಕ ಚಿಂತನೆ, ಉತ್ತಮ ಆಕರ ಗ್ರಂಥಗಳ ಓದು, ಸ್ವಂತ ನೋಟ್ಸ್ ಇವೆಲ್ಲವನ್ನೂ ಮಾಡಬೇಕು. ಇಂದಿಗೂ ಕೂಡ ನಾನು ಯುಪಿಎಸ್‌ಸಿ ಪರೀಕ್ಷೆಗೆ ಓದುತ್ತಿದ್ದೇನೆ. ಮತ್ತೊಮ್ಮೆ ಕೆಎಎಸ್ ಪರೀಕ್ಷೆ ಬರೆದು ಉನ್ನತ ಹುದ್ದೆ ಪಡೆಯಬೇಕೆಂಬ ಪ್ರಯತ್ನ ಮಾಡುತ್ತಿದ್ದೇನೆ. ನಾನು ಗ್ರಾಮೀಣ ಪ್ರದೇಶ, ಸರ್ಕಾರಿ ಶಾಲೆ, ಬಡತನದ ಹಿನ್ನೆಲೆಯಿಂದ ಬಂದಿದ್ದರೂ ತಂದೆ ವಡಿಕೆಪ್ಪ, ತಾಯಿ ದೇವಮ್ಮರ ಬೆವರಿನ ಹನಿಯ ಸಾರ್ಥಕತೆ, ಗೆಳೆಯರ ಸಹಕಾರ, ಸಹೃದಯರ ನೆರವು, ಸ್ವಯಂ ಅಧ್ಯಯನದಿಂದ ಯಶಸ್ಸು ಪಡೆದೆ. ಎಲ್ಲಾ ಸ್ಪರ್ಧಾರ್ಥಿಗಳಿಗೂ ಯಶಸ್ಸು ಲಭಿಸಲಿ.

ಪ್ರಶ್ನೋತ್ತರ

ಸಾಮಾನ್ಯ ಅಧ್ಯಯನ

31) ಡಾ. ಫಜಲ್ ಅಲಿ ಆಯೋಗವನ್ನು ಕೆಳಗಿನ ಯಾವ ವರ್ಷ ರಚಿಸಲಾಯಿತು?

ಎ) 1949 ಬಿ) 1953
ಸಿ) 1954 ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: (ಬಿ)

ವಿವರಣೆ: ಭಾರತ ಸರ್ಕಾರವು ಫಜಲ್ ಅಲಿಯವರ ಅಧ್ಯಕ್ಷತೆಯಲ್ಲಿ 1953ರಲ್ಲಿ ತ್ರಿಸದಸ್ಯ ಆಯೋಗವನ್ನು ನೇಮಿಸಿತು. ಆಯೋಗದ ಇತರ ಸದಸ್ಯರು ಕೆ.ಎಂ. ಫಣಿಕ್ಕರ್ ಮತ್ತು ಎಚ್.ಎನ್. ಖುಂಜ್ರು. ಈ ಆಯೋಗವು 1955ರಲ್ಲಿ ವರದಿಯನ್ನು ಸಲ್ಲಿಸಿತು.

32) ತಮಿಳುನಾಡಿನಲ್ಲಿ ಯಾರ ನೇತೃತ್ವದಲ್ಲಿ ಉಪ್ಪಿನ ಕಾನೂನನ್ನು ಮುರಿಯುವ ಪಾದಯಾತ್ರೆ ಕೈಗೊಳ್ಳಲಾಯಿತು?

ಎ) ಕೆ. ಕೇಳಪ್ಪನ್ ಬಿ) ಅಬ್ಬಾಸ್ ತ್ಯಾಬ್ಜಿ
ಸಿ) ಸಿ. ರಾಜಗೋಪಾಲಾಚಾರಿ ಡಿ) ಮಹದೇವ ದೇಸಾಯಿ

ಉತ್ತರ: (ಸಿ)

ವಿವರಣೆ: ದೇಶದಾದ್ಯಂತ ನಾಗರಿಕ ಅಸಹಕಾರ ಚಳವಳಿಯನ್ನು ಆರಂಭಿಸಿದ ಮಹಾತ್ಮ ಗಾಂಧೀಜಿಯವರ ದಂಡಿಯಾತ್ರೆಯಿಂದ ಪ್ರೇರಣೆ ಪಡೆದ ಸಿ. ರಾಜಗೋಪಾಲಾಚಾರಿ ನೇತೃತ್ವದ ಸುಮಾರು 100- 150 ಜನರ ಗುಂಪು ತಿರುಚಿರಪಲ್ಲಿಯಿಂದ ವೇದಾರಣ್ಯಂಗೆ ಪಾದಯಾತ್ರೆ ನಡೆಸಿತು.

33) 1946 ರಲ್ಲಿ ಈ ಕೆಳಗಿನ ಯಾರು ಹಣಕಾಸು ಖಾತೆಯೊಂದಿಗೆ ವೈಸ್‌ರಾಯ್ ಕಾರ್ಯಕಾರಿ ಮಂಡಳಿಗೆ ಸೇರಿದರು?

ಎ) ಮೊಹಮ್ಮದ್ ಆಲಿ ಜಿನ್ನಾ ಬಿ) ಲಿಯಾಕತ್ ಆಲಿ ಖಾನ್
ಸಿ) ನವಾಬ್ ಸಲೀಮುಲ್ಲಾ ಡಿ) ಶೌಕತ್ ಆಲಿ

ಉತ್ತರ: (ಬಿ)

ವಿವರಣೆ: ಹಣಕಾಸು ಖಾತೆಯನ್ನು 1946 ರ ಮಧ್ಯಂತರ ಸರ್ಕಾರದಲ್ಲಿ ಲಿಯಾಕತ್ ಅಲಿ ಖಾನ್ ವಹಿಸಿದ್ದರು. ಮಧ್ಯಂತರ ಸರ್ಕಾರದ ಸದಸ್ಯರು, ವೈಸ್‌ರಾಯ್ ಅವರ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿದ್ದರು.

34) ನಮ್ಮ ದೇಹದಲ್ಲಿ ಗ್ಲೈಕೋಜನ್ ಈ ಕೆಳಗಿನ ಯಾವ ಭಾಗದಲ್ಲಿ ಶೇಖರಣೆಯಾಗುತ್ತದೆ?

ಎ) ಯಕೃತ್ತು ಬಿ) ಮೇದೋಜೀರಕಾಂಗ
ಸಿ) ಜಠರ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: (ಎ)

ವಿವರಣೆ: ನಮ್ಮದೇಹದಲ್ಲಿಗ್ಲೂಕೋಸ್‌ಪ್ರಮಾಣಅಧಿಕವಾದಾಗ, ಅದರ ಸ್ವಲ್ಪ ಭಾಗವು ಗ್ಲೈಕೋಜನ್ ಆಗಿ ಪರಿವರ್ತನೆಗೊಳ್ಳುತ್ತದೆ. ಅದು ಸಾಮಾನ್ಯವಾಗಿ ಯಕೃತ್ತು ಮತ್ತು ಸ್ನಾಯುಗಳಲ್ಲಿ ವಿಶೇಷವಾಗಿ ಅಸ್ಥಿ ಸ್ನಾಯುಗಳಲ್ಲಿ ಶೇಖರಣೆಯಾಗುತ್ತದೆ.

35) ಈ ಕೆಳಗಿನ ಯಾವುದು ಎಂಡೋಪ್ಲಾಸ್ಮಿಕ್ ರೆಟಿಕ್ಯುಲಂನ ಕಾರ್ಯವಾಗಿದೆ?

ಎ) ಕೋಶ ವಿಭಜನೆಗೆ ಸಹಾಯ ಮಾಡುತ್ತದೆ.
ಬಿ) ಕೋಶೀಯ ಚಟುವಟಿಕೆಗಳಿಗೆ ಅಗತ್ಯವಿರುವ ರಾಸಾಯನಿಕಗಳನ್ನು ಸ್ರವಿಸುತ್ತದೆ.
ಸಿ) ಮುಪ್ಪಾದ ಜೀವಕೋಶವನ್ನು ನಾಶಪಡಿಸುತ್ತದೆ.
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: (ಡಿ)

ವಿವರಣೆ: ಎಂಡೋಪ್ಲಾಸ್ಮಿಕ್ ರೆಟಿಕ್ಯುಲಂ ಜೀವಕೋಶದ ಒಂದು ಭಾಗವಾಗಿದ್ದು, ಇದು ವಿವಿಧ ವಸ್ತುಗಳನ್ನು ಕೋಶದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಮತ್ತು ಒಂದು ಕೋಶದಿಂದ ಇನ್ನೊಂದು ಕೋಶಕ್ಕೆ ಸಾಗಿಸುತ್ತದೆ.

36) ಶ್ವಾನ್ ಮತ್ತು ಶ್ಲೀಡನ್ ಎಂಬ ವಿಜ್ಞಾನಿಗಳು ಪ್ರತಿಪಾದಿಸಿದ ಸಿದ್ಧಾಂತ ಯಾವುದು?

ಎ) ಉತ್ಕರ್ಷಣ ಸಿದ್ಧಾಂತ ಬಿ) ಕೋಶ ಸಿದ್ಧಾಂತ
ಸಿ) ಪರಮಾಣು ಸಿದ್ಧಾಂತ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: (ಬಿ)

ವಿವರಣೆ: ಎಲ್ಲಾ ಸಸ್ಯಗಳು ಮತ್ತು ಪ್ರಾಣಿಗಳು ಜೀವಕೋಶಗಳಿಂದ ಮಾಡಲ್ಪಟ್ಟಿವೆ ಮತ್ತು ಜೀವಕೋಶವು ಜೀವದ ಮೂಲ ಘಟಕ ಎಂಬ ಕೋಶ ಸಿದ್ಧಾಂತವನ್ನು ಶ್ಲೀಡನ್ ಮತ್ತು ಶ್ವಾನ್ ಎಂಬ ಇಬ್ಬರು ಜೀವ ವಿಜ್ಞಾನಿಗಳು ಪ್ರತಿಪಾದಿಸಿದರು.

37) ಜೀವಕೋಶದಲ್ಲಿ ಯಾವುದನ್ನು 'ಚಲಾವಣೆಯಲ್ಲಿರುವ ಶಕ್ತಿಯ ನಾಣ್ಯ' ಎಂದು ಕರೆಯುವರು?

ಎ) ಎ.ಟಿ.ಪಿ. ಬಿ) ಮೈಟೋಕಾಂಡ್ರಿಯ
ಸಿ) ರೈಬೋಸೋಮ್‌ಗಳು ಡಿ) ಮೇಲಿನ ಯಾವುದೂ ಅಲ್ಲ

ಉತ್ತರ: (ಎ)

ವಿವರಣೆ: ಮೈಟೋಕಾಂಡ್ರಿಯಾ ಜೀವಕೋಶದ ಶಕ್ತಿ ಕೇಂದ್ರವೆಂದು ಹೆಸರಾಗಿದೆ. ಜೀವದ ಉಳಿಯುವಿಕೆಗೆ ಬೇಕಾದ ಅನೇಕ ರಾಸಾಯನಿಕ ಚಟುವಟಿಕೆಗಳನ್ನು ನಿರ್ವಹಿಸಲು ಅಗತ್ಯವಾದ ಶಕ್ತಿಯನ್ನು ಮೈಟೋಕಾಂಡ್ರಿಯಾವು ಎ.ಟಿ.ಪಿ. (ಅಡಿನೋಸಿನ್ ಟ್ರೈ ಫಾಸ್ಫೇಟ್) ಅಣುವಿನ ರೂಪದಲ್ಲಿ ಬಿಡುಗಡೆ ಮಾಡುತ್ತದೆ.

38) ಈ ಕೆಳಗಿನ ಯಾವ ಅಂಗಾಂಶದಲ್ಲಿ ಕೊಬ್ಬು ಸಂಗ್ರಹವಾಗಿರುತ್ತದೆ?

ಎ) ಏರಿಯೋಲಾರ್ ಬಿ) ಸ್ನಾಯು ರಜ್ಜು
ಸಿ) ಅಡಿಪೋಸ್ ಡಿ) ತಂತು ಕಟ್ಟು

ಉತ್ತರ: (ಸಿ)

ವಿವರಣೆ: ಅಡಿಪೋಸ್ ಅಂಗಾಂಶವನ್ನು ಬೊಜ್ಜು ಅಂಗಾಂಶ ಎಂತಲೂ ಕರೆಯುವರು. ಉಪವಾಸ ಸಂದರ್ಭದಲ್ಲಿ, ಇಲ್ಲಿ ಸಂಗ್ರಹವಾಗುವ ಕೊಬ್ಬನ್ನು ದೇಹಕ್ಕೆ ಕೊಡುತ್ತದೆ ಹಾಗೂ ದೇಹದ ಶಾಖವನ್ನು ಹೊರಗೆ ಬಿಡದೆ ಉಷ್ಣ ನಿಯಂತ್ರಕವಾಗಿ ಕೆಲಸ ಮಾಡುತ್ತದೆ.

39) ಈ ಕೆಳಗಿನ ಯಾವ ಇಂಗಾಲದ ಸಂಯುಕ್ತಗಳನ್ನು ಅಗ್ನಿ ಶಾಮಕವಾಗಿ ಬಳಸಲಾಗುತ್ತದೆ?

ಎ) ಕಾರ್ಬನ್ ಡೈಸಲ್ಫೈಡ್ ಬಿ) ಕಾರ್ಬನ್ ಟೆಟ್ರಾಕ್ಲೋರೈಡ್
ಸಿ) ಕ್ಲೋರೊಫಾರ್ಮ್ ಡಿ) ಮಿಥಿಲೀನ್ ಕ್ಲೋರೈಡ್

ಉತ್ತರ: (ಬಿ)

ವಿವರಣೆ: ಕಾರ್ಬನ್ ಟೆಟ್ರಾಕ್ಲೋರೈಡ್ (CCl4) ಸಣ್ಣ ಬೆಂಕಿಯನ್ನು ಎದುರಿಸಲು ಅಗ್ನಿಶಾಮಕಗಳಲ್ಲಿ ಸಾಮಾನ್ಯವಾಗಿ ಬಳಸುವ ದ್ರವವಾಗಿದೆ.

(ಪ್ರಶ್ನೋತ್ತರ ಸಂಯೋಜನೆ: www.iasjnana.com
ಸಂಪರ್ಕಕ್ಕೆ: 9916399276)

ಪ್ರಜಾವಾಣಿ ಉದ್ಯೋಗ ವಾರ್ತೆ

ಸರಕು ಸಾಗಣೆ ನಿಗಮದಲ್ಲಿ ಹುದ್ದೆಗಳು

ಸರಕು ಸಾಗಣೆ ನಿಗಮದಲ್ಲಿ ಮ್ಯಾನೇಜರ್ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- **ಹುದ್ದೆ:** ಎಕ್ಸಿಕ್ಯೂಟಿವ್, ಮ್ಯಾನೇಜರ್
- **ಹುದ್ದೆಗಳ ಸಂಖ್ಯೆ:** 1072
- **ಸ್ಥಳ:** ದೇಶದೆಲ್ಲೆಡೆ
- **ವಿದ್ಯಾರ್ಹತೆ:** ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ 10ನೇ ತರಗತಿ, ಪದವಿ, ಎಂಬಿಎ, ಪಿಜಿಡಿಬಿಎ, ಪಿಜಿಡಿಬಿಎಂ, ಪಿಜಿಡಿಎಂ.
- **ವಯೋಮಿತಿ:** ಕನಿಷ್ಠ 18 ಹಾಗೂ ಗರಿಷ್ಠ 30 ವರ್ಷ. ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ, ಎಸ್‌ಸಿ/ ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ 10 ವರ್ಷ ವಯೋಮಿತಿ ಸಡಿಲಿಕೆ ಇದೆ.
- **ಅರ್ಜಿ ಶುಲ್ಕ:** ಜೂನಿಯರ್ ಮ್ಯಾನೇಜರ್ ₹ 1000, ಎಕ್ಸಿಕ್ಯೂಟಿವ್ ₹ 700, ಎಸ್‌ಸಿ/ ಎಸ್‌ಟಿ, ಅಂಗವಿಕಲರು ಹಾಗೂ ಮಾಜಿ ಯೋಧರಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ.
- **ನೇಮಕಾತಿ ಪ್ರಕ್ರಿಯೆ:** ಕಂಪ್ಯೂಟರ್ ಆಧಾರಿತ ಪರೀಕ್ಷೆ, ದಾಖಲೆ ಪರಿಶೀಲನೆ, ಸಂದರ್ಶನದ ಮೂಲಕ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಮೇ 23, 2021
- **ಹೆಚ್ಚಿನ ಮಾಹಿತಿಗೆ:** https://cdn.digialm.com/EForms/configuredHtml/1258/70799/Instruction.html

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವರ್ಗ ಸಮೀಕರಣಗಳು (ಮುಂದುವರಿದ ಭಾಗ)

ಗಣಿತ

ಎಸ್ಸೆಸ್ಸೆಲ್ಸಿ

ಉದಾಹರಣೆ:

$$x(2x+3) = 2x^2+3x$$
$$x(2x+3) = 2x^2+3x$$
$$2x^2+3x = 2x2+3x$$
$$2x^2-2x^2+3x-3x = 0$$
$$0 = 0$$

ಅಪವರ್ತನ ವಿಧಾನದಿಂದ ಒಂದು ವರ್ಗ ಸಮೀಕರಣವನ್ನು ಬಿಡಿಸುವುದು ಸಾಮಾನ್ಯವಾಗಿ $ax^2+bx + c=0$ ಆದರೆ ಈಗ a ವನ್ನು ಆವರ್ಗ ಸಮೀಕರಣದ ಒಂದು ಮೂಲ ಎನ್ನುತ್ತಾರೆ. $x=a$ ಎಂಬುದು ವರ್ಗ ಸಮೀಕರಣದ ಒಂದು ಪರಿಹಾರವಾಗಿದೆ ಅಥವಾ a ಇದು ಸಮೀಕರಣವನ್ನು ಸರಿದೂಗಿಸುತ್ತದೆ ಎಂದು ನಾವು ಹೇಳುತ್ತೇವೆ.

$ax^2+ bx+ c$ ವರ್ಗ ಬಹುಪದೋಕ್ತಿಯ ಶೂನ್ಯತೆಗಳು ಮತ್ತು $ax^2+bx+c=0$ ವರ್ಗ ಸಮೀಕರಣದ ಮೂಲಗಳು ಒಂದೇ ಆಗಿರುತ್ತದೆ.

ಒಂದೇ ವರ್ಗ ಬಹುಪದೋಕ್ತಿಯು ಗರಿಷ್ಠ ಎರಡು ಶೂನ್ಯತೆಗಳನ್ನು ಹೊಂದಿರಲು ಸಾಧ್ಯ ಎಂಬುದನ್ನು ತಿಳಿದಿದೆ. ಆದ್ದರಿಂದ ಯಾವುದೇ ವರ್ಗ ಸಮೀಕರಣವು ಗರಿಷ್ಠ ಎರಡು ಮೂಲಗಳನ್ನು ಹೊಂದಿರುತ್ತದೆ. ವರ್ಗ ಬಹುಪದೋಕ್ತಿಗಳನ್ನು ಅವುಗಳ ಮಧ್ಯಪದವನ್ನು ವಿಭಜಿಸುವ ವಿಧಾನದಿಂದ ಹಾಗೆ ಅಪವರ್ತಿಸಬಹುದು. ಈ ಜ್ಞಾನವನ್ನು ನಾವು ವರ್ಗ ಸಮೀಕರಣದ ಮೂಲಗಳಲ್ಲಿ ಕಂಡು ಹಿಡಿಯಲು ಉಯೋಗಿಸುತ್ತೇವೆ.

ಉದಾಹರಣೆ: ಅಪವರ್ತನ ವಿಧಾನದಿಂದ $2x^2-5x+3=0$ ಸಮೀಕರಣದ ಮೂಲಗಳನ್ನು ಕಂಡುಹಿಡಿಯಿರಿ.

ಮೊದಲ ಮಧ್ಯಪದ $-5x$ನ್ನು $-2x - 3x$ ಎಂಬುದಾಗಿ ವಿಭಜಿಸೋಣ.

$$2x^2-5x+3 = 2x^2-2x-3x+3 = 0$$
$$= 2x(x-1)-3(x-1) = 0$$
$$= (2x-3)(x-1) = 0$$
$$= 2x-3 = 0 \quad x-1 = 0$$
$$x = \frac{3}{2} \quad x = 1$$

ದತ್ತ ಸಮೀಕರಣದ ಪರಿಹಾರಗಳಾಗಿವೆ.

$2x^2 - 5x+3$ ನ್ನು ಎರಡು ರೇಖಾತ್ಮಕ ಅಪವರ್ತನಗಳಾಗಿ ಅಪವರ್ತಿಸಿ ಪ್ರತಿಯೊಂದು ಅಪವರ್ತನವನ್ನು ಸೊನ್ನೆಗೆ ಸಮೀಕರಿಸುವುದರಿಂದ ನಾವು $2x^2-5x+3=0$ ಯ ವರ್ಗ ಮೂಲಗಳನ್ನು ಕಂಡುಹಿಡಿದಿದ್ದೇವೆ.

ಸೂತ್ರದ ಸಹಾಯದಿಂದ ಒಂದು ವರ್ಗ ಸಮೀಕರಣವನ್ನು ಬಿಡಿಸುವುದು. ವರ್ಗ ಸಮೀಕರಣ $ax^2+bx+c, a\neq o$ಯ ನ್ನು ಪರಿಗಣಿಸಿ

ಸಮೀಕರಣವನ್ನು a ದಿಂದ ಭಾಗಿಸಿದಾಗ

$$x^2+\frac{b}{a}x+c=0$$
$$x^2+\frac{b}{a}x+\left(\frac{b}{2a}\right)^2-\left(\frac{b}{2a}\right)^2+\frac{c}{a}=0$$
$$\left(x+\frac{b}{2a}\right)^2-\frac{b^2}{2a}+\frac{c}{a}=0$$
$$\left(x+{}^{b}/_{2a}\right)^2-\left(x+\frac{b^2-4ac}{4a^2}\right)=0$$
$$\left(x+{}^{b}/_{2a}\right)^2=\frac{b^2-4ac}{2a}$$
$$x=\frac{-b}{2a}\pm\frac{\sqrt{b^2-4ac}}{2a}$$
$$x=\frac{-b\pm\sqrt{b^2-4ac}}{2a}$$

ಹೀಗೆ $b^2-4ac\geq 0$ ಆದರೆ $ax^2+bx+c=0$ ವರ್ಗ ಸಮೀಕರಣದ ಮೂಲಗಳು $\frac{-b\pm\sqrt{b^2-4ac}}{2a}$ ಆಗಿರುತ್ತದೆ.

ಈ ಸೂತ್ರವನ್ನು ವರ್ಗ ಸಮೀಕರಣ ಸೂತ್ರ ಎನ್ನುತ್ತಾರೆ.

ಉದಾಹರಣೆ: ಎರಡು ಕ್ರಮಶಗತ ಬೆಸಧನ ಪೂರ್ಣಾಂಕಗಳ ವರ್ಗ ಮೊತ್ತವು 290 ಆದರೆ ಆ ಪೂರ್ಣಾಂಕಗಳನ್ನು ಕಂಡು ಹಿಡಿಯಿರಿ.

ಪರಿಹಾರ: ಎರಡು ಕ್ರಮಾಗತ ಬೆಸಧನ ಪೂರ್ಣಾಂಕಗಳಲ್ಲಿ ಚಿಕ್ಕ ಪೂರ್ಣಾಂಕವು x ಆಗಿರಲಿ. ಆಗ ಇನ್ನೊಂದು ಪೂರ್ಣಾಂಕವು $x+2$ ಆಗುತ್ತದೆ.

$$x^2+(x+2)^2=290$$
$$x^2+x^2+4x+4=290$$
$$2x^2+4x-286=0$$
$$x^2+2x-143=0$$

ಇದು x- ಚರಾಕ್ಷರವುಳ್ಳ ವರ್ಗ ಸಮೀಕರಣವಾಗಿದೆ. ಇಲ್ಲಿ $a=1$, $b=2$ ಮತ್ತು $c=-143$

$$x=\frac{-b\pm\sqrt{b^2-4ac}}{2a}$$
$$x=\frac{-2\pm\sqrt{2^2-4(1)(-143)}}{2\times 1}$$
$$x=\frac{-2\pm\sqrt{4+572}}{2}$$
$$x=\frac{-2\pm\sqrt{576}}{2}$$
$$x=\frac{-2+24}{2} \quad x=\frac{-2-2}{2}$$
$$x=\frac{22}{2} \quad x=\frac{-26}{2}$$
$$x=11 \quad x=-13$$

(ಮುಂದುವರಿಯುವುದು)

ಒಂದು ಘಟಕ ಕೋಶದಲ್ಲಿನ ಪರಮಾಣುಗಳ ಸಂಖ್ಯೆ


ರಸಾಯನ ಶಾಸ್ತ್ರ

ದ್ವಿತೀಯ ಪಿಯುಸಿ


2) ಎರಡು ಆಯಾಮಗಳಲ್ಲಿ ನಿಕಟ ಜೋಡಣೆ

ಎರಡು ಆಯಾಮದ ನಿಕಟ ಜೋಡಣೆ ರಚನೆಯನ್ನು ನಿಕಟ ಗೋಳಗಳ ಸಾಲುಗಳನ್ನು ಇಟ್ಟು ಸೃಷ್ಟಿಸಬಹುದು. ಇದನ್ನು ಎರಡು ವಿಭಿನ್ನ ರೀತಿಗಳಲ್ಲಿ ಮಾಡಬಹುದು.

- ಎರಡನೇ ಸಾಲಿನಲ್ಲಿ ಗೋಳಗಳು ಮೊದಲ ಸಾಲುಗಳ ಮೇಲೆ ಯಥಾವತ್ತಾಗಿ ಎರಡನೆಯ ಸಾಲನ್ನು ಮೊದಲನೆಯದರೊಂದಿಗೆ ಸಂಪರ್ಕದಲ್ಲಿ ಇಡಬಹುದು. ಎರಡು ಸಾಲುಗಳ ಗೋಳಗಳನ್ನು ಅಡ್ಡವಾಗಿ ಮತ್ತು ಲಂಬವಾಗಿ ಜೋಡಿಸಲಾಗುತ್ತದೆ. ಮೊದಲ ಸಾಲನ್ನು A ವಿಧದ ಸಾಲು ಎಂದು ಕರೆದರೆ, ಎರಡನೇ ಸಾಲು ಯಥಾವತ್ತಾಗಿ ಮೊದಲನೆಯ ರೀತಿಯದ್ದಾಗಿರುತ್ತದೆ. ಅದು ಕೂಡ A ರೀತಿಯದ್ದಾಗಿದೆ. ಈ ಜೋಡಣೆಯಲ್ಲಿ ಪ್ರತಿಗೋಳವು ತನ್ನ ನೆರೆಯ 4 ಗೋಳಗಳೊಂದಿಗೆ ಸಂಪರ್ಕದಲ್ಲಿರುತ್ತದೆ. ಹೀಗಾಗಿ ಎರಡು ಆಯಾಮದಲ್ಲಿನ ಸಮನ್ವಯಿ ಸಂಖ್ಯೆಯು 4 ಆಗಿದೆ. ಈ ನಾಲ್ಕು ನೆರೆಯ ಗೋಳಗಳ ಕೇಂದ್ರಗಳು ಸೇರಿಕೊಂಡರೆ, ಒಂದು ಚೌಕವು ರೂಪಗೊಳ್ಳುತ್ತದೆ. ಆಗ ಈ ಜೋಡಣೆಯನ್ನು ಎರಡು ಆಯಾಮಗಳಲ್ಲಿ ಚೌಕ ನಿಕಟ ಜೋಡಣೆ ಎಂದು ಕರೆಯಲಾಗುತ್ತದೆ.



- ಎರಡನೆಯ ಅಡ್ಡ ಸಾಲನ್ನು ಮೊದಲನೆಯದರ ಮೇಲೆ ಮೊದಲನೆಯ ಸಾಲಿನ ಗೋಳಗಳ ನಡುವಿನ ತಗ್ಗಿನಲ್ಲಿ ಸರಿಯಾಗಿ ಕೂರುವಂತೆ ಸಾಂತರಿಕ ಮಾದರಿಯಲ್ಲಿ ಇಡಬಹುದಾಗಿದೆ. ಮೊದಲ ಸಾಲಿನಲ್ಲಿರುವ ಗೋಳಗಳ ಜೋಡಣೆಯನ್ನು 3 ವಿಧವೆಂದು ಕರೆದರೆ, ಎರಡನೆಯ ಸಾಲು ವಿಭಿನ್ನವಾಗಿರುವುದರಿಂದ ಅದನ್ನು B ವಿಧವೆಂದು ಕರೆಯಬಹುದು. ಮೂರನೆಯ ಸಾಲನ್ನು ಎರಡನೆಯ ಸಾಲಿನ ಪಕ್ಕದಲ್ಲಿ ಇಟ್ಟಾಗ, ಅದರ ಗೋಳಗಳು ಮೊದಲನೆಯ ಪದರದ ಸಾಲಿನಲ್ಲಿ ಜೋಡಿಸಲ್ಪಟ್ಟಿರುತ್ತವೆ. ಆದ್ದರಿಂದ ಈ ಪದರವೂ ಸಹ A ವಿಧವಾಗಿದೆ. ನಾಲ್ಕನೇ ಸಾಲಿನಲ್ಲಿರುವ ಗೋಳಗಳು ಎರಡನೇ ಸಾಲಿನ ರೀತಿಯಲ್ಲಿ ಜೋಡಿಸಲ್ಪಡುತ್ತವೆ. ಆದ್ದರಿಂದ ಈ ಜೋಡಣೆಯು ABAB ರೀತಿಯದ್ದಾಗಿದೆ. ಈ ವ್ಯವಸ್ಥೆಯಲ್ಲಿ ಕಡಿಮೆಮುಕ್ತ ಜಾಗವಿದೆ ಮತ್ತು ಈ ಜೋಡಣೆಯು ಚೌಕ ಜೋಡಣೆಗಿಂತ ಹೆಚ್ಚು ದಕ್ಷತೆ ಉಳ್ಳದ್ದಾಗಿದೆ. ಪ್ರತಿಯೊಂದು ಗೋಳವು ಅದರ ನೆರೆಯ 6 ಗೋಳಗಳೊಂದಿಗೆ ಸಂಪರ್ಕದಲ್ಲಿದೆ. ಮತ್ತು ಎರಡು ಆಯಾಮದಲ್ಲಿ ಸಮನ್ವಯಿ ಸಂಖ್ಯೆ 6 ಆಗಿದೆ.



(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

https://bit.ly/3w00zgB

ದ್ವಿತೀಯ ಪಿಯುಸಿ ರಸಾಯನಶಾಸ್ತ್ರ ವಿಭಾಗದ 'ಐಡಿಯಲ್_ ನಾನ್ ಐಡಿಯಲ್ ಸೊಲ್ಯೂಷನ್ಸ್' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿ ರದ್ದು: ಭಾರತದ ಅಥ್ಲೀಟ್‌ಗಳಿಗೆ ನಿರಾಸೆ

ಸೈನಾ, ಶ್ರೀಕಾಂತ್ ಕನಸು ಭಗ್ನ

ಬೆಂಗಳೂರು (ಪಿಟಿಐ): ಕೋವಿಡ್–19ರಿಂದ ಉಂಟಾಗಿರುವ ವಿಷಮ ಸ್ಥಿತಿಯಿಂದಾಗಿ ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯನ್ನು ರದ್ದುಗೊಳಿಸಲಾಗಿದೆ ಎಂದು ಆಯೋಜಕರು ಬುಧವಾರ ತಿಳಿಸಿದ್ದಾರೆ.

ಟೂರ್ನಿ ರದ್ದುಗೊಳಿಸಲು ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಮತ್ತು ಸಿಂಗಪುರ ಬ್ಯಾಡ್ಮಿಂಟನ್ ಸಂಸ್ಥೆ ಜಂಟಿಯಾಗಿ ತೀರ್ಮಾನಿಸಿದೆ. ಈ ನಿರ್ಧಾರದಿಂದಾಗಿ ಭಾರತದ ಸೈನಾ ನೆಹ್ವಾಲ್ ಮತ್ತು ಕಿದಂಬಿ ಶ್ರೀಕಾಂತ್ ಅವರ ಟೋಕಿಯೊ ಕನಸು ಭಗ್ನಗೊಂಡಿದೆ.

‘ಆಟಗಾರರು, ಟೂರ್ನಿಯ ಅಧಿಕಾರಿಗಳು ಮತ್ತು ಸಿಬ್ಬಂದಿ, ಸ್ಥಳೀಯ ಜನರ ಆರೋಗ್ಯ ಮತ್ತು ಸುರಕ್ಷತೆಯ ದೃಷ್ಟಿಯಿಂದ ಟೂರ್ನಿಯನ್ನು ನಡೆಸದೇ ಇರಲು ನಿರ್ಧರಿಸಲಾಗಿದೆ. ಸುರಕ್ಷತಾ ಕ್ರಮಗಳನ್ನು ಕೈಗೊಂಡು ನಿರಾತಂಕವಾಗಿ ಟೂರ್ನಿ ಆಯೋಜಿಸಲು ಎಲ್ಲ ಬಗೆಯ ಪ್ರಯತ್ನಗಳನ್ನು ನಡೆಸಲಾಗಿತ್ತು. ಆದರೆ ಜಾಗತಿಕ ಮಟ್ಟದಲ್ಲಿ ಕೋವಿಡ್ ಉಂಟುಮಾಡಿರುವ ವಿಷಮ ಸ್ಥಿತಿಯಿಂದಾಗಿ ಉದ್ದೇಶ ಈಡೇರಲಿಲ್ಲ’ ಎಂದು ಬಿಡಬ್ಲ್ಯುಎಫ್ ತಿಳಿಸಿದೆ.

ಟೋಕಿಯೊ ಒಲಿಂಪಿಕ್ಸ್ ಅರ್ಹತೆಗೆ ಸಂಬಂಧಿಸಿ ಶೀಘ್ರದಲ್ಲೇ ಪ್ರಕಟಣೆ ನೀಡಲಾಗುವುದು ಎಂದು ಅದು ವಿವರಿಸಿದೆ.

ಮೇ 25ರಿಂದ ನಡೆಯಬೇಕಾಗಿದ್ದ ಮಲೇಷ್ಯಾ ಓಪನ್ ಟೂರ್ನಿಯನ್ನು ಮೇ ಏಳರಂದು ರದ್ದುಗೊಳಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಒಲಿಂಪಿಕ್ಸ್ ಅರ್ಹತೆಗೆ ಯಾವ ಮಾನದಂಡವನ್ನು ಅನುಸರಿಸಲಾಗುತ್ತದೆ ಎಂದು ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ವಿಶ್ವ ಫೆಡರೇಷನ್ ಅನ್ನು ಪ್ರಶ್ನಿಸಿದೆ.

ಪಿ.ವಿ.ಸಿಂಧು, ಬಿ.ಸಾಯಿ ಪ್ರಣೀತ್, ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿದ್ದಾರೆ. ಸಿಂಗಪುರ ಓಪನ್ ಟೂರ್ನಿ ನಡೆದಿದ್ದರೂ ಭಾರತದ ಆಟಗಾರರಿಗೆ ಪಾಲ್ಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಯಾಕೆಂದರೆ ಸಿಂಗಪುರ ಸರ್ಕಾರವು ಭಾರತದ ವಿಮಾನಗಳನ್ನು ನಿಷೇಧಿಸಿದೆ.



ಸೈನಾ ನೆಹ್ವಾಲ್ –ಎಎಫ್‌ಪಿ ಚಿತ್ರ

ಜಪಾನ್ ಕ್ರೀಡಾಪಟುಗಳಿಗೆ ಲಸಿಕೆ

ಟೋಕಿಯೊ (ಎಎಫ್‌ಪಿ): ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಜಪಾನ್‌ನ ಎಲ್ಲ ಕ್ರೀಡಾಪಟುಗಳಿಗೆ ಕೋವಿಡ್–19 ಸಿಗಲಿದೆ. ಈ ವಿಷಯವನ್ನು ಬುಧವಾರ ವರದಿಯಾಗಿದ್ದು ಒಲಿಂಪಿಕ್ಸ್ ಸ್ಪರ್ಧಾಳುಗಳಿಗೆ ಆದ್ಯತೆಯ ಮೇಲೆ ಲಸಿಕೆ ನೀಡಲಾಗುವುದು ಎಂದು ತಿಳಿಸಲಾಗಿದೆ.

ನಿಕ್ಕಿ ಮತ್ತು ಯೊಮಿವುರಿ ಶಿಂಬುನ್ ದಿನಪತ್ರಿಕೆಗಳಲ್ಲಿ ಈ ಕುರಿತು ಸುದ್ದಿ ಪ್ರಕಟವಾಗಿದೆ. ಆದರೆ ಇದನ್ನು ಸರ್ಕಾರವಾಗಲಿ, ಒಲಿಂಪಿಕ್ಸ್ ಆಯೋಜಕರಾಗಲಿ ಜಪಾನ್ ಒಲಿಂಪಿಕ್ಸ್ ಸಮಿತಿಯಾಗಲಿ ಸ್ಪಷ್ಟಪಡಿಸಲಿಲ್ಲ.

ಪ್ರವಾಸಕ್ಕೆ ಅಡ್ಡಿ: ಚೋಪ್ರಾ ಕನಸಿಗೆ ಧಕ್ಕೆ


ನೀರಜ್ ಚೋಪ್ರಾ

ನವದೆಹಲಿ (ರಾಯಿಟರ್ಸ್): ಭಾರತದ ಜಾವೆಲಿನ್ ಪಟು ನೀರಜ್ ಚೋಪ್ರಾ ಅವರು ಒಲಿಂಪಿಕ್ಸ್ ಕನಸಿನೊಂದಿಗೆ ಕಠಿಣ ಅಭ್ಯಾಸದಲ್ಲಿ ತೊಡಗಿದ್ದಾರೆ. ಆದರೆ ಕೋವಿಡ್–19ರಿಂದಾಗಿ ಉಂಟಾಗಿರುವ ಪ್ರಯಾಣ ನಿರ್ಬಂಧಗಳು ಪದಕ ಗೆಲ್ಲಲು ಅಡ್ಡಿಯಾಗುವ ಆತಂಕದಲ್ಲಿದ್ದಾರೆ ಅವರು.

ಕಳೆದ ವರ್ಷ ದಕ್ಷಿಣ ಆಫ್ರಿಕಾದಲ್ಲಿ ನಡೆದ ಕ್ರೀಡಾಕೂಟದಲ್ಲಿ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಅವರು ಅರ್ಹತೆ ಗಳಿಸಿದ್ದರು. ಆದರೆ 23 ವರ್ಷದ ಚೋಪ್ರಾ ಅವರಿಗೆ ಆನಂತರ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ಸಿಗಲಿಲ್ಲ. ಮೊಣಕೈಗೆ ಗಾಯಗೊಂಡಿದ್ದ ಕಾರಣ 2019ರಲ್ಲೂ ಅವರಿಗೆ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿರಲಿಲ್ಲ.

ಈ ವರ್ಷದ ಮಾರ್ಚ್ ತಿಂಗಳಲ್ಲಿ ಪಟಿಯಾಲದಲ್ಲಿ ನಡೆದಿದ್ದ ದೇಶಿ ಕೂಟವೊಂದರಲ್ಲಿ 88.07 ಮೀಟರ್ ದೂರ ಎಸೆಯುವುದರೊಂದಿಗೆ ಚೋಪ್ರಾ ವೈಯಕ್ತಿಕ ಗರಿಷ್ಠ ಸಾಧನೆ ಮಾಡಿದ್ದರು. ಆದರೆ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳನ್ನು ಎದುರಿಸಲು ಅವರಿ ಅವಕಾಶ ಸಿಗಲಿಲ್ಲ.

ಭಾರತದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವಂತೆ ಅನೇಕ ದೇಶಗಳು ಭಾರತದಿಂದ ತೆರಳುವವರ ಮೇಲೆ ನಿರ್ಬಂಧ ಹೇರಿದ್ದವು. ಕೆಲವು ದೇಶಗಳಲ್ಲಿ ಭಾರತದಿಂದ ತೆರಳುವವರು ಸುದೀರ್ಘ ಕ್ವಾರಂಟೈನ್‌ಗೆ ಒಳಗಾಗಬೇಕಾಗಿದೆ.

‘ತರಬೇತಿಯಂತೆಯೇ ಸ್ಪರ್ಧೆಯೂ ಅತಿ ಮುಖ್ಯ. ನನಗೆ ಸದ್ಯ ಅಂತರರಾಷ್ಟ್ರೀಯ ಕೂಟಗಳಲ್ಲಿ ಪಾಲ್ಗೊಳ್ಳಬೇಕಾದ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿದೆ. ವಿದೇಶದಲ್ಲಿ ಅಭ್ಯಾಸ ನಡೆಸುತ್ತಿದ್ದಾಗ ಸ್ಪರ್ಧೆಗಳಿಗೆ ಕೊರತೆಯೇ ಇರಲಿಲ್ಲ. ಅದರಿಂದ ನಾನೀಗ ವಂಚಿತನಾಗಿದ್ದೇನೆ ಎನಿಸುತ್ತದೆ’ ಎಂದು ವರ್ಚುವಲ್ ಪತ್ರಿಕಾ ಸಂವಾದದಲ್ಲಿ ನೀರಜ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೋಚ್: ಸಂದರ್ಶನಕ್ಕೆ ಹಾಜರಾದ ರಾಮನ್, ಪೊವಾರ್

ನವದೆಹಲಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ಮುಖ್ಯ ಕೋಚ್ ಹುದ್ದೆಗೆ ಹಾಲಿ ತರಬೇತುದಾರ ಡಬ್ಲ್ಯು.ವಿ.ರಾಮನ್ ಸೇರಿದಂತೆ ನಾಲ್ವರು ಆಕಾಂಕ್ಷಿಗಳು ಬುಧವಾರ ಸಂದರ್ಶನ ಎದುರಿಸಿದರು. ಮದನ್ ಲಾಲ್ ನೇತೃತ್ವದ ಕ್ರಿಕೆಟ್ ಸಲಹಾ ಸಮಿತಿಯು (ಸಿಎಸಿ) ಆನ್‌ಲೈನ್ ಮೂಲಕ ಸಂದರ್ಶನವನ್ನು ನಡೆಸಿತು.

ರಾಮನ್ ಜೊತೆಗೆ ರಮೇಶ್ ಪೊವಾರ್, ಅಜಯ್ ರಾತ್ರಾ ಹಾಗೂ ಹೃಷಿಕೇಶ್ ಕಾನಿಟ್ಕರ್ ಸಂದರ್ಶನಕ್ಕೆ ಹಾಜರಾದವರು. ಒಟ್ಟು 35 ಆಕಾಂಕ್ಷಿಗಳ ಪೈಕಿ, ಭಾರತದ ಪರ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಡಿದ ಎಂಟು ಮಂದಿ ಹೆಸರುಗಳ ಕಿರುಪಟ್ಟಿ ಸಿದ್ಧಪಡಿಸಲಾಗಿದೆ. ಇದರಲ್ಲಿ ತಲಾ ನಾಲ್ವರು ಪುರುಷ ಮತ್ತು ಮಹಿಳೆಯರಿದ್ದಾರೆ.

ಮಹಿಳಾ ಅಭ್ಯರ್ಥಿಗಳಾದ ಹೇಮಲತಾ ಕಲಾ, ಮಮತಾ ಮಾಬೆನ್, ದೇವಿಕಾ ಪಾಲ್ಶೀಕರ್ ಹಾಗೂ ಸುಮನ್ ಶರ್ಮಾ ಅವರು ಗುರುವಾರ ಸಂದರ್ಶನ ಎದುರಿಸುವರು.


ಡಬ್ಲ್ಯುಟಿಸಿ ಫೈನಲ್ ನಂತರ ವಾಟ್ಲಿಂಗ್ ನಿವೃತ್ತಿ

ವೆಲಿಂಗ್ಟನ್ (ಪಿಟಿಐ): ನ್ಯೂಜಿಲೆಂಡ್ ತಂಡದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಬಿ.ಜೆ.ವಾಟ್ಲಿಂಗ್ ಮುಂದಿನ ತಿಂಗಳು ಇಂಗ್ಲೆಂಡ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಫೈನಲ್ ನಂತರ ಕ್ರಿಕೆಟ್‌ನ ಎಲ್ಲ ಮಾದರಿಯಿಂದ ನಿವೃತ್ತರಾಗಲಿದ್ದಾರೆ. ಈ ವಿಷಯವನ್ನು ಗುರುವಾರ ಅವರು ಬಹಿರಂಗ ಮಾಡಿದ್ದಾರೆ.

ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಜೂನ್ 18ರಂದು ಸೌತಾಂಪ್ಟನ್‌ನಲ್ಲಿ ಆರಂಭವಾಗಲಿದೆ.

2009ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ ವಾಟ್ಲಿಂಗ್ 73 ಟೆಸ್ಟ್ ಪಂದ್ಯಗಳನ್ನು ಆಡಿದ್ದು ಅನೇಕ ದಾಖಲೆ ನಿರ್ಮಿಸಿದ್ದಾರೆ. ಅವರಿಗೆ ಈಗ 35 ವರ್ಷ ವಯಸ್ಸು.

ಆಸ್ಪತ್ರೆಯಿಂದ ಮನೆಗೆ ಪ್ರಕಾಶ್ ಪಡುಕೋಣೆ



ಬೆಂಗಳೂರು: ದಿಗ್ಗಜ ಬ್ಯಾಡ್ಮಿಂಟನ್ ಆಟಗಾರ ಪ್ರಕಾಶ್ ಪಡುಕೋಣೆ ಅವರು ಕೋವಿಡ್‌ನಿಂದ ಗುಣಮುಖರಾಗಿದ್ದಾರೆ. ಅವರು ಬುಧವಾರ ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ.

ಕೆಲವು ದಿನಗಳ ಹಿಂದೆ ಕೊರೊನಾ ಸೋಂಕಿಗೊಳಗಾಗಿದ್ದ ಅವರು ನಗರದ ಆಸ್ಪತ್ರೆಗೆ ದಾಖಲಾಗಿದ್ದರು. ಇದೀಗ ಅವರು ಸಂಪೂರ್ಣ ಚೇತರಿಸಿಕೊಂಡಿದ್ದಾರೆಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾಜಿ ಕ್ರಿಕೆಟಿಗ ಗ್ರೆಗ್ ಚಾಪೆಲ್ ಅಭಿಪ್ರಾಯ

‘ಈಚೆಗೆ ಬ್ರಿಸ್ಬೇನ್ ಟೆಸ್ಟ್‌ನಲ್ಲಿ ಐತಿಹಾಸಿಕ ಜಯಗಳಿಸಿದ ಭಾರತ ತಂಡವನ್ನು ನೋಡಿದರೆ, ಆ ದೇಶದ ಯುವಶಕ್ತಿಯ ಬಗ್ಗೆ ತಿಳಿಯುತ್ತದೆ’ ಎಂದಿದ್ದಾರೆ ಚಾಪೆಲ್

‘ಆಸ್ಟ್ರೇಲಿಯಾದ ಮಾದರಿ ಅನುಸರಿಸಿದ ದ್ರಾವಿಡ್’

ಸಿಡ್ನಿ (ಪಿಟಿಐ): ಕ್ರಿಕೆಟ್‌ನಲ್ಲಿ ಪ್ರತಿಭಾ ಶೋಧ ಮತ್ತು ಪ್ರೋತ್ಸಾಹಕ್ಕಾಗಿ ಆಸ್ಟ್ರೇಲಿಯಾ ಪಾಲಿಸುತ್ತಿದ್ದ ಮಾದರಿಯನ್ನು ಅನುಸರಿಸಿದ ರಾಹುಲ್ ದ್ರಾವಿಡ್ ಭಾರತದಲ್ಲಿ ಇವತ್ತು ಯುವಪ್ರತಿಭಾವಂತರ ದೊಡ್ಡ ದಂಡನ್ನೇ ಸಿದ್ಧಗೊಳಿಸಿದ್ದಾರೆ ಎಂದು ಮಾಜಿ ಕ್ರಿಕೆಟಿಗ ಗ್ರೆಗ್ ಚಾಪೆಲ್ ಅಭಿಪ್ರಾಯಪಟ್ಟಿದ್ದಾರೆ.



‘ಈ ಹಿಂದೆ ಆಸ್ಟ್ರೇಲಿಯಾದಲ್ಲಿ ಯುವಪ್ರತಿಭೆಗಳ ಶೋಧ, ತರಬೇತಿ ಮತ್ತು ಪ್ರೋತ್ಸಾಹಕ್ಕಾಗಿ ಹಲವು ಉತ್ತಮ ಯೋಜನೆಗಳನ್ನು ಹಾಕಿಕೊಳ್ಳಲಾಗಿತ್ತು. ಅವುಗಳನ್ನು ರಾಹುಲ್ ತಾವು ಕೋಚ್ ಆಗಿದ್ದಾಗ ಅನುಸರಿಸಿಕೊಂಡು ಯಶಸ್ವಿಯಾದರು. ಅದರಿಂದಾಗಿ ಇವತ್ತು ಭಾರತವು ಯುವ ಪ್ರತಿಭೆಗಳ ಶೋಧದ ವಿಷಯದಲ್ಲಿ ಉನ್ನತ ಸ್ಥಾನದಲ್ಲಿದೆ. ಈ ವಿಷಯದಲ್ಲಿ ಭಾರತ ಮತ್ತು ಇಂಗ್ಲೆಂಡ್ ದೇಶಗಳು ಆಸ್ಟ್ರೇಲಿಯಾವನ್ನೂ ಹಿಂದಿಕ್ಕಿವೆ’ ಎಂದು ಅವರು ಕ್ರಿಕೆಟ್ ಡಾಟ್ ಕಾಮ್ ಡಾಟ್ ಎಯು ವೆಬ್‌ಸೈಟ್‌ಗೆ ತಿಳಿಸಿದ್ದಾರೆ.

2016ರಿಂದ 2019ರವರೆಗೆ ಭಾರತ ಎ ಮತ್ತು 19 ವರ್ಷದೊಳಗಿನವರ ಕ್ರಿಕೆಟ್ ತಂಡಗಳಿಗೆ ದ್ರಾವಿಡ್ ಮುಖ್ಯ ಕೋಚ್ ಆಗಿದ್ದರು. ಆ ಸಂದರ್ಭದಲ್ಲಿ ಹಲವಾರು ಯುವಪ್ರತಿಭೆಗಳು ಮುಖ್ಯವಾಹಿನಿಗೆ ಬರಲು ಕಾರಣರಾಗಿದ್ದರು. ಆ ಸಂದರ್ಭದಲ್ಲಿ ದ್ರಾವಿಡ್ ಬಳಿ ತರಬೇತಿಗೊಂಡ ಕೆಲವು ಆಟಗಾರರು ಈಗ ಭಾರತ ತಂಡದಲ್ಲಿ ಆಡುತ್ತಿದ್ದಾರೆ.

‘ಯುವ ಆಟಗಾರರನ್ನು ಬೆಳೆಸುವ ವಿಷಯದಲ್ಲಿ ಆಸ್ಟ್ರೇಲಿಯಾಗೆ ಭವ್ಯವಾದ ಇತಿಹಾಸವಿದೆ. ಆದರೆ, ಈ ವ್ಯವಸ್ಥೆಯು ಕಳೆದ ಕೆಲವು ವರ್ಷಗಳಲ್ಲಿ ಬದಲಾಗಿದೆ. ಪ್ರತಿಭೆ ಇದ್ದರೂ ಕೆಲವು ಯುವ ಆಟಗಾರರು ಅವಕಾಶಗಳ ಕೊರತೆಯಿಂದ ಗೊಂದಲದಲ್ಲಿದ್ದಾರೆ. ಇದು ಒಳ್ಳೆಯದಲ್ಲ. ದೇಶಿ ಕ್ರಿಕೆಟ್ ವಿಭಾಗವು ಬಲಿಷ್ಠಗೊಳ್ಳಬೇಕು’ ಎಂದು ಚಾಪೆಲ್ ಸಲಹೆ ನೀಡಿದ್ದಾರೆ.

ಸಾವಿರ ಪಂದ್ಯಗಳ ಮೈಲುಗಲ್ಲು: ಸೆರೆನಾಗೆ ಸೋಲು

ರೋಮ್ (ಎಎಫ್‌ಪಿ): ಡಬ್ಲ್ಯುಟಿಎ ಟೂರ್ ಇತಿಹಾಸದಲ್ಲಿ 1000 ಪಂದ್ಯ ಆಡಿ ಅಮೆರಿಕದ ಸೆರೆನಾ ವಿಲಿಯಮ್ಸ್ ಬುಧವಾರ ಹೊಸ ಮೈಲುಗಲ್ಲು ಸ್ಥಾಪಿಸಿದರು. ಆದರೆ ಈ ಪಂದ್ಯದಲ್ಲಿ ಸೋಲುವುದರೊಂದಿಗೆ ಇಟಾಲಿಯನ್ ಓಪನ್ ಟೆನಿಸ್ ಟೂರ್ನಿಯಿಂದ ಹೊರಬಿದ್ದರು.

ಟೂರ್ನಿಯ ಎರಡನೇ ಸುತ್ತಿನ ಪಂದ್ಯದಲ್ಲಿ ಅರ್ಜೆಂಟೀನಾದ ನಾದಿಯಾ ಪೊಡೊರೊಸ್ಕಾ ಅವರಿಗೆ ಸೆರೆನಾ 6–7 (6/8), 5-7ರಲ್ಲಿ ಮಣಿದರು.

ಶ್ರೀಲಂಕಾ ಏಕದಿನ ತಂಡಕ್ಕೆ ಕುಶಲ್ ನಾಯಕ

ಕೊಲಂಬೊ (ರಾಯಿಟರ್ಸ್): ಕುಶಲ್ ಪೆರೇರ ಅವರನ್ನು ಶ್ರೀಲಂಕಾ ಏಕದಿನ ಕ್ರಿಕೆಟ್ ತಂಡದ ನಾಯಕನನ್ನಾಗಿ ಬುಧವಾರ ನೇಮಕ ಮಾಡಲಾಗಿದೆ.

ಶ್ರೀಲಂಕಾ ತಂಡವು ಈ ತಿಂಗಳಾಂತ್ಯದಲ್ಲಿ ಬಾಂಗ್ಲಾದೇಶ ಎದುರು ಮೂರು ಪಂದ್ಯಗಳ ಸರಣಿಯನ್ನು ಆಡಲಿದೆ.

ಕೋವಿಡ್: ₹ 11 ಕೋಟಿ ಸಂಗ್ರಹಿಸಿದ ವಿರಾಟ್–ಅನುಷ್ಕಾ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಹಾಗೂ ಅವರ ಪತ್ನಿ, ಬಾಲಿವುಡ್ ನಟಿ ಅನುಷ್ಕಾ ಶರ್ಮಾ ಅವರು ನಡೆಸುತ್ತಿರುವ ಕೋವಿಡ್ ಪರಿಹಾರ ನಿಧಿ ಸಂಗ್ರಹ ಅಭಿಯಾನದಲ್ಲಿ ಸುಮಾರು ₹ 11 ಕೋಟಿ ಸಂಗ್ರಹವಾಗಿದೆ.

ಕೊಹ್ಲಿ ದಂಪತಿ ಆರಂಭದಲ್ಲಿ ₹ 2 ಕೋಟಿ ದೇಣಿಗೆ ನೀಡಿ ಅಭಿಯಾನ ಆರಂಭಿಸಿದ್ದರು. ಇಲ್ಲಿ ಸಂಗ್ರಹವಾದ ಮೊತ್ತವನ್ನು ಆ್ಯಕ್ಟ್ ಗ್ರ್ಯಾಂಟ್ಸ್ ಸಂಸ್ಥೆಗೆ ನೀಡಲಾಗುತ್ತದೆ. ಒಂದು ವಾರದ ಅವಧಿಗೆ ನಡೆಯುತ್ತಿರುವ ಅಭಿಯಾನಕ್ಕೆ ಇನ್ನೂ ಎರಡು ದಿನ ಬಾಕಿ ಇದೆ. ಒಟ್ಟು ₹ 7 ಕೋಟಿ ಸಂಗ್ರಹಿಸುವ ಗುರಿ ಇಟ್ಟುಕೊಳ್ಳಲಾಗಿತ್ತು. ಆದರೆ ಆ ಮೊತ್ತವನ್ನು ಮೀರಿ ಅಭಿಯಾನ ಮುಂದುವರಿದಿದೆ.

ಇಸ್ಪೋರ್ಟ್ಸ್ ಸಂಸ್ಥೆಯಾದ ಎಂಪಿಎಲ್ ಕೂಡ ಕೋವಿಡ್ ಪರಿಹಾರ ನಿಧಿಗೆ ₹ 5 ಕೋಟಿ ನೀಡಿದೆ.



ವಿರಾಟ್ ಕೊಹ್ಲಿ ಹಾಗೂ ಅನುಷ್ಕಾ ಶರ್ಮಾ– ಪಿಟಿಐ ಚಿತ್ರ

ಆರ್.ಪಿ.ಸಿಂಗ್‌ಗೆ ಪಿತೃವಿಯೋಗ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ರುದ್ರ ಪ್ರತಾಪ್ ಸಿಂಗ್ ಅವರ ತಂದೆ ಶಿವಪ್ರಸಾದ್ ಸಿಂಗ್ ಅವರು ಕೋವಿಡ್‌ನಿಂದಾಗಿ ಬುಧವಾರ ಮೃತಪಟ್ಟಿದ್ದಾರೆ.

ಉತ್ತರ ಪ್ರದೇಶದ ಎಡಗೈ ವೇಗಿ, ರುದ್ರ ಪ್ರತಾಪ್ ಸಿಂಗ್ (ಆರ್.ಪಿ.ಸಿಂಗ್) ಅವರು ಟ್ವಿಟರ್ ಮೂಲಕ ಈ ವಿಷಯ ತಿಳಿಸಿದ್ದಾರೆ. ಆರ್.ಪಿ.ಸಿಂಗ್, ಭಾರತ ತಂಡದ ಪರ 14 ಟೆಸ್ಟ್, 58 ಏಕದಿನ ಹಾಗೂ 10 ಟ್ವೆಂಟಿ 20 ಪಂದ್ಯಗಳನ್ನು ಆಡಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,851
ಇಂದಿನ ಅಂತ್ಯ	14,697
▼	154
ದಿನದ ಕನಿಷ್ಠ	14,650

ವಿನಿಮಯ ದರ

$ ಡಾಲರ್	73.42
£ ಪೌಂಡ್	103.8
€ ಯುರೊ	89.12
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹470

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1475 (1465)
ಸೂರ್ಯಕಾಂತಿ (ರಿಫೈನ್ಡ್)	₹1720 (1720)
ಪಾಮೋಲಿನ್	₹1370(1360)

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹221-353
ದ್ವಿತಳಿ (ಬಿ.ವಿ)	₹258-449

ಟಿಟಿ ಆಟಗಾರ ಚಂದ್ರಶೇಖರ್ ಇನ್ನಿಲ್ಲ

ಚೆನ್ನೈ (ಪಿಟಿಐ): ಅರ್ಜುನ ಪ್ರಶಸ್ತಿ ಪುರಸ್ಕೃತ, ಮಾಜಿ ಟೇಬಲ್ ಟೆನಿಸ್ ಆಟಗಾರ ವಿ. ಚಂದ್ರಶೇಖರ್ (64) ಅವರು ಬುಧವಾರ ಕೋವಿಡ್‌ನಿಂದಾಗಿ ಮೃತಪಟ್ಟರು. ಅವರ ಕುಟುಂಬದ ಮೂಲಗಳು ಈ ವಿಷಯ ತಿಳಿಸಿವೆ. ಚಂದ್ರಶೇಖರ್ ಅವರಿಗೆ ಪತ್ನಿ ಮತ್ತು ಪುತ್ರ ಇದ್ದಾರೆ.

ಚಂದ್ರ ಎಂದೇ ಹೆಸರಾಗಿದ್ದ, ಮೂರು ಬಾರಿಯ ರಾಷ್ಟ್ರೀಯ ಚಾಂಪಿಯನ್ ಚಂದ್ರಶೇಖರ್, ತಮಿಳುನಾಡು ಟೇಬಲ್ ಟೆನಿಸ್ ಸಂಸ್ಥೆಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಚೆನ್ನೈನಲ್ಲಿ ಜನಿಸಿದ್ದ ಚಂದ್ರಶೇಖರ್, 1982ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಸೆಮಿಫೈನಲ್ ತಲುಪಿದ್ದರು. ಕೋಚ್ ಆಗಿಯೂ ಯಶಸ್ಸು ಗಳಿಸಿದ್ದರು.


ವಿ. ಚಂದ್ರಶೇಖರ್

1984ರಲ್ಲಿ ಮೊಣಕಾಲು ಶಸ್ತ್ರಚಿಕಿತ್ಸೆಗೆ ಒಳಗಾದ ಅವರ ವೃತ್ತಿಜೀವನ ಅರ್ಧದಲ್ಲೇ ಮೊಟಕುಗೊಂಡಿತು. ಈ ಶಸ್ತ್ರಚಿಕಿತ್ಸೆಯಿಂದಾಗಿ ಅವರು ನಡೆದಾಡಲು ಕಷ್ಟಪಡಬೇಕಾಯಿತು. ಮಾತು ಹಾಗೂ ದೃಷ್ಟಿಯನ್ನೂ ಕಳೆದುಕೊಂಡಿದ್ದರು. ಕಷ್ಟಪಟ್ಟು ಚೇತರಿಸಿಕೊಂಡರು. ಬಳಿಕ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ಆಸ್ಪತ್ರೆಯ ವಿರುದ್ಧ ಕಾನೂನು ಹೋರಾಟ ನಡೆಸಿ ತಮ್ಮ ಪರವಾಗಿ ತೀರ್ಪು ಪಡೆದರು.

ಅರ್ಥ ಶಾಸ್ತ್ರ ಹಾಗೂ ಕಾನೂನು ಪದವಿಯನ್ನು ಚಿನ್ನದ ಪದಕದೊಂದಿಗೆ ಪೂರ್ಣಗೊಳಿಸಿದ್ದರು.

ಮುಂಬೈ ಧಾರಣೆ

ಶೇಂಗಾ

12-5-2021

ಜಾವಾ 70/80(ಹೊಸ)	9850-9900
ಜಾವಾ 80/90(ಹೊಸ)	9350-9100
ದಪ್ಪ ಮಧ್ಯಪ್ರದೇಶ(ಹೊಸ)	10150-10200
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1440 (1430)
ಪಾಮ್ ವಾರದ ಡೆಲಿವರಿ	1368 (1358)
ಸೂರ್ಯಕಾಂತಿ ಎಣ್ಣೆ ಕಚ್ಚಾ	1660 (1660)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,700 (47,400)
ಬೆಳ್ಳಿ ಕೆ.ಜಿ 71,200 (70,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕಬಡ್ಡಿಪಟು ತೇಜಸ್ವಿನಿ ಪತಿ ನಿಧನ

ಬೆಂಗಳೂರು: ಕಬಡ್ಡಿ ಪಟು, ಭಾರತ ಮಹಿಳಾ ತಂಡದ ಮಾಜಿ ನಾಯಕಿ ತೇಜಸ್ವಿನಿ ಬಾಯಿ ಅವರ ಪತಿ ನವೀನ್ (35) ಅವರು ಕೊರೊನಾದಿಂದ ಮಂಗಳವಾರ ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ. ತೇಜಸ್ವಿನಿ ಅವರಿಗೂ ಕೋವಿಡ್ ಬಾಧಿಸಿದ್ದು ಮನೆಯಲ್ಲಿ ಕ್ವಾರಂಟೈನ್‌ನಲ್ಲಿದ್ದಾರೆ ಎಂದು ವಿಜಯನಗರ ಸ್ಪೋರ್ಟ್ಸ್ ಕ್ಲಬ್ ಕೋಚ್ ಎ.ನಾಗರಾಜ್ ತಿಳಿಸಿದ್ದಾರೆ.

ತೇಜಸ್ವಿನಿ ಅವರು ರೈಲ್ವೆ ಉದ್ಯೋಗಿಯಾಗಿದ್ದು ನವೀನ್ ಉದ್ಯಮಿಯಾಗಿದ್ದರು. ಎರಡು ವರ್ಷಗಳ ಹಿಂದೆಯಷ್ಟೇ ವಿವಾಹವಾಗಿತ್ತು. ದಂಪತಿಗೆ ಆರು ತಿಂಗಳ ಮಗು ಇದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಸಕಲೇಶಪುರ ಏಲಕ್ಕಿ

ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	340

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	10,250	10,375	150.10ಸೆಂಟ್ಸ್
ಎಸಿ	---	3900	4025	
ಆರ್‌ಪಿ	---	5050	5200	ಲಂಡನ್
ಆರ್‌ಸಿ	---	7900	3015	1531 ಡಾಲರ್ಸ್